ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ



₹ 14

ನವೆಂಬರ್ 2017

PACKAGE TOURS 2017/18

Hotel Room Accom. & South Indian Veg. Food

Mini Andhra : 05 Days
Dec 07

Mantralaya, Srishaila, Mahanandi, Ahobilam (Nava Narasimha)

Rajasthan Special : 16 Days
Feb 08

Jaipur, Pushkar, Ajmer, Chittaurgarh, Udaipur, Eklingji, Nathadwar, Mt. Abu, Jodhpur, Jaisalmer, Bikaner

North East India : 16 Days
Nov 13 Mar 13

Guwahati, Kamakhya, Kaziranga, Shillong, Cherrapunjee, Dawki, Bomdilla, Sela Pass, Tawang, Dirung, Bhalukpong

Dwarka Jyothirlinga : 24 Days
Jan 27

Pushkar, Ajmer, Nathadwar, Kankroli, Eklingji, Udaipur, Mt. Abu, Mathru Gaya, Dwarka, Bet Dwarka, Nagesham, Mul Dwarka, Porbandar, Veraval, Somnath, Dakor, Ahmedabad, Ujjain, Omkareshwar, Parli, Aurangabad, Ellora, Grishneshwar, Nasik, Triyambak, Shanisinganapur, Shirdi, Bhimashankar.

Andhra Special : 12 Days
Jan 16

Bhadrachalam, Annavaram, Simhachalam, Borra Caves, Draksharam, Vasavi Penugonda, Dwaraka Tirumala, Mangalagiri, Vijayawada

Kashi Gaya Chitrakoot : 14 Days
Feb 18

Allahabad, Gaya, Bodhgaya, Kashi, Saranath, Ayodhya, Naimisharanya, Chitrakoot

SRI LANKA : 7 DAYS : During December



Shri Hansaa Travels

Recognised by Department of Tourism, Govt. of Karnataka

✉ : 640, 40th Cross, 8th Block, Jayanagar, Bangalore - 70

: hansaatravels@gmail.com : hansaatravels.com

☎ 080-26643276 / 26543891 / 9341215612 / 9341415612


ವಿವೇಕಪ್ರಭ

ನವೆಂಬರ್-2017

ಸಂಪುಟ 18 ಸಂಚಿಕೆ 11









ವಿಶೇಷ ಲೇಖನ



ಧಾರಾವಾಹಿ

ವ್ಯವಸ್ಥಾಪಕ ಸಂಪಾದಕರು

ಸ್ವಾಮಿ ಆತ್ಮಜ್ಞಾನಂದ

ಸಂಪಾದಕರು

ಸ್ವಾಮಿ ಜ್ಞಾನಯೋಗಾನಂದ

ನೆರವು:

ಆರ್. ಎಸ್. ಪೂರ್ಣಾನಂದ

ಡಾ. ಕೆ. ಎಲ್. ಪ್ರಸನ್ನಾಕ್ಷೀ

ಡಾ. ಎಚ್. ಪಾಂಡುರಂಗ ವಿಠಲ

ಅಕ್ಷರ ಜೋಡಣೆ

ಶ್ರೀರಾಮಕೃಷ್ಣ ಆಶ್ರಮ, ಮೈಸೂರು

ಮುದ್ರಣ

ಮಯೂರ್ ಗ್ರಾಫಿಕ್ಸ್, ಬೆಂಗಳೂರು

ಮುಖಪುಟ:

ಧವಳ ಭೋರ್ಗರೆತ

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– ಸ್ವಾಮಿ ವಿವೇಕಾನಂದ

E-mail: mysuru.vivekaprabha@rkmm.org

Website: www.vivekaprabha.net

ಫೋನ್ : 9481533505

ಚಂದಾ ವಿವರ

ಬಿಡಿ ಪ್ರತಿ : ₹ 14

ವಾರ್ಷಿಕ : ₹ 140

ಮೂರು ವರ್ಷ : ₹ 375

ಆಜೀವ (25 ವರ್ಷ) : ₹ 3,000

ಪೋಷಕರು : ₹ 5,000 ಅಥವಾ ಹೆಚ್ಚು.

ವಿದೇಶಗಳಿಗೆ : (ಏರ್‌ಮೇಲ್)

ವಾರ್ಷಿಕ : \$ 20; ಮೂರು ವರ್ಷ : \$ 60

ಆಜೀವ (25ವರ್ಷ) : \$ 300

ಪೋಷಕರು : \$ 600 ಅಥವಾ ಹೆಚ್ಚು.

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳು ಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.



ಕನ್ನಡ ತಾಯಿ

ಚೆಲುವೆಯರ, ಚೆನ್ನಿಗರ, ಹಿರಿಯ ತಾಯ್ ಮಕ್ಕಳಿರ, ಒಡಹುಟ್ಟಿದವರಾ,
ಒಸಗೆನುಡಿ ಕೇಳಿದಿರ, ತಾಳಿದರ ಎದೆಯಲ್ಲಿ, ತಾಳಿ ಬಾಳುವಿರಾ,
ನಾಡು ನುಡಿ ನಡೆಗಳನು ಮುನ್ನಡೆಗೆ ನಡಸುತ್ತ, ಮುಂದೆ ಸಾಗುವಿರಾ?
ಭಾರತದ, ಲೋಕದಾ ಮಕ್ಕಳಲಿ ಹಿರಿದಾಗಿ ತೂಕ ತೂಗುವಿರಾ?
ಬನ್ನಿ, ಓ ಮಕ್ಕಳಿರ,
ಒಕ್ಕೊರಲಲೆಲ್ಲರೂ ಕೂಗಿ ಈ ಒಕ್ಕೂಗ — ಈ ಹಿರಿಯ ಕೂಗ —
'ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಬಾಳ್ಗೆ —
ಕನ್ನಡದ ತಾಯ್ ಗೆಲ್ಗೆ, ಬಾಳ್ಗೆ.'

— ಬಿ.ಎಂ.ಶ್ರೀಕಂಠಯ್ಯ

ಕನ್ನಡದ ನೆಲದ ಪುಲ್ಲೆನಗೆ ಪಾವನತುಲಸಿ!
ಕನ್ನಡದ ನೆಲದ ನೀರ್ವೊನಲೆನಗೆ ದೇವನದಿ!
ಕನ್ನಡದ ನೆಲದ ಕಲ್ಲೆನಗೆ ಶಾಲಗ್ರಾಮ ಶಿಲೆ! **ಕನ್ನಡಂ ದೈವಮೈ** !
ಕನ್ನಡದ ಶಬ್ದಮೆನಗೋಂಕಾರಮೀಯೆನ್ನ
ಕನ್ನಡದ ನುಡಿಯೆ ಗಾಯತ್ರಿಯದ್ಭುತಮಂತ್ರ -
ಮಿನ್ನಾವುದೈ ಪೆರತು ಕನ್ನಡದ ಸೇವೆಯಿಂದಧಿಕಮೀ ಜಗದೊಳೆನಗೆ?

— ಸಾಲಿ ರಾಮಚಂದ್ರ ರಾಯ

ಸೂಕ್ತಿಪ್ರಭ

ಜಪಾನೀ ಸೂಕ್ತಿಗಳು

ಒಂದು ವೇಳೆ ನಮ್ಮ ಕಣ್ಣುಗಳು ಕೊಳೆಯನ್ನು ನೋಡಬಹುದು; ಆದರೆ ನಮ್ಮ ಮನಸ್ಸು ಕೊಳೆಯನ್ನು ನೋಡದಿರಲಿ. ನಮ್ಮ ಕಿವಿಗಳು ಮಲಿನವಾದುದನ್ನು ಕೇಳಬಹುದು, ಆದರೆ ನಮ್ಮ ಮನಸ್ಸು ಮಲಿನವಾದುದನ್ನು ಕೇಳದಿರಲಿ.

-ಶಿಂಟೋ ವಿಚಾರಧಾರೆ

ವ್ಯಕ್ತಿಗಳ ಮನಸ್ಸು ಮಲಿನಗೊಂಡರೆ ಅವರಿರುವ ನಾಡೇ ಮಲಿನವಾಗುವುದು. ಅವರ ಮನಸ್ಸು ಶುದ್ಧವಾಗಿದ್ದರೆ, ಅವರ ನಾಡೂ ಶುದ್ಧವಾಗಿರುವುದು. ತಮ್ಮಷ್ಟಕ್ಕೆ ತಾವೇ ಶುದ್ಧ ಅಥವಾ ಅಶುದ್ಧವಾದ ನಾಡು ಎಂಬುದೇ ಇಲ್ಲ. ಅಲ್ಲಿರುವವರ ಮನಸ್ಸನ್ನೇ ಎಲ್ಲವೂ ಅವಲಂಬಿಸಿದೆ.

-ನಿಚಿರೆನ್ ದಾಯಿಶೊನಿನ್

ಪ್ರೀತಿಯಿಂದ ನಿರ್ಮಿಸಿದ್ದೇ ಆದರೆ, ಸಾಮಾನ್ಯ ದಿನಬಳಕೆಯ ವಸ್ತುವೂ ಸೌಂದರ್ಯದಿಂದ ತುಂಬಿ ತುಳುಕಾಡುವುದು.

-ಸೊಯೆತ್ಸು ಯನಗಿ

ಭಾರೀ ಸಂದೇಹದ ತಳದಲ್ಲಿ ಮಹಾನ್ ಎಚ್ಚರವೊಂದು ಅಡಗಿರುತ್ತದೆ. ಸಂಪೂರ್ಣವಾಗಿ ಸಂದೇಹಪಟ್ಟರೆ, ನೀವು ಸಂಪೂರ್ಣವಾಗಿ ಎಚ್ಚರಗೊಳ್ಳುವಿರಿ.

-ಹಾಕುಯಿನ್ ಎಕಾಕು

ಒಂದೇ ಒಂದು ಅನುಕಂಪದ ಮಾತು ಕೂಡ ಚಳಿಗಾಲದ ಮೂರು ತಿಂಗಳನ್ನು ಬೆಚ್ಚಗಾಗಿಸುವುದು.

-ಜಪಾನೀ ಗಾದೆ

ಜೀವನ ಮತ್ತು ಮರಣ ಎರಡೂ ಬಹಳ ಮುಖ್ಯವಾದ ಸಂಗತಿಗಳು. ಕಾಲ ವೇಗವಾಗಿ ಕಳೆದುಹೋಗುತ್ತಿದೆ; ಅದಕ್ಕೆ ತಕ್ಕಂತೆ ಅವಕಾಶಗಳೂ ಕಳೆದುಹೋಗುವವು. ಪ್ರತಿಯೊಬ್ಬರೂ ಜ್ಞಾನಕ್ಕಾಗಿ ಪ್ರಯತ್ನಿಸಬೇಕು. ಎಚ್ಚರಗೊಳ್ಳಿ, ಕಾಳಜಿ ಹೊಂದಿ, ಜೀವನವನ್ನು ವ್ಯರ್ಥವಾಗಿಸಬೇಡಿ.

-ದೋಜೆನ್

ಭಾವಸಂಗಮ

–ಭಕ್ತ ಸಮಾಗಮ '18

26, 27, 28 ಜನವರಿ 2018

ರಾಮಕೃಷ್ಣ ಮಠ

ಮಂಗಳಾದೇವಿ, ಮಂಗಳೂರು

ಸ್ವಾಮಿ ವಿವೇಕಾನಂದರು ಶಿಕಾಗೋದ ವಿಶ್ವಧರ್ಮಸಮ್ಮೇಳನದಲ್ಲಿ ಮಾಡಿದ ಐತಿಹಾಸಿಕ ಉಪನ್ಯಾಸಕ್ಕೀಗ ನೂರಿಪ್ಪತ್ತೈದು ವರ್ಷಗಳು. ಅಂದು ಅವರು ಸಾರಿದ ಸಂದೇಶ: "ಸ್ವೀಕಾರವೇ ಹೊರತು ವಿನಾಶವಲ್ಲ; ಸಮನ್ವಯ ಮತ್ತು ಶಾಂತಿಗಳೇ ಹೊರತು ವೈಮನಸ್ಯವಲ್ಲ." ಸ್ವಾಮಿ ವಿವೇಕಾನಂದರ ಈ ಸಂದೇಶಕ್ಕೆ ಒಂದು ವ್ಯಾಪಕವಾದ ನೆಲೆಗಟ್ಟಿದೆ. ಒಂದು ಕಡೆ ಅದೊಂದು ವಿಶ್ವವಿಶಾಲ ದರ್ಶನ; ಇನ್ನೊಂದು ಕಡೆ ಸರ್ವಸ್ವೀಕಾರದ ಅನುಷ್ಠಾನ. ಇದರ ತಾತ್ತ್ವಿಕತೆಯ ಹಲವು ಮಜಲುಗಳನ್ನು ಅರಿಯಬೇಕಾದರೆ ನಾವು ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ, ಶ್ರೀಮಾತೆ ಶಾರದಾದೇವಿಯವರ ಹಾಗೂ ಸ್ವಯಂ ಸ್ವಾಮಿ ವಿವೇಕಾನಂದರ ಜೀವನ-ಸಂದೇಶಗಳ ಕಡೆಗೆ ಮುಖ ಮಾಡಬೇಕು. ಈ ದಿವ್ಯತ್ರಯರು ಬದುಕಿದ ಬಗೆ ಎಲ್ಲ ವೇದಾಂತಗಳಿಗೆ ಜೀವಂತ ಭಾಷ್ಯ; ಹಲವು ಆಯಾಮಗಳ ಸಮನ್ವಯ-ಸ್ವೀಕಾರಗಳಿಗೆ ಹಿಡಿದ ಕನ್ನಡಿ. ಇದು ಎಲ್ಲ ಕಾಲಕ್ಕೆ ಬೇಕಾದ ಬೆಳಕು. ಹೀಗಾಗಿ ಈ ಸಲದ ಭಾವಸಂಗಮ ಈ 'ಸಮನ್ವಯ-ಸ್ವೀಕಾರ'ಗಳನ್ನು ಪ್ರಧಾನ ಪರಿಕಲ್ಪನೆಯಾಗಿ ಹೊಂದಿದೆ. ದಿವ್ಯತ್ರಯರ ಸಂದೇಶದ ಬೆಳಕಿನಲ್ಲಿ ಹಾಗೂ ಭಾರತೀಯ ಪರಂಪರೆಯ ಹಿನ್ನೆಲೆಯಲ್ಲಿ ಹಲವು ಗೋಷ್ಠಿಗಳಲ್ಲಿ ಈ ತಾತ್ತ್ವಿಕತೆಯ ಹಲವು ಆಯಾಮಗಳ ಪರಿಶೀಲನೆ ನಡೆಯಲಿದೆ. ಜೊತೆಗೆ ಸಂವಾದ, ಪ್ರಶ್ನೋತ್ತರ, ಭಕ್ತಿಗೀತೆಗಳು, ಹರಿಕಥೆ, ನಿರ್ದೇಶಿತ ಧ್ಯಾನ, ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಸಮ್ಮೇಳನದ ಭಾಗವಾಗಿರುತ್ತವೆ. ಇಂತಹ ಅಪೂರ್ವ ಭಕ್ತಸಮಾಗಮದಲ್ಲಿ ಭಾಗವಹಿಸುವ, ಕಾರ್ಯಕ್ರಮಗಳನ್ನು ಆನಂದಿಸಿ ಆಸ್ವಾದಿಸುವ ಸದವಕಾಶ ನಿಮ್ಮದಾಗಲಿ.

ಕಡಲ ಕಿನಾರೆ ಮಂಗಳೂರಿಗೆ ಹೃತ್ಪೂರ್ವಕ ಸ್ವಾಗತ

ಪರಿಕಲ್ಪನೆ

ಸಮನ್ವಯ ಮತ್ತು ಸ್ವೀಕಾರ

26 ಜನವರಿ 2018

ಗೋಷ್ಠಿ 1

ಶ್ರೀರಾಮಕೃಷ್ಣರಲ್ಲಿ ಭಾವಸಮನ್ವಯ
ದೇವ-ಮಾನುಷ ಸಮನ್ವಯ
ಸಾಧಕ-ಗುರು ಸಮನ್ವಯ
ಗಾರ್ಹಸ್ಥ್ಯ-ಸಂನ್ಯಾಸ ಸಮನ್ವಯ

ಗೋಷ್ಠಿ 2

ಶ್ರೀರಾಮಕೃಷ್ಣರ ತತ್ತ್ವಸಮನ್ವಯ
ಭಕ್ತಿ-ಜ್ಞಾನ ಸಮನ್ವಯ
ಶಾಸ್ತ್ರ-ಅನುಭವಗಳ ಸಮನ್ವಯ
ಏಕ-ಅನೇಕ ಸಮನ್ವಯ

27 ಜನವರಿ 2018

ಗೋಷ್ಠಿ 3

ಶ್ರೀಮಾತೆ ಶಾರದಾದೇವಿಯವರಲ್ಲಿ ಸರ್ವಸ್ವೀಕಾರದ ಸ್ವರೂಪ
ಶ್ರೀಮಾತೆಯವರಲ್ಲಿ ಮಾನವತೆ-ದೈವಿಕತೆಗಳ ಸಮ್ಮಿಲನ
ಶ್ರೀಮಾತೆಯವರ ಸಂದೇಶ: ವ್ಯಾಪಕತೆಯ ನೆಲೆಗಟ್ಟು
ಶ್ರೀಮಾತೆಯವರಲ್ಲಿ ಸಂಪ್ರದಾಯ-ಆಧುನಿಕತೆಗಳ ಸಂಗಮ

ಗೋಷ್ಠಿ 4

ವಿವೇಕಾನಂದರಲ್ಲಿ ಸಮನ್ವಯದ ನೆಲೆಗಳು 1
ವಿಶ್ವಧರ್ಮದ ಸ್ವರೂಪ
ವ್ಯಷ್ಟಿ-ಸಮಷ್ಟಿಗಳ ಸಮನ್ವಯ
ಯೋಗಗಳ ಸಮನ್ವಯ

ಗೋಷ್ಠಿ 5

ವಿವೇಕಾನಂದರಲ್ಲಿ ಸಮನ್ವಯದ ನೆಲೆಗಳು 2
ವಿಜ್ಞಾನ ಮತ್ತು ಅಧ್ಯಾತ್ಮ
ಪೌರ್ವಾತ್ಯ ಮತ್ತು ಪಾಶ್ಚಾತ್ಯ
ಪ್ರಾಚೀನ ಮತ್ತು ಆಧುನಿಕ

28 ಜನವರಿ 2018


ಗೋಷ್ಠಿ 6

ಭಾರತೀಯ ಪರಂಪರೆಯಲ್ಲಿ ಸಮನ್ವಯದೃಷ್ಟಿ
ಉಪನಿಷತ್ತುಗಳಲ್ಲಿ ಸಮನ್ವಯದೃಷ್ಟಿ
ಭಗವದ್ಗೀತೆಯಲ್ಲಿ ಸಮನ್ವಯದೃಷ್ಟಿ
ರಾಮಾಯಣ-ಮಹಾಭಾರತಗಳಲ್ಲಿ ಸಮನ್ವಯದೃಷ್ಟಿ

ಪ್ರವೇಶ ಶುಲ್ಕ

ವಸತಿ ಸಹಿತ : ₹. 1000/-
ವಸತಿ ರಹಿತ : ₹. 500/-

ಸಂಪರ್ಕ : 9449288200



- ಪ್ರತಿನಿಧಿಗಳಾಗಬಯಸುವವರು ದೂರವಾಣಿ ಮೂಲಕ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು ಹಾಗೂ ಕಾರ್ಯಕ್ರಮದ ದಿನದಂದು ಶುಲ್ಕವನ್ನು ಸಂದಾಯ ಮಾಡಬಹುದು.(ಮೊದಲೇ ಡಿ.ಡಿ./ಚೆಕ್ ಕಳಿಸಬೇಕಾಗಿಲ್ಲ)
- ಕಾರ್ಯಕ್ರಮದ ಮೂರು ದಿನಗಳ ಕಾಲ ಸರಳ ಊಟ-ವಸತಿ ಸೌಕರ್ಯವನ್ನು ಹಾಗೂ ವಸತಿನಿಲಯದಿಂದ ಹೋಗಿಬರಲು ವಾಹನದ ವ್ಯವಸ್ಥೆಯನ್ನೂ ಒದಗಿಸಲಾಗುವುದು.

RAMAKRISHNA MISSION ASHRAMA
FORT, BELGAUM - 590 016 KARNATAKA
Ph: (0831) 2432789, 2430789
E-mail:belgaum@rkmm.org

ಒಂದು ಲಕ್ಷ ಜಪಯಜ್ಞ

ಶ್ರೀರಾಮಕೃಷ್ಣರ ಭಕ್ತರಿಗೆ ಸಾಧನೆಗೆ ಒಂದು ಸದವಕಾಶ

ಆತ್ಮೀಯ ಭಕ್ತರೆ,

ಶ್ರೀರಾಮಕೃಷ್ಣರು ಭಗವತ್‌ಸಾಕ್ಷಾತ್ಕಾರಕ್ಕೆ ಈ ಮೂರು ಸಾಧನೆಗಳು ಅಗತ್ಯವೆಂದು ಮತ್ತೆ ಮತ್ತೆ ಹೇಳುತ್ತಾರೆ:

(೧) ನಿರ್ಜನ ಪ್ರದೇಶಕ್ಕೆ ಆಗಾಗ್ಗೆ ಹೋಗುವುದು
(೨) ಸತ್ಸಂಗ
(೩) ಭಗವನ್ನಾಮ ಸ್ಮರಣೆ

ಈ ಮೂರು ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ಭಕ್ತರಿಗೆ ಇಂತಹ ಸಾಧನೆ ಮಾಡಲು ಸೂಕ್ತವಾದ ಒಂದು ವಾತಾವರಣವನ್ನು ಒದಗಿಸಲು, ಐದು ದಿನಗಳ '**ಒಂದು ಲಕ್ಷ ಜಪಯಜ್ಞ**' ಶಿಬಿರವನ್ನು ಬೆಳಗಾವಿ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಆಯೋಜಿಸಲಾಗಿದೆ.

ಈ ಶಿಬಿರವು **2017ರ ನವೆಂಬರ್ 29**ರಿಂದ **ಡಿಸೆಂಬರ್ 3**ರ ವರೆಗೆ ನಡೆಯುವುದು. ಶಿಬಿರದ ದಿನಗಳಲ್ಲಿ ಶಿಬಿರಾರ್ಥಿಗಳು ಕಡ್ಡಾಯವಾಗಿ ಆಶ್ರಮದ ವಸತಿಗೃಹದಲ್ಲೇ ಇರಬೇಕಾಗುತ್ತದೆ.

ಮಂತ್ರದೀಕ್ಷೆಯನ್ನು ಪಡೆದಿರುವ, ಸಾಧನೆಯನ್ನು ಗಂಭೀರವಾಗಿ ಪರಿಗಣಿಸಿರುವ, ಒಂದು ಲಕ್ಷ ಜಪ ಮಾಡುವ ಸಾಮರ್ಥ್ಯವನ್ನು ಹೊಂದಿರುವ ಬಗ್ಗೆ ವಿಶ್ವಾಸವನ್ನು ಹೊಂದಿರುವ ಭಕ್ತರು ತಮ್ಮ ಹೆಸರುಗಳನ್ನು ಆಶ್ರಮದ ಕಛೇರಿಯಲ್ಲಿ **2017 ನವೆಂಬರ್10**ರ ಒಳಗಾಗಿ ನೋಂದಾಯಿಸಬೇಕು. ಮೊದಲು ನೋಂದಾಯಿಸಿದವರಿಗೆ ಮೊದಲ ಆದ್ಯತೆ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಆಶ್ರಮವನ್ನು ಇ-ಮೇಲ್ ಅಥವಾ ದೂರವಾಣಿ ಮೂಲಕ ಸಂಪರ್ಕಿಸಬಹುದು.

ಭಗವತ್ಸೇವೆಯಲ್ಲಿ,

ಸ್ವಾಮಿ ಆತ್ಮಪ್ರಾಣಾನಂದ

(ಕಾರ್ಯದರ್ಶಿಗಳು)

ಸಂಪಾದಕೀಯ

ನುಡಿಯೆಂಬ ಬೆಳಕು



ಮಾತಿನ ದಿವ್ಯಶಕ್ತಿ

ತುಂಬ ಪ್ರಾಚೀನ ಕಾಲದಿಂದಲೇ ಮಾನವನಿಗೆ ಭಾಷೆಯ ಅಸಾಧಾರಣ ಶಕ್ತಿಯ ಅರಿವಿತ್ತು. ಭಾಷೆಯ ಅತ್ಯಂತ ಹಳೆಯ ರೂಪವೆಂದೇ ಪರಿಗಣಿಸಲಾಗಿರುವ ಋಗ್ವೇದದಲ್ಲಿ ಮಾತನ್ನು 'ವಾಕ್' ಎಂದು ಕರೆಯಲಾಗಿದೆ. ಅಲ್ಲಿ ವಾಕ್ ಎಂದರೆ ಭಾಷೆ, ಮಾತು ಎಂದಷ್ಟೇ ಅಲ್ಲ; ಅದು ದೇವತೆ. 'ವಾಗ್ದೇವಿ' ಎಂದು ಭಾಷೆಯನ್ನು ಅಲ್ಲಿ ದೈವೀಕರಿಸಲಾಗಿದೆ. 'ದೇವೀಸೂಕ್ತ'ವೆಂಬ ಸೂಕ್ತವನ್ನು ರಚಿಸಿದ ಋಷಿ ಒಬ್ಬಾಕೆ ಸ್ತ್ರೀ; ಅವಳ ಹೆಸರು ವಾಕ್ (ಅಥವಾ ವಾಗಂಭೃಣೀ) ಎಂದೇ ಆಗಿದೆ. ಮಾತಿನ ಮಹತ್ವವನ್ನು ಪುರಾಣ, ಇತಿಹಾಸಗಳಲ್ಲೂ ವ್ಯಾಕರಣ, ದರ್ಶನ ಗ್ರಂಥಗಳಲ್ಲೂ ಹಲವು ಬಗೆಯಲ್ಲಿ ವರ್ಣಿಸಲಾಗಿದೆ. ಕಾಳಿದಾಸನಂತೂ ತನ್ನ 'ರಘುವಂಶ' ಮಹಾಕಾವ್ಯದ ಮೊದಲ ಶ್ಲೋಕದಲ್ಲೇ ಶಬ್ದ-ಅರ್ಥಗಳು ಅಭಿನ್ನವೆಂದೂ, ಶಿವ-ಶಕ್ತಿಯರಂತೆ ಅವು ಒಂದಾಗಿರುತ್ತವೆ ಎಂದೂ ಸ್ತುತಿಸುತ್ತ, ಭಾಷೆಗೆ ದೈವೀಸ್ಪರ್ಶವನ್ನು ಕೊಟ್ಟಿದ್ದಾನೆ. ಅದೇ ರೀತಿ ಆಲಂಕಾರಿಕ ದಂಡಿಯು, 'ಭಾಷೆಯೆಂಬ ಬೆಳಕು ಜೀವನದ ಉದ್ದಕ್ಕೂ ಬೆಳಗದಿದ್ದರೆ ಲೋಕವೆಲ್ಲವೂ ಕತ್ತಲಿನಿಂದ ತುಂಬಿಹೋಗುತ್ತಿತ್ತು' ಎಂದು ಸೊಗಸಾಗಿ ಹೇಳುತ್ತಾನೆ. ೧೨ನೇ ಶತಮಾನದ ಮಹಾನ್ ದಾರ್ಶನಿಕ ಹಾಗೂ ಶಿವಶರಣ ಅಲ್ಲಮಪ್ರಭು, 'ಮಾತೆಂಬುದು ಜ್ಯೋತಿರ್ಲಿಂಗ; ಸ್ವರವೆಂಬುದು ಪರತತ್ತ್ವ'ವೆಂದು ಹೇಳುತ್ತಾನೆ. ಸಂಸ್ಕೃತ ವ್ಯಾಕರಣವನ್ನು ಕಲಿಸುವಾಗ ಮೊದಲಿಗೆ 'ಮಾಹೇಶ್ವರ ಸೂತ್ರ'ಗಳನ್ನು ಹೇಳಿಕೊಡುತ್ತಾರೆ. ಶಿವನ ಡಮರು ಧ್ವನಿಯಿಂದ ಹೊರಬಿದ್ದ ಶಬ್ದಗಳೇ ಈ ಸೂತ್ರಗಳೆಂದೂ, ಅದರಿಂದಲೇ ಭಾಷೆ ಉದ್ಭವವಾಯಿತೆಂದೂ ಹೇಳಲಾಗುತ್ತಿದೆ.

ಎಲ್ಲಕ್ಕಿಂತ ಮುಖ್ಯವಾಗಿ, ವಿದ್ಯೆಯನ್ನು ದೇವತೆಯೆಂದೂ, ಅವಳನ್ನು ಸರಸ್ವತಿ, ಶಾರದೆಯೆಂದೂ ಕಲ್ಪಿಸಿ ಪೂಜಿಸುವ ಸಂಪ್ರದಾಯ ನಮ್ಮಲ್ಲಿ ಬೆಳೆದುಬಂದಿದೆ. ಜ್ಞಾನವೆಂಬುದು ಪವಿತ್ರ, ದೈವಿಕ ಹಾಗೂ ಅಲೌಕಿಕ; ಅದು ಯಾವ ಬಗೆಯ ಜ್ಞಾನವೇ ಆಗಿರಲಿ ಅದನ್ನು ಪೂಜಿಸಬೇಕು ಎಂಬ ಭಾವನೆ ನಮ್ಮ ಸಂಸ್ಕೃತಿಯಲ್ಲಿ ವ್ಯಾಪಕವಾಗಿದೆ. ಇದಕ್ಕನುಗುಣವಾಗಿ 'ಅಕ್ಷರ' ವನ್ನು ಪೂಜಿಸುವುದು, ಬರವಣಿಗೆಯನ್ನು ಪವಿತ್ರ ಕಾರ್ಯವೆಂದು ಪರಿಗಣಿಸುವುದು ಕಂಡುಬರುತ್ತದೆ. 'ಸರ್ವಭಾಷಾ ಸರಸ್ವತೀ' ಎಂದು ವೈವಿಧ್ಯಮಯ ಭಾಷೆಗಳನ್ನೆಲ್ಲ ವಿದ್ಯಾಧಿದೇವತೆಯ ಸೃಷ್ಟಿಯಾಗಿ ಕಂಡ ಭಾವನೆಯೂ ನಮ್ಮಲ್ಲಿದೆ.

ಮಾತಿಗೆ ನಿಲುಕದ ಪರಬ್ರಹ್ಮವೇ ಎಲ್ಲ ಆಲೋಚನೆ, ಮಾತುಗಳಿಗೆ ಮೂಲವೆಂದು ಭಾರತೀಯ ದರ್ಶನ ಹೇಳುತ್ತದೆ. ಸಾಂಖ್ಯ ಹಾಗೂ ವೇದಾಂತ ದರ್ಶನಗಳ ಪ್ರಕಾರ ನಿರುಪಾಧಿಕ ಬ್ರಹ್ಮದಿಂದ ಹುಟ್ಟಿದ ಮೊದಲ ವಸ್ತುವೇ ಓಂಕಾರ. ಅದರಿಂದಲೇ ಉಳಿದೆಲ್ಲವೂ ವ್ಯಕ್ತಗೊಂಡವು. ಎಲ್ಲ ಅಕ್ಷರಗಳ, ಎಲ್ಲ ವಿದ್ಯೆಯ ಮೂಲವೂ ಓಂಕಾರವೇ. ಹೀಗೆ ಓಂಕಾರವೇ ಭಾಷೆಗೆ ಮೂಲ. ಇನ್ನೊಂದು ರೀತಿ ಹೇಳುವುದಾದರೆ, ಅದೇ ಪರಬ್ರಹ್ಮ; ಅದೇ ಪರತತ್ತ್ವ. **'ಏತತ್ ಹಿ ಏವ ಅಕ್ಷರಂ ಬ್ರಹ್ಮ , ಏತತ್ ಹಿ ಏವ ಅಕ್ಷರಂ ಪರಮ್'** (ಈ ಅಕ್ಷರವೇ ಬ್ರಹ್ಮ, ಅದೇ ಪರತತ್ತ್ವ) ಎನ್ನುವ ಕಠೋಪನಿಷತ್ತು, ಓಂಕಾರವು ಪರಬ್ರಹ್ಮವೆಂದೇ ಹೇಳುತ್ತದೆ. ಒಂದೆಡೆ ಓಂಕಾರವೇ ಬ್ರಹ್ಮ, ಇನ್ನೊಂದೆಡೆ ಅದು ಅಕ್ಷರ— ಹೀಗೆ ಓಂಕಾರ ವ್ಯಕ್ತ-ಅವ್ಯಕ್ತಗಳೆರಡರ ಸೇತುವೆ. ಓಂಕಾರದ ಇದೇ ತತ್ತ್ವವನ್ನು ಭಾಷೆಗೂ ಅನ್ವಯಿಸಬಹುದಾಗಿದೆ. ಮನಸ್ಸಿನಲ್ಲಿ ಮೂಡುವ ಭಾವನೆಗಳು ಪದ, ವಾಕ್ಯಗಳ ಮೂಲಕ ವ್ಯಕ್ತಗೊಂಡಾಗ 'ಭಾಷೆ'ಯೆನಿಸುತ್ತವೆ; ಅದೇ ಭಾವನೆಗಳು ಅವ್ಯಕ್ತದೆಡೆಗೆ ಹೊರಳಿ, ಪರಮಾತ್ಮನ ಅವ್ಯಕ್ತ ನೆಲೆಯಲ್ಲಿ ಒಂದಾದಾಗ 'ಅಕ್ಷರ'ವಾಗುತ್ತದೆ. ಭಾಷೆಯೆಂಬುದು ಭಾವನೆಯ ಅಂಗವಾಗಿ ಹಾಗೂ ಭಾವನೆಗಳು ಭಾಷೆಯ ಮೂಲಕ ಅಸ್ತಿತ್ವ ಹೊಂದಿ ಇರಬೇಕಾದ ಅನಿವಾರ್ಯತೆಯನ್ನು ಇದು ಸೂಚಿಸುತ್ತದೆ.

ಸಂವಹನ ಮಾಧ್ಯಮ

ದಾರ್ಶನಿಕ ಅರ್ಥದಲ್ಲಿ ಭಾಷೆಯ ಮಹತ್ವವನ್ನು ದೈವೀಕರಿಸಿ ವರ್ಣಿಸಿರುವುದು ಹಾಗಿರಲಿ. ಲೌಕಿಕ ಅರ್ಥದಲ್ಲೇ ಈ ಕುರಿತು

ವಿವೇಚನೆ ನಡೆಸಿದರೂ, ಭಾಷೆಯೊಂದು ಸಂವಹನ ಮಾಧ್ಯಮವಾಗಿ ಮಹತ್ವ ಪಡೆಯುತ್ತದೆ. ಸಮಸ್ತ ಮನುಕುಲದ ಜ್ಞಾನ ಭಂಡಾರ ದಾಖಲಾಗಿರುವುದು ಭಾಷೆಯ ಮಾಧ್ಯಮದಿಂದ. ಲಿಪಿಮಾಧ್ಯಮಕ್ಕೆ ಮೂಲವಾದ ಮಾತಿನ ಮಾಧ್ಯಮ ಜೀವಂತವಾಗಿರುವುದು ಸಮಾಜದಲ್ಲಿ ವ್ಯಕ್ತಿ-ವ್ಯಕ್ತಿಗಳ ನಡೆಯುವ ಭಾಷಾ ವ್ಯವಹಾರದಿಂದ. ಒಂದು ಸಮಾಜದ ಏಳಿಗೆ, ಸಂಸ್ಕೃತಿ, ಸಾಧನೆಗಳು ಆ ಸಮಾಜವು ಬಳಸುವ ಭಾಷೆಯನ್ನೇ ಒಂದು ಸಮರ್ಥ ಸಲಕರಣೆಯಾಗಿಸಿಕೊಳ್ಳುತ್ತವೆ. ಆಧುನಿಕ ಭಾಷಾವಿಜ್ಞಾನಿಗಳು ವಿವಿಧ ಆಯಾಮಗಳಿಂದ ಭಾಷೆಯನ್ನು ಅಧ್ಯಯನ ಮಾಡಿ, ಮಾನವನ ಅಸ್ತಿತ್ವಕ್ಕೂ ಅವನ ಭಾಷೆಗೂ ಎಂಥ ಅವಿನಾಭಾವ ಸಂಬಂಧವಿದೆಯೆಂಬುದನ್ನು ಒತ್ತಿ ಹೇಳುತ್ತಾರೆ.

ಭಾಷೆಯೆಂಬುದು ಸಮಾಜದ ಆಸ್ತಿಯೆಂಬುದು ನಿಜವಾದರೂ, ಅದಕ್ಕೆ ಸಲ್ಲಬೇಕಾದ ಮರ್ಯಾದೆ ಸಲ್ಲುತ್ತಿದೆಯೆ? ಭಾಷಾಭಿಮಾನ, ದುರಾಭಿಮಾನ, ನಿರಭಿಮಾನಗಳ ಹೆಸರಿನಲ್ಲಿ ಸಮಾಜದ ಸಂಕುಚಿತ ಭಾವನೆಗಳನ್ನು ಭಾಷೆಗಳ ಮೇಲೆ ಹೇರುವ ಕಾರ್ಯ ನಡೆಯುತ್ತಿದೆ. ಇದಕ್ಕಿಂತ ಹೆಚ್ಚಿನ ಅವಗಣನೆ ಇನ್ನೇನಿದೆ? ಹಲವು ಭಾಷೆಗಳನ್ನು ಆಡುವ ಜನರು ಜಗತ್ತಿನಲ್ಲಿದ್ದಾರೆ; ಮುಂದೆಯೂ ಇರುತ್ತಾರೆ. ಎಲ್ಲ ಭಾಷೆಗಳೂ ಸಂವಹನ ಮಾಧ್ಯಮಗಳೇ; ಜನರು ಅವುಗಳ ಮೂಲಕ ವ್ಯವಹರಿಸುತ್ತಿರುವವರೆಗೂ ಆ ಭಾಷೆಗಳು ಜೀವಂತವಾಗಿರುತ್ತವೆ. ಕೇವಲ ಜನಸಂಖ್ಯೆಯ ಪ್ರಮಾಣದಿಂದ, ಆರ್ಥಿಕ ಅಭಿವೃದ್ಧಿ ಹೊಂದಿದ ಸಮಾಜದ ಭಾಷೆ ಎಂಬ ದೃಷ್ಟಿಯಿಂದ ಒಂದು ಭಾಷೆ ಇನ್ನೊಂದಕ್ಕಿಂತ ಶ್ರೇಷ್ಠವಾಗಬೇಕಿಲ್ಲ. ಆದರೆ ಇತಿಹಾಸದಲ್ಲಿ ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರಣಗಳಿಂದ ಯಾವುದೋ ಒಂದು ಭಾಷೆ ಶ್ರೇಷ್ಠವೆಂದೂ, ಉಳಿದವು ಕನಿಷ್ಠವೆಂದೂ ಕೆಲವು ಬಗೆಯ ಮಂದಿ ಭಾವಿಸಿದ್ದು ಕಂಡುಬರುತ್ತದೆ. ಆ ಭಾಷೆಯನ್ನು ಅವಗಣನೆ ಮಾಡುವ ಮೂಲಕ ಅದನ್ನಾಡುವ ಜನರನ್ನೂ, ಅವರ ಸಂಸ್ಕೃತಿಯನ್ನೂ ಹಿಂಸಿಸುವ ಪ್ರವೃತ್ತಿ ಇಂದಿಗೂ ಕಂಡು ಬರುತ್ತದೆ. ಭಾಷೆಯನ್ನು ವೈಜ್ಞಾನಿಕವಾಗಿ, ವ್ಯಕ್ತಿನಿರಪೇಕ್ಷವಾಗಿ ಕಂಡಾಗ ಈ ಪ್ರವೃತ್ತಿಯ ಅರ್ಥಶೂನ್ಯತೆ ಸ್ಪಷ್ಟವಾಗುತ್ತದೆ. ಪ್ರಪಂಚದಲ್ಲಿ ಹಲವು ಭಾಷೆಗಳಿವೆ. ಅವುಗಳ ನಡುವೆ ಪರಸ್ಪರ ಕೊಡು-ಕೊಳ್ಳುವಿಕೆ ನಡೆದೇ ನಡೆಯುತ್ತವೆ, ಒಂದರ ಪ್ರಭಾವ ಇನ್ನೊಂದರ ಮೇಲಾಗುತ್ತದೆ. ಅಂತೆಯೇ ಕಾಲಾಂತರದಲ್ಲಿ ಎಲ್ಲ ಭಾಷೆಗಳಲ್ಲೂ ಬದಲಾವಣೆ ಕಂಡುಬರುತ್ತವೆ. ಇದರಿಂದಾಗಿ ಒಂದು ಭಾಷೆ ಶ್ರೇಷ್ಠವೋ ಕನಿಷ್ಠವೋ ಆಗಬೇಕಾಗಿಲ್ಲ. ಜನರು ಆಯಾ ಭಾಷೆಗಳನ್ನು ಎಷ್ಟು ಸಮರ್ಥವಾಗಿ ಬಳಸಿಕೊಂಡರು ಎಂಬುದನ್ನು ಆಧರಿಸಿ ಅವುಗಳ ಬೆಳವಣಿಗೆ, ಸಮೃದ್ಧಿ ನಿರ್ಣಯಿಸಲ್ಪಡುತ್ತವೆ. ಬ್ರಿಟಿಷರು ಜಗತ್ತಿನ ಹಲವೆಡೆ ವಸಾಹತುಗಳನ್ನು ಆರಂಭಿಸಿ ಆಳಿದ್ದರಿಂದ ಇಂಗ್ಲಿಷ್ ಭಾಷೆ ಸಮೃದ್ಧವಾಗಲಿಲ್ಲ; ಹಲವು ಭಾಷೆಗಳೊಂದಿಗೆ ಕೊಡು-ಕೊಳ್ಳುವಿಕೆ ಮಾಡುತ್ತ ಆ ಭಾಷೆ ತನ್ನನ್ನು ತಾನು ಸಮೃದ್ಧಗೊಳಿಸಿಕೊಂಡಿತು. ಸನ್ನಿವೇಶ, ಚಾರಿತ್ರಿಕ ಘಟನೆಗಳು ಅದಕ್ಕೆ ಸಹಾಯಕವಾದವು, ಅಷ್ಟೆ. ಅದೇ ರೀತಿ, ಸಂಸ್ಕೃತವನ್ನು 'ದೇವಭಾಷೆ' ಎಂದು ಭಾವಿಸಿದ್ದರಿಂದ ಅದು ಶ್ರೇಷ್ಠವಾಗಲಿಲ್ಲ; ಹಲವು ಮಂದಿ ಶ್ರೇಷ್ಠ ವಿದ್ವಾಂಸರ, ದಾರ್ಶನಿಕರ ಪ್ರಯೋಗಗಳಿಂದ ಅದು ಶ್ರೇಷ್ಠವಾಯಿತು. ಯಾವುದೇ ಭಾಷೆಯನ್ನು ವಿದ್ವಜ್ಜನರು, ಶ್ರೇಷ್ಠ ವ್ಯಕ್ತಿಗಳು, ಸಮರ್ಥರು ಹೀಗೆ ಬೆಳಸಿ ಶ್ರೇಷ್ಠಗೊಳಿಸಬಹುದು; ಅದಕ್ಕೆ ಅಗತ್ಯವಾದ ಮೂಲದ್ರವ್ಯ ಯಾವುದೇ ಜೀವಂತ ಭಾಷೆಯಲ್ಲಿರುತ್ತದೆ — ಇದು ಆಧುನಿಕ ಭಾಷಾವಿಜ್ಞಾನಿಗಳ ಅಭಿಪ್ರಾಯ. ಆದ್ದರಿಂದ, ಸಮಗ್ರವಾಗಿ ಬೆಳೆದಿರುವ ಭಾಷೆಯಷ್ಟೇ ಶ್ರೇಷ್ಠತೆ ಇನ್ನೂ ಲಿಪಿಗಳೇ ಇಲ್ಲದ ಭಾಷೆಗಳಿಗೂ ಇರುತ್ತದೆ; ಕಾರಣ, ಅವೆಲ್ಲವುಗಳ ಮೂಲದ್ರವ್ಯ ಒಂದೇ ಆಗಿರುತ್ತದೆ. ವ್ಯತ್ಯಾಸವೇನಿದ್ದರೂ ವ್ಯಾಕರಣ, ಶಬ್ದ ರಚನೆಗಳಲ್ಲಿ ಮಾತ್ರ. ಈ ದೃಷ್ಟಿಯಿಂದ ನೋಡುವಾಗ 'ಸರ್ವಭಾಷಾ ಸರಸ್ವತೀ' ಎಂಬ ಮಾತು ಬಹಳ ಮಹತ್ವದ್ದಾಗಿ ಕಂಡು ಬರುತ್ತದೆ.

ಬುದ್ಧಿಯ ಸವಾಲು

ಇತಿಹಾಸದಲ್ಲಿ ವಿವಿಧ ಘಟ್ಟಗಳಲ್ಲಿ ಮಾನವನ ಬೌದ್ಧಿಕ ವಿಕಾಸವುಂಟಾದುದನ್ನು ನಾವು ಗುರುತಿಸುತ್ತೇವೆ. ಬೆಂಕಿಯನ್ನು ಕಂಡು ಹಿಡಿದ ಘಟನೆ, ನಾಲ್ಕುಕಾಲಿನ ಪ್ರಾಣಿ ಎರಡುಕಾಲಿನಲ್ಲಿ ನಡೆದಾಡಿದ ಸಂದರ್ಭ, ಉಪಕರಣವನ್ನು ಬಳಸಲಾರಂಭಿಸಿದ ಘಟನೆ, ಚಕ್ರದ ಅನ್ವೇಷಣೆ — ಇಂಥ ಘಟನೆಗಳು ಮಾನವ ಶಾಸ್ತ್ರದಲ್ಲಿ ಅತ್ಯಂತ ಪ್ರಧಾನವೆಂದು ಪರಿಗಣಿಸಲಾಗುತ್ತಿದೆ.ಆದರೆ ಮಾನವನಲ್ಲಿ ಬೌದ್ಧಿಕ ಬೆಳವಣಿಗೆ ಯಾವಾಗ ಆರಂಭವಾಯಿತು, ಅವನಲ್ಲಿ ಭಾಷಾಸಂವಹನ ಎಂದು ಆರಂಭವಾಯಿತು ಎಂದು ಖಚಿತವಾಗಿ ಕಂಡುಹುಡುಕಲು ಸಾಧ್ಯವಾಗಿಲ್ಲ. ಆದರೆ ಒಂದು ವಿಚಾರ ಸ್ಪಷ್ಟವಾಗಿದೆ: ಭಾಷಾಬೆಳವಣಿಗೆ ಒಂದು ದಿನದಲ್ಲಿ ಅಥವಾ ಒಂದು ಘಟನೆಯ ಮೂಲಕ ರೂಪಿತವಾದುದಲ್ಲ. ಸಹಸ್ರಾರು ವರ್ಷಗಳ ಇತಿಹಾಸವನ್ನು ಹೇಳುವಾಗ, ದಾಖಲಾಗದೆ ಉಳಿದ ಅಂಶಗಳೆಷ್ಟು, ಕುರುಹುಗಳಿಲ್ಲದೆ ಕಾಲಗರ್ಭದಲ್ಲಿ ಮರೆಯಾದ ಅಂಶಗಳೆಷ್ಟು - ಹೇಳುವವರಾರು? ಇದೇ ರೀತಿ ಮಾನವನ ಬುದ್ಧಿಗೆ ಸವಾಲೆಸೆಯುವಂತಿದೆ ಭಾಷೆಗಳ ರಚನೆ. ಕೃತಕವಾಗಿ ರಚಿಸಿದ ಭಾಷೆಗಳು, ಕಂಪ್ಯೂಟರ್ ಭಾಷೆ - ಇವಾವವೂ ಸಮಾಜದಲ್ಲಿ ಸಹಜವಾಗಿ ಮೂಡಿಬಂದ ಭಾಷೆಗಳಷ್ಟು ಸಮಗ್ರವೂ ಜೀವಂತವೂ ಸಂವಹನಯೋಗ್ಯವೂ ಆಗಿ ಮೂಡಿಬಂದಿಲ್ಲ. ಅಂದರೆ, ಭಾಷೆಗಳ ಮೂಲ ಅವ್ಯಕ್ತ ತತ್ತ್ವವೆಂಬ ಆಧ್ಯಾತ್ಮಿಕ ವಿವರಣೆಯಲ್ಲಿ ಅರ್ಥವಿದೆಯೆ?

ಶಬ್ದ-ಅರ್ಥ, ಜ್ಞಾನಪ್ರಕ್ರಿಯೆ ಹಾಗೂ ಗ್ರಹಣಕಾರ್ಯ ಈ ವಿಚಾರವಾಗಿ ತತ್ತ್ವಶಾಸ್ತ್ರ, ಮನೋವಿಜ್ಞಾನ, ಭಾಷಾವಿಜ್ಞಾನ ಹಾಗೂ ವ್ಯಾಕರಣಶಾಸ್ತ್ರಗಳು ಸಾಕಷ್ಟು ಚಿಂತನೆ ನಡೆಸಿವೆ. ಸರಳವಾದ ಭಾಷಾಪ್ರಕ್ರಿಯೆಯು ಚಿಂತನಾತ್ಮಕವಾಗಿ ಆಳಕ್ಕೆ ಹೋದಂ

ತೆಲ್ಲ ತಾತ್ತ್ವಿಕ ನೆಲೆಗೆ ಬಂದು ನಿಲ್ಲುವುದೂ, ಅವ್ಯಕ್ತ ಹಾಗೂ ಅಗೋಚರ ಮೂಲದತ್ತ ಮುಖಮಾಡುವುದೂ ಇಲ್ಲಿ ಕಂಡು ಬರುವ ಅಚ್ಚರಿಯ ಸಂಗತಿ. ದೈನಂದಿನ ಜನಜೀವನದಲ್ಲಿ ಬೆರೆತ ಭಾಷೆಯು ತನ್ನ ಆಳವಾದ ನೆಲೆ ಎಲ್ಲೆಂಬುದನ್ನು ಬಿಟ್ಟುಕೊಡದಿರುವುದು, ಅದನ್ನು ನಾವು ಸಾಕಷ್ಟು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವನ್ನು ನಮ್ಮ ಮುಂದಿರಿಸುತ್ತದೆ.

ಶಿಕ್ಷಣದ ಮಾಧ್ಯಮ

ಈ ಹಿನ್ನೆಲೆಯಲ್ಲಿ ಶಿಕ್ಷಣದಲ್ಲಿ ಭಾಷೆಯ ಪ್ರಾಮುಖ್ಯತೆಯನ್ನು ನೋಡಬೇಕು. ಸಾವಿರಾರು ವರ್ಷಗಳಿಂದ ಬೆಳೆದುಬಂದ ವಿವಿಧ ಜ್ಞಾನಶಾಖೆಗಳನ್ನು ಕ್ಷಿಪ್ರಗತಿಯಿಂದ ವ್ಯವಸ್ಥಿತವಾಗಿ ಮಕ್ಕಳಿಗೆ ಬೋಧಿಸುವ ವ್ಯವಸ್ಥೆಯೇ ವಿದ್ಯಾಭ್ಯಾಸ. ಒಂದೆಡೆ ಜ್ಞಾನವಿದೆ, ಇನ್ನೊಂದೆಡೆ ಜ್ಞಾನವನ್ನು ಪಡೆಯುವ ವಿದ್ಯಾರ್ಥಿಯಿದ್ದಾನೆ. ಇವೆರಡರ ನಡುವಿನ ಕೊಂಡಿಯೇ ಅಧ್ಯಾಪಕ; ಅವನ ಮಾಧ್ಯಮವೇ ಭಾಷೆ. ಜ್ಞಾನ, ವಿದ್ಯಾರ್ಥಿ, ಅಧ್ಯಾಪಕರು ಇವರ ವಿಚಾರದಲ್ಲಿ ಗೊಂದಲವಿಲ್ಲ; ಆದರೆ ಭಾಷೆಯ ವಿಚಾರದಲ್ಲಿ ಹಲವು ಅನಗತ್ಯವಾದ ಗೊಂದಲಗಳಿವೆ. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಮಾತೃಭಾಷೆಯೇ ಅತ್ಯುತ್ತಮವೆಂಬುದನ್ನು ಜಗತ್ತಿನ ಎಲ್ಲ ಶೈಕ್ಷಣಿಕ ತಜ್ಞರೂ, ಮನೋವಿಜ್ಞಾನಿಗಳೂ ಒಕ್ಕೊರಲಿನಿಂದ ಸಾರುತ್ತಿದ್ದಾರೆ. ಆದರೆ ವಿದ್ಯಾಭ್ಯಾಸದ ಮಹತ್ತ್ವವನ್ನರಿಯದೆ, ಅದನ್ನು ಹಣ ಗಳಿಸುವ ಒಂದು ವಿಧಾನವೆಂದು ಭಾವಿಸಿರುವವರು ಮಾತೃಭಾಷಾ ಮಾಧ್ಯಮಕ್ಕೆ ವಿರುದ್ಧವಾಗಿ ತಮ್ಮ ವಾದಗಳನ್ನು ಮಂಡಿಸುತ್ತಾರೆ. ರಾಜಕೀಯ, ಆರ್ಥಿಕ ಪ್ರಲೋಭನೆಗಳಿಂದ ತಮ್ಮ ಶೈಕ್ಷಣಿಕ ನೀತಿಯನ್ನು ರೂಪಿಸುವ ಬದಲು, ನಮ್ಮ ಮುಂದಿನ ಪೀಳಿಗೆಯ ಸಮಾಜ ಆರೋಗ್ಯಕರವಾಗಿ ಹಾಗೂ ಉನ್ನತ ಮಟ್ಟದಲ್ಲಿ ಮುನ್ನಡೆಯುವುದು ಮುಖ್ಯವೆಂಬುದನ್ನು ಅವರು ಮರೆತಿದ್ದಾರೆ. ಇದು ಸಮಾಜಕ್ಕೆ ಮಾರಕವಲ್ಲದೆ, ಹಿತಕರವಲ್ಲ.

ವೈದ್ಯಕೀಯ, ಇಂಜಿನಿಯರಿಂಗ್ ಹಾಗೂ ಕಂಪ್ಯೂಟರ್ ಯುಗದಲ್ಲಿ ಮಾತೃಭಾಷಾ ಶಿಕ್ಷಣ ಅನಗತ್ಯ ಮಾತ್ರವಲ್ಲ, ಪ್ರಗತಿಗೆ ವಿರೋಧವೆಂಬ ಅಭಿಪ್ರಾಯ ಹಲವು ಮಂದಿ ಸುಶಿಕ್ಷಿತರಲ್ಲಿದೆ. ಇದು ಸಂಪೂರ್ಣವಾಗಿ ತರ್ಕಹೀನ ವಿಚಾರ. ಜಗತ್ತಿನ ಪ್ರಭಾವಶಾಲೀ ದೇಶಗಳಾದ ಜಪಾನ್, ಚೀನಾ, ಜರ್ಮನಿ, ಫ್ರಾನ್ಸ್ ಹಾಗೂ ಇನ್ನಿತರ ಯೂರೋಪಿನ ದೇಶಗಳಲ್ಲಿ ಭಾಷಾಮಾಧ್ಯಮ ಆಯಾ ದೇಶಗಳದ್ದೇ ವಿನಾ ಇಂಗ್ಲಿಷ್ ಭಾಷೆಯಲ್ಲ. ಅವೆಲ್ಲವೂ ವಿಜ್ಞಾನ, ತಂತ್ರಜ್ಞಾನ ಪ್ರಗತಿಯಲ್ಲಿ ಭಾರತಕ್ಕಿಂತ ಮುಂದಿದೆ – ಅದು ಹೇಗೆ ಸಾಧ್ಯವಾಯಿತು? ವೃತ್ತಿಶಿಕ್ಷಣಕ್ಕೆ ಬೇಕಾದ ಮಾಧ್ಯಮವನ್ನು ಪ್ರಾಥಮಿಕ ಶಿಕ್ಷಣದ ನಂತರ ಕಲಿಸಬಹುದು; ಅಥವಾ ಕೆಲವು ಅಗತ್ಯವಾದ ವಿಷಯಗಳನ್ನು ಮಾತ್ರ ಬೇರೆ ಭಾಷೆಯಲ್ಲಿ ಕಲಿಸಬಹುದು. ಹೀಗಾದಾಗ ಮಾತೃ ಭಾಷಾಮಾಧ್ಯಮದಲ್ಲೇ ಪ್ರಾಥಮಿಕ ವಿದ್ಯಾಭ್ಯಾಸ ಎಂಬುದನ್ನು ತ್ಯಜಿಸಬೇಕಾಗಿಲ್ಲ. ಭಾಷೆಯನ್ನು ಮಾಧ್ಯಮವಾಗಿ ಇಡುವುದಕ್ಕೂ, ಭಾಷೆಯನ್ನು ಒಂದು ವಿಷಯವನ್ನಾಗಿ ಕಲಿಸುವುದಕ್ಕೂ ವ್ಯತ್ಯಾಸವಿದೆ. ಮಾಧ್ಯಮ ಮಾತೃಭಾಷೆಯಲ್ಲಿದ್ದು, ಒಂದು ವಿಷಯವಾಗಿ ಇಂಗ್ಲಿಷ್ ಅಥವಾ ಯಾವುದೇ ಭಾಷೆ ಇರಲಿ, ತೊಂದರೆಯಿಲ್ಲ. ವಿದ್ಯಾಭ್ಯಾಸ ಆರಂಭವಾಗುವ ಕೆಲವು ವರ್ಷಗಳಲ್ಲಿ ಕಲಿಯುವ ಮಾಧ್ಯಮ ಮಾತೃಭಾಷೆಯಾಗಿದ್ದರೆ ಮಾತ್ರ ವಿದ್ಯಾರ್ಥಿಯ ಗ್ರಹಣ ಸಾಮರ್ಥ್ಯ ಶಕ್ತಿಯುತವಾಗಿರುತ್ತದೆ ಎಂಬುದೇ ಇದಕ್ಕೆ ಪ್ರಧಾನ ಕಾರಣ.

ಸಾಂಸ್ಕೃತಿಕ ಕಿರೀಟ

ಭಾಷೆ ಸಂವಹನವಾಗುವ ರೀತಿಗೂ, ವಿವಿಧ ಕ್ಷೇತ್ರಗಳಲ್ಲಿ ಅದು ಬಳಕೆಯಾಗುವ ರೀತಿಗೂ ಹಲವು ಮುಖಗಳಿವೆ. ಆಡುವ ನುಡಿಯಲ್ಲೆಲ್ಲ ವ್ಯಾಕರಣ ಅವ್ಯಕ್ತವಾಗಿದ್ದು ಬಳಕೆಯಾಗುವಂತೆ, ಸಮಾಜದ ವಿವಿಧ ವಲಯಗಳಲ್ಲಿ, ಭಾಷೆಯ ಬಳಕೆ ಹಿನ್ನೆಲೆಯಾಗಿದ್ದುಕೊಂಡು ಕೆಲಸ ಮಾಡುತ್ತದೆ. ಬದುಕುವ ರೀತಿಯನ್ನೇ 'ಸಂಸ್ಕೃತಿ' ಎಂದು ನಿರ್ವಚಿಸುವಾಗ ಅದರ ಪ್ರಮುಖ ಸಂವಹನ ಮಾಧ್ಯಮವಾದ ಭಾಷೆ ಕೂಡ ಸಂಸ್ಕೃತಿಯ ಅಂಗವಾಗಿದೆಯೆನ್ನಬೇಕು. ಅದರಲ್ಲೂ, ಮಾನವನ ಶ್ರೇಷ್ಠತೆಯಿರುವುದು ಅವನ ಬೌದ್ಧಿಕ ಆಯಾಮದಲ್ಲಿ. ಅವನ ಬೌದ್ಧಿಕ ವಿಕಸನಕ್ಕೂ, ಜಾಗತಿಕ ಪ್ರಜ್ಞೆಯಿಂದ ಕೂಡಿದ ಸಾಮೂಹಿಕ ಜೀವನಕ್ಕೂ ಅತಿ ಮುಖ್ಯ ಅಂಗವಾಗಿರುವ ಭಾಷಾಮಾಧ್ಯಮವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತದೆ — ಅದರ ಆಧ್ಯಾತ್ಮಿಕ ಆಯಾಮದಿಂದ. ವೈಯಕ್ತಿಕ ಹಂತದ ಭಾಷಾಪ್ರಕ್ರಿಯೆ ಬಹಿರ್ಮುಖವಾದಾಗ ಸಾಮಾಜಿಕ ನೆಲೆಯಲ್ಲೂ, ಅಂತರ್ಮುಖವಾದಾಗ ಆಧ್ಯಾತ್ಮಿಕ ನೆಲೆಯಲ್ಲೂ ಲಯ ಹೊಂದುವುದು. ಸಮಾಜ ಅಂತರಂಗ-ಬಹಿರಂಗ ಎರಡೂ ದಿಕ್ಕುಗಳಲ್ಲಿ ಹರಿದು, ಪರಸ್ಪರ ವಿನಿಮಯಗೊಂಡಾಗಲೇ ಪರಿಪಕ್ವವಾಗುವುದು; ಈ ಸತ್ಯವನ್ನು ಸಮರ್ಥವಾಗಿ ಬಳಸಿಕೊಂಡ ಸಮಾಜವೇ ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಉತ್ತುಂಗ ಶಿಖರಕ್ಕೇರುವುದು. ಅಂಥ ಸಮಾಜದ ಕನ್ನಡಿಯೇ ಅದರ ಭಾಷೆ; ಆ ಭಾಷೆಯೇ ಅದರ ಸಾಂಸ್ಕೃತಿಕ ಕಿರೀಟ. ಭಾರತೀಯ ಭಾಷೆಗಳಲ್ಲಿ ಈ ಎರಡೂ ಆಯಾಮಗಳಿವೆ. ಇದನ್ನು ಸರಿಯಾಗಿ ಅರಿತುಕೊಂಡು ನಾಡು-ನುಡಿಯ ವಿಷಯವಾಗಿ ಹೆಮ್ಮೆ ತಾಳುವುದು ಸ್ವಾಭಾವಿಕ; ಅದು ಅನ್ಯರ ನಿಂದೆಯಾಗದಂತೆ ಎಚ್ಚರ ವಹಿಸುವುದೂ ಅಷ್ಟೇ ಮುಖ್ಯ.

ಸಾಮಾನ್ಯ ಜನರ ಮಾತುಕತೆ, ಸರಸ, ಹಾಸ್ಯವಿನೋದಗಳಿಂದ ಹಿಡಿದು ಕಲೆ, ಸಾಹಿತ್ಯ , ಶಿಕ್ಷಣ, ಪ್ರವಚನ, ಧರ್ಮ, ಅಧ್ಯಾತ್ಮಗಳವರೆಗೆ ಭಾಷೆ ಪ್ರಭಾವಶಾಲಿ ಮಾಧ್ಯಮವಾಗಿ ಕೆಲಸ ಮಾಡುತ್ತದೆ. ಅದರಲ್ಲಿ ಭಾಷಾಶುದ್ಧಿ, ಭಾವವ್ಯಂಜನೆ, ರಸಾಭಿವ್ಯಕ್ತಿಗಳಲ್ಲಿ ಸಮಾಜದ ಸಂಸ್ಕೃತಿ ಪ್ರತಿಬಿಂಬಿತವಾಗುತ್ತದೆ. ವೈಯಕ್ತಿಕ ನೆಲೆಯ ಬೌದ್ಧಿಕ-ಆಧ್ಯಾತ್ಮಿಕ ಉನ್ನತಿಗೂ ಭಾಷಾಪ್ರಕ್ರಿಯೆಯು ಅತ್ಯಂತ ಮುಖ್ಯವಾದದ್ದು. ಜೀವನದ 'ಜೀವನದಿ'ಯಾದ ನಮ್ಮ ನುಡಿಯನ್ನೇ ಮಾತೆಯಾಗಿ ಆರಾಧಿಸುವುದು, ನಮ್ಮ ಸಂಸ್ಕೃತಿಯ ಹೆಗ್ಗುರುತಲ್ಲವೆ?

ಬ್ರಹ್ಮ ಅನಿರ್ವಚನೀಯ



ಬ್ರಹ್ಮಜ್ಞಾನಿಯ ನಿಶ್ಚಿತಾಭಿಪ್ರಾಯ ಬ್ರಹ್ಮ ಸತ್ಯ ಜಗನ್ಮಿಥ್ಯಾ. ಈ ನಾಮರೂಪಗಳೆಲ್ಲ ಸ್ವಪ್ನದ ಹಾಗೆ ಮಿಥ್ಯಾ. ಬ್ರಹ್ಮ ಏನು ಎಂಬುದನ್ನು ಬಾಯಿಂದ ವರ್ಣಿಸಲಾಗುವುದಿಲ್ಲ. ಆತನನ್ನು ಒಬ್ಬ ವ್ಯಕ್ತಿ ಎಂತಲೂ ಹೇಳಲಾಗುವುದಿಲ್ಲ. ಹೀಗೆಂದು ಜ್ಞಾನಿಗಳು – ವೇದಾಂತವಾದಿಗಳು ಹೇಳುತ್ತಾರೆ.

ವಿಚಾರದಲ್ಲಿ ಮುಂದುವರಿಯುತ್ತ ಮುಂದುವರಿಯುತ್ತ ಹೋದರೆ ಕೊನೆಗೆ 'ಅಹಂ' ಏನೂ ಉಳಿದುಕೊಳ್ಳದು. ಉದಾಹರಣೆಗೆ ಈರುಳ್ಳಿ. ಹೊರಗಿನ ಕೆಂಪು ಸಿಪ್ಪೆ ತೆಗೆದನಂತರ ಮಂದವಾಗಿರುವ ಬಿಳಿ ಸಿಪ್ಪೆ ಕಾಣಿಸಿಕೊಳ್ಳುತ್ತವೆ. ಅವನ್ನು ಒಂದಾದಮೇಲೊಂದು ತೆಗೆಯುತ್ತಾ ಬಂದರೆ ಒಳಗೆ ಏನೂ ಕಾಣಿಸದು. ಆ ಅವಸ್ಥೆಯಲ್ಲಿ ಮನುಷ್ಯ ತನ್ನ 'ಅಹಂ'ಗಾಗಿ ಎಷ್ಟು ಹುಡುಕಿದರೂ ಅದು ದೊರೆಯಲೊಲ್ಲದು. ಅದನ್ನು ಹುಡುಕುವುದಕ್ಕೆ ಅಲ್ಲಿ ಉಳಿದುಕೊಂಡಿರುವವರು ಯಾರು? ಆ ಅವಸ್ಥೆಯನ್ನು ಮುಟ್ಟಿದಾಗ ಆತ ಆಂತರಿಕ ಪ್ರಜ್ಞೆಯಲ್ಲಿ ಬ್ರಹ್ಮನ ನಿಜಸ್ವರೂಪದ ಸಂಬಂಧವಾಗಿ ಏನು ಅನುಭವ ಪಡೆಯುತ್ತಾನೆ ಎಂಬುದನ್ನು ಯಾರುತಾನೆ ಹೇಳಬಲ್ಲರು? ಒಮ್ಮೆ ಒಂದು ಉಪ್ಪಿನ ಗೊಂಬೆ ಸಮುದ್ರದ ಆಳ ಕಂಡು ಹಿಡಿಯಲು ಹೋಯಿತು. ಸಮುದ್ರಕ್ಕೆ ಕಾಲಿಡುವುದೇ ತಡ, ಒಡನೆಯೇ ನೀರಲ್ಲಿ ಕರಗಿಹೋಯಿತು. ಈಗ ಸಮುದ್ರದ ಆಳ ಎಷ್ಟು ಅಂತ ಹೇಳಲು ಯಾರು ಉಳಿದುಕೊಂಡಿದ್ದಾರೆ?

ವೇದಾಂತವಿಚಾರದ ಮುಂದೆ ಭಗವಂತನ ರೂಪಗಳೆಲ್ಲ ಗಾಳಿಯಲ್ಲಿ ಹಾರಿಹೋಗಿಬಿಡುತ್ತದೆ. ಆದರೆ ಕೊನೆಯ ಸಿದ್ಧಾಂತ: ಬ್ರಹ್ಮನೇ ಸತ್ಯ; ನಾಮರೂಪಯುಕ್ತ ಈ ಜಗತ್ತು ಮಿಥ್ಯಾ. 'ನಾನು ಭಕ್ತ' ಎಂಬ ಭಾವನೆ ಭಕ್ತನಲ್ಲಿ ಇರುವವರೆಗೆ ಆತನಿಗೆ ಸಾಧ್ಯವಾಗುತ್ತದೆ ಭಗವಂತನನ್ನು ದರ್ಶನಮಾಡಲು, ಆತನನ್ನು ಒಬ್ಬ ವ್ಯಕ್ತಿ ಎಂದು ಭಾವಿಸಲು. ವಿಚಾರ ದೃಷ್ಟಿಯಿಂದ ನೋಡಿದರೆ ಭಕ್ತನ 'ಅಹಂ' ಎಂಬುದು ಆತನನ್ನು ಭಗವಂತನಿಂದ ಒಂದು ಸ್ವಲ್ಪ ದೂರದಲ್ಲೇ ನಿಲ್ಲಿಸಿಬಿಟ್ಟಿರುತ್ತದೆ. ಕೃಷ್ಣನ ಅಥವಾ ಕಾಳಿಯ ವಿಗ್ರಹ ಮೂರುವರೆ ಮೊಳ ಮಾತ್ರ ಇದೆಯಲ್ಲ ಏಕೆ ಗೊತ್ತೆ? ಸೂರ್ಯ ದೂರದಲ್ಲಿರುವುದರಿಂದ ಚಿಕ್ಕದಾಗಿ ಕಾಣುತ್ತಾನೆ. ಹತ್ತಿರ ಹೋಗಿ ನೋಡು, ಆತ ಎಷ್ಟೊಂದು ದೊಡ್ಡವನು, ಗ್ರಹಿಸಲೇ ಸಾಧ್ಯವಾಗುವುದಿಲ್ಲ. ಮತ್ತೆ ನೋಡು, ಕಾಳಿಯ ಮತ್ತು ಕೃಷ್ಣನ ವಿಗ್ರಹ ಕಪ್ಪಾಗಿವೆಯಲ್ಲ ಏಕೆ? ಅದಕ್ಕೂ ಕಾರಣ, ದೂರವೇ. ಉದಾಹರಣೆಗೆ ಸಮುದ್ರದ ನೀರು ಅದು ದೂರದಿಂದ ಹಸುರು, ನೀಲಿ ಅಥವಾ ಕಪ್ಪು ಬಣ್ಣದ್ದಾಗಿ ಕಾಣಿಸಿಕೊಳ್ಳುತ್ತದೆ. ಹತ್ತಿರ ಹೋಗಿ ಕೈಯಲ್ಲಿ ಒಂದು ಸ್ವಲ್ಪ ನೀರು ತೆಗೆದುಕೊಂಡು ನೋಡು. ಅದಕ್ಕೆ ಯಾವ ಬಣ್ಣವೂ ಇಲ್ಲ. ಆಕಾಶ ದೂರದಿಂದ ನೀಲವರ್ಣದ್ದಾಗಿ ಕಾಣುತ್ತದೆ. ಹತ್ತಿರದಲ್ಲಿ ನೋಡು, ಅದಕ್ಕೆ ಯಾವ ಬಣ್ಣವೂ ಇಲ್ಲ.ಅದಕ್ಕಾಗಿಯೇ ನಾನು ಹೇಳುವುದು, ವೇದಾಂತ ವಿಚಾರದ ದೃಷ್ಟಿಯಿಂದ ಬ್ರಹ್ಮ ನಿರ್ಗುಣ ಎಂಬುದಾಗಿ. ಆತನ ನೈಜರೂಪ ಏನು ಎಂಬುದನ್ನು ಬಾಯಿಂದ ವರ್ಣನೆ ಮಾಡಲಾಗುವುದಿಲ್ಲ. ಆದರೆ ನಿನ್ನ ವ್ಯಕ್ತಿತ್ವ ಸತ್ಯವಾಗಿರುವವರೆಗೆ ಜಗತ್ತೂ ಸತ್ಯ. ಭಗವಂತನ ನಾನಾ ರೂಪಗಳೂ ಸತ್ಯ! ಭಗವಂತ ಒಬ್ಬ ವ್ಯಕ್ತಿ ಎಂಬ ಭಾವನೆಯೂ ಸತ್ಯ.

ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡಿದ್ದರೆ ಮಾತ್ರ ಆತನ ಸಂಬಂಧವಾಗಿ ಯಥಾರ್ಥವಾಗಿ ಹೇಳಬಹುದು. ಯಾರಿಗೆ ಭಗವಂತನ ಸಾಕ್ಷಾತ್ಕಾರವಾಗಿದೆಯೋ, ಆತನಿಗೆ ಚೆನ್ನಾಗಿ ಗೊತ್ತಿದೆ, ಭಗವಂತ ಸಾಕಾರನೂ ಹೌದು, ನಿರಾಕಾರನೂ ಹೌದು ಎಂಬುದು. ಆತ ಇನ್ನೂ ಏನೇನು ಆಗಿದ್ದಾನೊ ಅದನ್ನು ಹೇಳಲಾಗುವುದಿಲ್ಲ.

ಬ್ರಹ್ಮ ಅವಾಙ್ಮನಸಗೋಚರ ಎಂಬುದಾಗಿ ವೇದಗಳಲ್ಲಿ ಹೇಳಿದೆ. ಜ್ಞಾನಸೂರ್ಯನ ತಾಪದಿಂದ ಹಿಮಗಡ್ಡೆಯಂತಹ ಭಗವಂತನ ಸಾಕಾರರೂಪ ಕರಗಿಹೋಗುತ್ತದೆ. ಬ್ರಹ್ಮಜ್ಞಾನ ದೊರೆತನಂತರ ಅಂದರೆ, ನಿರ್ವಿಕಲ್ಪಸಮಾಧಿ ದೊರೆತನಂತರ, ಅದರಲ್ಲಿ ಅದೇ ಅನಂತ ವಾಙ್ಮನಾತೀತ ಅರೂಪ ನಿರಾಕಾರಬ್ರಹ್ಮನ ದರ್ಶನ. ಪರಬ್ರಹ್ಮನ ಸ್ವರೂಪ ಏನೆಂಬುದಾಗಿ ಬಾಯಲ್ಲಿ ಹೇಳಲಾಗುವುದಿಲ್ಲ. ಅದರ ಸಂಬಂಧವಾಗಿ ಮಾತೇ ಹೊರಡುವ ಹಾಗಿಲ್ಲ. ಅನಂತವನ್ನು ಯಾರು ತಾನೇ ಮಾತಿನಿಂದ ವರ್ಣಿಸಬಲ್ಲರು? ಹಕ್ಕಿ ಎಷ್ಟೇ ಎತ್ತರಕ್ಕೆ ಹಾರಿಹೋದರೂ, ಅದು ಹಾರಿಹೋಗಬೇಕಾದ ಎತ್ತರ ಇನ್ನೂ ಉಳಿದುಕೊಂಡೇ ಇರುತ್ತದೆ.

ನಾಲ್ಕು ಜನ ಸ್ನೇಹಿತರು ಹಾಗೇ ಸುತ್ತಾಡುತ್ತ ಹೋಗುವಾಗ ಒಂದು ಕಡೆ ನಾಲ್ಕು ದಿಕ್ಕಿಗೂ ಗೋಡೆ ಎದ್ದಿದ್ದ ಒಂದು ಸ್ಥಳ ಕಣ್ಣಿಗೆ ಬಿತ್ತು. ಗೋಡೆ ಬಹಳ ಎತ್ತರದವರೆಗೆ ಎದ್ದಿತ್ತು. ಅದರೊಳಗೆ ಏನಿದೆ ಎಂಬುದನ್ನು ಅರಿಯಲು ಎಲ್ಲರೂ ಬಹಳವಾಗಿ ಕುತೂಹಲಪಟ್ಟರು. ಒಬ್ಬ ಅದರ ಮೇಲಕ್ಕೆ ಹತ್ತಿದ. ಆ ಕಡೆ ದೃಷ್ಟಿ ಬಿದ್ದೊಡನೆಯೇ ಆತನಿಗೆ ಏನು ಕಂಡು ಬಂತೊ, ಅದು ಆತನನ್ನು ಆಶ್ಚರ್ಯಚಕಿತನನ್ನಾಗಿ ಮಾಡಿಬಿಟ್ಟಿತು. ಆತ ಕೇವಲ, 'ಆಹ! ಆಹ! ಆಹ! ಆಹ!' ಅಂತ ಹೇಳಿ ಒಳಕ್ಕೆ ಧುಮುಕಿಬಿಟ್ಟ. ಮತ್ತೇನು ಸಮಾಚಾರವನ್ನೂ ಕೊಡಲಿಲ್ಲ. ಉಳಿದವರೂ ಹಾಗೆಯೇ ಹತ್ತಿ, ಮೊದಲನೆಯವನ ಹಾಗೆಯೇ 'ಆಹ! ಆಹ! ಆಹ! ಆಹ!' ಅಂತ ಕೂಗಿ ಒಳಕ್ಕೆ ಧುಮುಕಿಬಿಟ್ಟರು. ಈಗ ಒಳಗೇನಿದೆ ಎಂಬುದನ್ನು ಯಾರು ತಾನೆ ಹೇಳಬಲ್ಲರು?

ಶ್ರೀರಾಮಕೃಷ್ಣ ವಚನವೇದದಿಂದ

ಆಧ್ಯಾತ್ಮಿಕ ಪಥದಲ್ಲಿ ವಿಜ್ಞಾನಿ

ಪ್ರವ್ರಾಜಿಕಾ ಪರಮಪ್ರಾಣಾ

(ಭಾಗ ಒಂದು)

ಸ್ವಾಮಿ ವಿವೇಕಾನಂದರ ಜೀವನ, ವಿಚಾರಧಾರೆಗಳಿಂದ ಪ್ರಭಾವಿತರಾದ ಹಾಗೂ ಅವರ ಶಿಷ್ಯರೊಂದಿಗೆ ಒಡನಾಡಿದ ಮಹಾನ್ ವ್ಯಕ್ತಿಗಳಲ್ಲಿ ಒಬ್ಬರು ಬಶೀಶ್ವರ ಸೇನ್ (ಅಥವಾ 'ಬೋಶಿ ಸೇನ್'). ವಿಜ್ಞಾನಿಯಾಗಿ ಅವರು ಎಷ್ಟೇ ಸಾಧನೆ ಮಾಡಿದ್ದರೂ, ಕೀರ್ತಿ ಗಳಿಸಿದ್ದರೂ ತಾವು ಕಂಡ ಆಧ್ಯಾತ್ಮಿಕ ಮಾರ್ಗವನ್ನು ತ್ಯಜಿಸಲಿಲ್ಲ. ಅವರ ಸ್ಫೂರ್ತಿದಾಯಕ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಇಲ್ಲಿ ನಿರೂಪಿಸಿರುವ ಲೇಖಕಿ, ಶ್ರೀ ಶಾರದಾ ಮಠದ ಪ್ರಧಾನ ಶಾಖೆ ದಕ್ಷಿಣೇಶ್ವರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



ಬೋಶಿಯ ಮನೆ : ಶ್ರೀಮಾತೆ ಶಾರದಾದೇವಿಯವರ ಜೀವನವನ್ನು ಓದಿದವರಿಗೆ ವಿಷ್ಣುಪುರದ ಹೆಸರು ಹೊಸದು ಎನ್ನಿಸುವುದಿಲ್ಲ. ಪಶ್ಚಿಮ ಬಂಗಾಳದ ಬಾಂಕುರ ಜಿಲ್ಲೆಯಲ್ಲಿರುವ ಸಣ್ಣ ಊರಿದು. ಇಲ್ಲಿಯ ಸುಂದರವಾದ ಟೆರಕೋಟಾ ಮಂದಿರಗಳು ಇಂದಿಗೂ ತಮ್ಮ ಪ್ರಸಿದ್ಧಿಯನ್ನು ಹಾಗೆ ಉಳಿಸಿಕೊಂಡಿವೆ. ಇಲ್ಲಿಯೇ ೧೮೮೭ ರಲ್ಲಿ ಬೋಶಿ ಸೇನ್ ಹುಟ್ಟಿದರು. ಕಲ್ಕತ್ತದಿಂದ ವಿಷ್ಣುಪುರದವರೆಗೆ ರೈಲಿನ ರಸ್ತೆಯಾದ ಮೇಲೆ, ಶ್ರೀಮಾತೆ ಜಯರಾಂಬಾಟಿಯಿಂದ ಕಲ್ಕತ್ತಕ್ಕೆ ಹೋಗಿ ಬರುವ ರಸ್ತೆಯಲ್ಲಿ ವಿಷ್ಣುಪುರದಲ್ಲಿ ವಿಶ್ರಾಮ ತೆಗೆದುಕೊಂಡು ಮುಂದುವರೆಯುತ್ತಿದ್ದರು. ೧೯೦೩ರಲ್ಲಿ ಶ್ರೀಮಾತೆ ಮೊದಲ ಬಾರಿಗೆ ವಿಷ್ಣುಪುರಕ್ಕೆ ಹೋದರು. ಆಗ ಅವರಿಗೆ ಅಲ್ಲಿ ಯಾರ ಪರಿಚಯವೂ ಇರಲಿಲ್ಲ. ಅವರು ಅಲ್ಲಿಯ ಲಾಲ್‌ಬಾಂದ್ ಎಂಬ ವಿಸ್ತಾರವಾದ ಕೊಳದ ತೀರದಲ್ಲಿದ್ದ ವಿಶ್ರಾಮಸ್ಥಾನದಲ್ಲಿ ಒಂದೆರಡು ಗಂಟೆ ಇದ್ದು, ಅಡುಗೆ ಮಾಡಿ ಊಟಮಾಡಿ ಮತ್ತೆ ಇತರ ಮಹಿಳೆಯರೊಂದಿಗೆ ಪ್ರಯಾಣ ಮುಂದುವರೆಸಿದ್ದರು. ೧೯೧೧ರಲ್ಲಿ ಶ್ರೀರಾಮಕೃಷ್ಣರ ಭಕ್ತರಾದ ಸುರೇಶ್ವರ ಸೇನರು ಶ್ರೀಮಾತೆಯನ್ನು ತಮ್ಮ ಮನೆಗೆ ಆಹ್ವಾನಿಸಿದರು. ಇವರು ವಿಜ್ಞಾನಿ ಬೋಶಿ ಸೇನರ ಹಿರಿಯ ಅಣ್ಣ. ಅಂದಿನಿಂದ ಆ ಮನೆಯೇ ಶ್ರೀಮಾತೆಯ ತಂಗುದಾಣವಾಯಿತು. ಈ ದೊಡ್ಡ ಮನೆಯನ್ನು ಬೋಶಿಯ ತಾಯಿ ಪ್ರಸನ್ನಮಯಿಗೆ ಆಕೆಯ ತಂದೆ ಬಳುವಳಿಯಾಗಿ ಕೊಟ್ಟಿದ್ದರು.

ಬೋಶಿಯ ತಂದೆ ರಾಮೇಶ್ವರ ಸೇನ್ ಆಗಿನ ಕಾಲದಲ್ಲಿ ಆಧುನಿಕ ಶಿಕ್ಷಣವನ್ನು ಪಡೆದ ಕೆಲವೇ ಕೆಲವರಲ್ಲಿ ಒಬ್ಬನು. ಈತ ಬಡ ವಿದ್ಯಾರ್ಥಿಗಳಿಗೆ ನಾನಾ ರೀತಿಯಲ್ಲಿ ಸಹಾಯ ಮಾಡುತ್ತಿದ್ದುದಲ್ಲದೆ, ಪ್ರೈಮರಿ ಸ್ಕೂಲುಗಳ ನಿರ್ಮಾಣಕ್ಕೂ ಶ್ರಮಿಸಿದನು. ಬೋಶಿಯ ತಾಯಿಯೂ ಈ ಎಲ್ಲಾ ಕೆಲಸಗಳಲ್ಲಿ ಸಮಭಾಗಿಯಾಗಿ ನಿಂತು ಸಹಾಯಮಾಡುತ್ತಿದ್ದಳು. ಇವರ ಐದುಜನ ಗಂಡುಮಕ್ಕಳಲ್ಲಿ ಬೋಶಿ ನಾಲ್ಕನೆಯವನಾಗಿದ್ದನು. ಆತನಿಗೆ ಇಬ್ಬರು ಅಕ್ಕಂದಿರೂ ಇದ್ದರು. ಬೋಶಿಯ ಸರಿಯಾದ ಹೆಸರು ವಶೀಶ್ವರ ಎಂದಿತ್ತು. ಎಲ್ಲರೂ ವಶೀ ಎಂದೇ ಕರೆಯುತ್ತಿದ್ದರು. ಈ ವಶಿ ಶಬ್ದವೇ ಬಂಗಾಳಿ ಉಚ್ಚಾರಣೆಯಲ್ಲಿ ಬೋಶಿ ಎಂದಾಗಿದೆ. ಸಂಸ್ಕೃತ ಮತ್ತು ಗಣಿತಗಳಲ್ಲಿ ಪಂಡಿತನಾದ ರಾಮೇಶ್ವರನು ಮಗನ ಜಾತಕವನ್ನು ಓದಿ ಚಕಿತನಾದನು. 'ಅತ್ಯಂತ ವಿದ್ಯಾವಂತನಾಗುವ ಈತ, ಆಧ್ಯಾತ್ಮಿಕ ಜಗತ್ತಿನಲ್ಲಿ ಹಿಂದಿನ ಕಾಲದ ಋಷಿಗಳಂತೆ ಸಾರ್ಥಕ ಜೀವನವನ್ನು ನಡೆಸುತ್ತಾನೆ. ಆದರೆ ಈತನ ಯಶಸ್ಸನ್ನು ಕಾಣಲು ತಂದೆ ತಾಯಿಯರಿಬ್ಬರೂ ಬದುಕಿರುವುದಿಲ್ಲ.' ಜಾತಕವನ್ನು ಓದಿದ ತಂದೆ ಆನಂದಿತನಾದರೂ ಅದನ್ನು ಕಾಣುವ ಭಾಗ್ಯ ತಮಗಿಲ್ಲವಲ್ಲಾ ಎಂದು ದುಃಖಿತನೂ ಆದನು.

ಬೋಶಿ ಎಂಟು ಒಂಬತ್ತು ವರ್ಷ ವಯಸ್ಸಿನಲ್ಲಿಯೇ ವೈಜ್ಞಾನಿಕ ಸಂಶೋಧನೆಗೆ ಕೈಹಾಕಿದನು. ಅವನ ಮೊದಲನೆಯ ಸಂಶೋಧನೆಗೆ ಬಲಿಯಾಯಿತು ತಂದೆ ರಾಮೇಶ್ವರನ ಹೆಮ್ಮೆಯ ಚಿನ್ನದ ಗಡಿಯಾರ. ಅದರಿಂದ ಹೊರಹೊಮ್ಮುತ್ತಿದ್ದ ಟಿಕ್ ಟಿಕ್ ಶಬ್ದ,

ನಿಧಾನವಾಗಿ ಸರಿಯುತ್ತಾ ಸುತ್ತುತ್ತಿರುವ ಮುಳ್ಳುಗಳು ಅವನ ಕುತೂಹಲವನ್ನು ದಿನದಿನಕ್ಕೂ ಹೆಚ್ಚಿಸುತ್ತಿದ್ದವು. ಅದರ ಹೊಳೆಯುವ ಬಣ್ಣವಾಗಲೀ, ಗೋಲಾಕಾರದ ಚಿನ್ನದ ಮೈಯಾಗಲಿ ಅವನಿಗೆ ಮುಖ್ಯವಾಗಿರಲಿಲ್ಲ. ಒಳಗಿನ ಯಾವ ಶಕ್ತಿಯಿಂದ ಅದು ನಡೆಯುತ್ತಿದೆ ಎಂದು ನೋಡಲು ಅವನ ಮನಸ್ಸು ತವಕಿಸುತ್ತಿತ್ತು. ಒಂದು ದಿನ ತಂದೆ ಮನೆಯಲ್ಲಿ ಇಲ್ಲದಾಗ, ಬೋಶಿ ತುಂಬ ಜೋಪಾನವಾಗಿ, ಗಡಿಯಾರವನ್ನು ತನ್ನ ಪುಟ್ಟ ಕೈಗಳಲ್ಲಿ ಎತ್ತಿಕೊಂಡು, ಚಿಕ್ಕ ಚಿಕ್ಕ ಸ್ಕ್ರೂಗಳನ್ನು ಬಿಚ್ಚಿ, ಅದರ ಪ್ರತಿಯೊಂದು ಭಾಗವನ್ನೂ ಬೇರೆಬೇರೆಯಾಗಿ ಮಾಡಿ ಕಾಗದದ ಮೇಲೆ ಜೋಡಿಸಿ ಇಟ್ಟನು. ತಂದೆ ಹಿಂತಿರುಗಿ ಬಂದವನು ಈ ದೃಶ್ಯವನ್ನು ಕಂಡು ಗಾಬರಿಯಿಂದ ಕೂಗಿಕೊಂಡಾಗ ಹಿಂದಿನಿಂದ ಕೇಳಿ ಬಂದಿತು ಪುಟ್ಟ ಹುಡುಗನ ಕೋಮಲ ಕಂಠಸ್ವರ. ಅತ್ಯಂತ ಗರ್ವದಿಂದ ಬೋಶಿ ಹೇಳಿದ್ದನು, ''ನಾನೇ ಅಪ್ಪಾ! ನಾನೇ ಯಾರ ಸಹಾಯವೂ ಇಲ್ಲದೆ ಅದನ್ನು ಬಿಚ್ಚಿ ಇಟ್ಟಿದ್ದೇನೆ!''

ರಾಮೇಶ್ವರನ ಇಬ್ಬರು ದೊಡ್ಡ ಮಕ್ಕಳಾದ ಸುರೇಶ್ವರ ಮತ್ತು ಗುಣೇಶ್ವರರು ವಿದ್ಯಾಭ್ಯಾಸದಲ್ಲಿ ತಂದೆ ಬಯಸಿದಂತೆ ಮುಂದೆ ಬರಲಿಲ್ಲ. ಸುರೇಶ್ವರನು ಆರಾಮವಾಗಿ ತಿರುಗಿಕೊಂಡಿರುವ ಲಘು ಪ್ರವೃತ್ತಿಯವನಾದರೂ ಮುಂದೆ ಶ್ರೀಮಾತೆ ಶಾರದಾದೇವಿಯವರ ಸೇವೆಯನ್ನು ಭಕ್ತಿಯಿಂದ ಮಾಡಿದ್ದರಿಂದ ರಾಮಕೃಷ್ಣರ ಭಕ್ತರ ನಡುವೆ ಭಕ್ತ ಸುರೇಶ್ವರ ಸೇನ್ ಎಂದು ಹೆಸರುವಾಸಿಯಾಗಿದ್ದನು. ಶ್ರೀಮಾತೆಯೂ ಪ್ರೀತಿಯಿಂದ ಈತನನ್ನು ಎರಡನೆಯ ಗಿರೀಶ್ ಘೋಷ್ ಎಂದು ಕರೆಯುತ್ತಿದ್ದರು.

ವಿದ್ಯಾಕಾಂಕ್ಷೆ: ಬೋಶಿಯ ಆನಂದದ ದಿನಗಳು ಅವನು ಹನ್ನೆರಡು ವರ್ಷದವನಿದ್ದಾಗ ತಂದೆಯ ಸಾವಿನೊಂದಿಗೆ ಕೊನೆಯಾದವು. ನ್ಯುಮೋನಿಯಾದಿಂದ ತನ್ನ ೫೨ನೇ ವಯಸ್ಸಿನಲ್ಲಿ ರಾಮೇಶ್ವರನು ತೀರಿಕೊಂಡನು. ದುಃಖ, ದುರ್ದಿನಗಳು ಆರಂಭವಾದವು. ಬೋಶಿಯ ವಿದ್ಯಾಭ್ಯಾಸ ಇಲ್ಲಿಗೆ ಕೊನೆಗೊಂಡಿತು. ಆರಂಭದಲ್ಲಿ ಬೋಶಿ ತಾಯಿಯ ಜೊತೆಜೊತೆಗೇ ಇದ್ದು ಅವಳ ದುಃಖ ನಿವಾರಣೆಗೆ ಪ್ರಯತ್ನಿಸುತ್ತಿದ್ದರೂ, ತನ್ನ ವಯಸ್ಸಿನ ಇತರ ಹುಡುಗರಂತೆ ಶಾಲೆಗೆ ಹೋಗಲು ಆಗುತ್ತಿಲ್ಲವಲ್ಲಾ ಎಂದು ಒಳಗೊಳಗೇ ಅವನ ಮನಸ್ಸು ಬೇಯುತ್ತಿತ್ತು. ಯಾವಾಗಲೂ ತನ್ನ ವಿದ್ಯಾಭ್ಯಾಸದತ್ತ ಗಮನವಿಟ್ಟಿರುತ್ತಿದ್ದ ತಂದೆಯನ್ನು ನೆನಪಿಸಿಕೊಂಡು ಸಂಕಟದಿಂದ ಹೃದಯ ಭಾರವಾಗುತ್ತಿತ್ತು. ಕೊನೆಯಲ್ಲಿ ನಾನಾ ರೀತಿ ಚಿಂತಿಸಿ, ವಿಷ್ಣುಪುರದಿಂದ ಇಪ್ಪತ್ತು ಮೈಲಿ ದೂರದಲ್ಲಿನ ಬಾದುಲ್ ಎಂಬ ಊರಿನಲ್ಲಿದ್ದ ತನ್ನ ಅಕ್ಕನ ಸಹಾಯದಿಂದ ಓದನ್ನು ಮುಂದುವರಿಸಲು ನಿರ್ಧರಿಸಿದನು. ತಾಯಿಗೆ ಹೇಳಿದರೆ ತನ್ನನ್ನು ದೂರ ಕಳಿಸಲು ಒಪ್ಪದಿರಬಹುದೆಂದು ಯೋಚಿಸಿ, ಬೋಶಿ ಒಂದು ಬೆಳಿಗ್ಗೆ ಅಡುಗೆ ಕೋಣೆಯಲ್ಲಿ ಕೆಲಸ ಮಾಡುತ್ತಿದ್ದ ತಾಯಿಯನ್ನು ಕೊನೆಯ ಬಾರಿಯಂತೆ ಒಮ್ಮೆ ನೋಡಿ, ಸದ್ದಿಲ್ಲದೆ ಮನೆಯಿಂದ ಹೊರಬಂದನು. ಮುಂದೆ ಬೋಶಿ ಮತ್ತೆ ವಿಷ್ಣುಪುರಕ್ಕೆ ಹಿಂದಿರುಗಿದಾಗ ಆನಂದದಿಂದ ಸ್ವಾಗತಿಸಲು ತಾಯಿ ಬದುಕಿರಲಿಲ್ಲ.

ರಸ್ತೆಯಲ್ಲಿ ನಡೆಯುವಾಗ ಅವನಿಗೆ ತನ್ನ ಕಾಲಿನ ಚಪ್ಪಲಿಯತ್ತ ದೃಷ್ಟಿ ಬಿದ್ದಿತು. ಚಪ್ಪಲಿ ಕಿತ್ತುಹೋದರೆ ಮತ್ತೆ ಕೊಂಡುಕೊಳ್ಳಲು ಅಕ್ಕನ ಮನೆಯವರ ಬಳಿ ಬೇಡಿಕೊಳ್ಳಬೇಕಾಗಬಹುದು ಎಂದು ಯೋಚಿಸಿ, ಅವನು ಚಪ್ಪಲಿಗಳನ್ನು ಕೈಯಲ್ಲಿ ಹಿಡಿದುಕೊಂಡು ನಡೆಯಲಾರಂಭಿಸಿದನು. ರಸ್ತೆಯಲ್ಲಿ ತಮ್ಮ ಮನೆಯಲ್ಲಿ ಈ ಹಿಂದೆ ಕೆಲಸ ಮಾಡುತ್ತಿದ್ದ ಒಬ್ಬಳು ಹೆಂಗಸನ್ನು ಕಂಡು, ತಾನು ಅಕ್ಕನ ಮನೆಗೆ ಹೋಗುತ್ತಿರುವುದಾಗಿ ತಾಯಿಗೆ ತಿಳಿಸುವಂತೆ ಹೇಳಿ ಬೋಶಿ ಮುಂದುವರಿದನು. ಈ ರಸ್ತೆಯಲ್ಲಿ ಅವನು ಬಹುಬಾರಿ ಪ್ರಯಾಣ ಮಾಡಿದ್ದನು. ಎತ್ತಿನ ಗಾಡಿಯಲ್ಲಿ ಮೆತ್ತನೆಯ ಆಸನದ ಮೇಲೆ ಕುಳಿತು, ತಿಂಡಿ ತಿನ್ನುತ್ತಾ ಹರಟುತ್ತಾ ಅಕ್ಕನ ಮನೆಗೆ ಹೋಗಿದ್ದನು. ಈಗ ಅದೇ ಹುಡುಗ ಬರಿಗಾಲಿನಲ್ಲಿ ಹಸಿದ ಹೊಟ್ಟೆ, ಭಯ ಆತಂಕಗಳಿಂದ ಧೂಳಿನ ರಸ್ತೆಯಲ್ಲಿ ಓಡುತ್ತಲೇ ನಡೆಯುತ್ತಿದ್ದನು. ಜೇಬಿನಲ್ಲಿ ಕೆಲವೇ ನಾಣ್ಯಗಳಿದ್ದವು. ರಸ್ತೆಯ ಪಕ್ಕದ ಅಂಗಡಿಯಿಂದ ಸ್ವಲ್ಪ ಬೆಲ್ಲ ಮತ್ತು ಮಂಡಕ್ಕಿಯನ್ನು ಕೊಂಡನು. ಹೀಗೆ ಎಷ್ಟುದೂರ ನಡೆದಿದ್ದನೋ ಗೊತ್ತಿಲ್ಲ. ಕತ್ತಲಾಗುತ್ತಿದ್ದಂತೆ ದಿಕ್ಕುಗೆಟ್ಟಂತಾದ ಬೋಶಿ ಭಯ, ಆಯಾಸಗಳಿಂದ ಸೋತು ನಿಸ್ತೇಜನಾಗಿ ರಸ್ತೆಯ ಪಕ್ಕದ ಮರವೊಂದಕ್ಕೆ ಒರಗಿ ಕುಳಿತುಕೊಂಡನು. ದಣಿವಿನಿಂದ ನಿದ್ದೆಗೆ ಜಾರಿದನು. ಬೆಳಿಗ್ಗೆ ಅವನಿಗೆ ತೀರ ಹತ್ತಿರದಲ್ಲಿ ಎತ್ತಿಗೆ ಕಟ್ಟಿದ ಗಂಟೆಯ ಶಬ್ದ ಕೇಳಿಬಂತು. ಕೂಡಲೇ ಬೋಶಿ ಆ ದಿಕ್ಕಿನಲ್ಲಿ ಓಡಿ, ಎದುರಿಗೆ ಬರುತ್ತಿದ್ದ ಎತ್ತಿನ ಗಾಡಿಯಲ್ಲಿ ತನ್ನ ತಂದೆಯ ಸ್ನೇಹಿತರೊಬ್ಬರು ಬರುತ್ತಿದ್ದುದನ್ನು ಕಂಡನು. ಹತ್ತಿರ ಕರೆದ ತಂದೆಯ ಆ ಸ್ನೇಹಿತರಿಗೆ ಮನಸ್ಸು ಬಿಚ್ಚಿ ಎಲ್ಲಾ ವಿಚಾರವನ್ನೂ ತಿಳಿಸಿ, ಅವರ ಸಹಾಯದಿಂದ ಬೇಗನೆ ಅಕ್ಕನ ಮನೆಯನ್ನು ತಲುಪಿದನು.

ಬಾದುಲ್ ಹಳ್ಳಿಯಲ್ಲಿ ಒಳ್ಳೆಯ ಶಾಲೆಗಳಿರಲಿಲ್ಲ. ಹೀಗಾಗಿ ಅವನ ಅಕ್ಕ ಬಿಹಾರದ ರಾಂಚಿಯಲ್ಲಿದ್ದ ತನ್ನ ಇನ್ನೊಬ್ಬಳು ಸಹೋದರಿಯ ಮನೆಗೆ ಬೋಶಿಯನ್ನು ಕಳಿಸಿದಳು. ಅಲ್ಲಿಯೇ ಅವನು ತನ್ನ ಶಾಲೆಯ ವಿದ್ಯಾಭ್ಯಾಸವನ್ನು ಮುಗಿಸಿದನು.

ಗುರುವಿನೆದುರಿಗೆ: ೧೯೦೭ರಲ್ಲಿ ಬೋಶಿ ಕಲ್ಕತ್ತದ ಸೇಂಟ್ ಕ್ಸೇವಿಯರ್ಸ್ ಕಾಲೇಜಿಗೆ ಸೇರಿಕೊಂಡನು. ೧೯೦೯ರಲ್ಲಿ ಅವನು ಎರಡನೆಯ ವರ್ಷದ ಡಿಗ್ರಿಯಲ್ಲಿ ಓದುತ್ತಿರುವಾಗ, ಆತನ ಗೆಳೆಯ ವಿಭೂತಿ ಘೋಷ್ ಬೇಲೂರು ಮಠಕ್ಕೆ ಹೊರಡುತ್ತಿದ್ದವನು ಬೋಶಿಯನ್ನು ಕರೆದನು. ಇಬ್ಬರೂ ದೋಣಿಯಲ್ಲಿ ಗಂಗೆಯನ್ನು ದಾಟಿ ಬೇಲೂರಿಗೆ ಬಂದರು. ಮಠವನ್ನು ಪ್ರವೇಶಿಸಿದ್ದೇ ವಿಭೂತಿ ನೇರವಾಗಿ, ಸ್ವಾಮಿ ವಿವೇಕಾನಂದರ ಕೊಠಡಿ ಇರುವ ಕಟ್ಟಡದ ಕೆಳಗಿನ ಅಂತಸ್ತಿನಲ್ಲಿರುವ ಒಂದು ಕೋಣೆಯನ್ನು ಪ್ರವೇಶಿಸಿದನು. ಒಳಗೆ ಹೋದಾಗ ಒಬ್ಬರು ಸಂನ್ಯಾಸಿ ಮಲಗಿರುವುದು ಕಂಡಿತು. ಡಯಾಬಿಟಿಸ್ ಮತ್ತು ಅಸ್ತಮಾಗಳಿಂದ ಅವರು ನರಳುತ್ತಿದ್ದರು. ವಿಭೂತಿ ಅವರಿಗೆ ಬೋಶಿಯ ಪರಿಚಯ ಮಾಡಿದನು. ಬೋಶಿಯ ತಲೆಯಿಂದ ಕಾಲಿನವರೆಗೂ ಅವರ ದೃಷ್ಟಿ ಹರಿಯಿತು. ನಂತರ ಸಂನ್ಯಾಸಿ ಅವರಿಗೆ ಹಾಕಿದ ಮೊದಲನೆಯ ಪ್ರಶ್ನೆ ''ತಲೆಗೇಕೆ ಅಷ್ಟೊಂದು ಎಣ್ಣೆ ಸುರಿದುಕೊಂಡಿದ್ದೀಯಾ?'' ಎರಡನೆಯ ಪ್ರಶ್ನೆ ''ಎಲೆ ಅಡಿಕೆ ಹಾಕುವ ಅಭ್ಯಾಸ ಇದೆ ಅಂತ ಕಾಣುತ್ತೆ...?'' ಈ

ತಿರಸ್ಕಾರ ಮತ್ತೂ ಮುಂದುವರೆಯಿತು, ''ಇಂಗ್ಲಿಷಿನವರಂತೆ ಕಾಲಿಗೆ ಬೂಟ್ಸನ್ನು ಹಾಕಿಕೊಂಡು ರಸ್ತೆಯ ಕೊಳಕನ್ನೆಲ್ಲಾ ಮೆಟ್ಟುತ್ತಾ ಇಲ್ಲಿಯವರೆಗೂ ಬಂದೆಯಾ? ಸ್ವಾಮಿ ವಿವೇಕಾನಂದರ ರಕ್ತದಿಂದ ಈ ಜಾಗ ತಯಾರಾಗಿದೆ...''. ಬೈಗುಳಗಳ ಮಳೆಯೇ ಸುರಿಯಿತು. ಬೋಶಿ ಮೌನವಾಗಿ ನಿಂತು ಕೇಳುತ್ತಿದ್ದನು. ಆದರೆ ಮನಸ್ಸಿನಲ್ಲಿಯೇ ಅಂದುಕೊಂಡನು. ''ನಾನು ಎಲ್ಲಾ ಬಲ್ಲವನಾಗಿದ್ದರೆ ನಿಮ್ಮ ಬಳಿ ಬರುವ ಅಗತ್ಯವೇನಿತ್ತು?''

ಈ ಸಂನ್ಯಾಸಿಯ ಹೆಸರು ಸ್ವಾಮಿ ಸದಾನಂದ. ಸ್ವಾಮಿ ವಿವೇಕಾನಂದರ ಮೊದಲನೆಯ ಸಂನ್ಯಾಸಿ ಶಿಷ್ಯರು. ೧೮೮೮ನೇ ಇಸವಿಯಲ್ಲಿ ಸದಾನಂದರು ಉತ್ತರಭಾರತದ ಹಾತ್‌ರಾಸ್ ಎಂಬ ಊರಿನಲ್ಲಿ ಸ್ಟೇಶನ್‌ಮಾಸ್ಟರ್ ಆಗಿದ್ದರು. ಆಗ ಅವರಿಗೆ ೨೩ ವರ್ಷ ವಯಸ್ಸು. ಹೆಸರು ಶರತ್‌ಚಂದ್ರ ಗುಪ್ತ ಎಂದಿತ್ತು. ಒಂದು ದಿನ ರೈಲ್ವೆಸ್ಟೇಶನ್ನಿನಲ್ಲಿ ಒಬ್ಬ ತರುಣ ಸಂನ್ಯಾಸಿ ಅವರ ಕಣ್ಣಿಗೆ ಬಿದ್ದನು. ಹಸಿವಿನಿಂದ ದಣಿದು ಮುಖ ಮ್ಲಾನವಾಗಿದ್ದರೂ ಆತನ ಕಣ್ಣುಗಳಿಂದ ಹೊರಹೊಮ್ಮುತ್ತಿದ್ದ ಅಲೌಕಿಕ ತೇಜಸ್ಸು ಶರತ್‌ಚಂದ್ರನನ್ನು ಆಕರ್ಷಿಸಿತು. ಅವರನ್ನು ಮನೆಗೆ ಕರೆದುಕೊಂಡು ಹೋದನು. ಕೆಲವೇ ಗಂಟೆಗಳಲ್ಲಿ ಅವನ ಜೀವನ ಹೊಸ ತಿರುವಿಗೆ ಬಂದು ನಿಂತಿತು. ಮನೆಯನ್ನೂ ಸರ್ಕಾರದ ಕೆಲಸವನ್ನೂ ತೊರೆದು ಸಂನ್ಯಾಸಿಯಾಗುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಸಂನ್ಯಾಸದ ಜೀವನ ಕಠಿಣವಾದುದ್ದೆಂದು ಅರ್ಥಮಾಡಿಸಲು ಸ್ವಾಮೀಜಿ ಹೇಳಿದರು, ''ಮನೆಮನೆಗೆ ಹೋಗಿ ಭಿಕ್ಷೆ ಬೇಡಲು ನಿನಗೆ ಸಾಧ್ಯವೆ?'' ಕೂಡಲೇ ಸ್ಟೇಶನ್ ಮಾಸ್ಟರ್ ಒಂದು ಪಾತ್ರೆಯನ್ನು ಹಿಡಿದುಕೊಂಡು, ರೈಲಿನ ಕೂಲಿಗಳು ವಾಸಿಸುತ್ತಿದ್ದ ಗುಡಿಸಲುಗಳಿಗೆ ಹೋಗಿ, ಭಿಕ್ಷೆ ಬೇಡಿ ಆಹಾರವನ್ನು ಸಂಗ್ರಹಿಸಿ ಸ್ವಾಮೀಜಿಯ ಎದುರಿಗೆ ಬಂದು ನಿಂತನು. ಹೀಗೆ ನಾನಾ ರೀತಿಯಲ್ಲಿ ಪರೀಕ್ಷಿಸಿದ ನಂತರ ಈ ತರುಣನ ನಿರಹಂಕಾರ, ವೈರಾಗ್ಯಗಳನ್ನು ಕಂಡು ಮೆಚ್ಚಿದ ಸ್ವಾಮೀಜಿ ಆತನಿಗೆ ದೀಕ್ಷೆ ಕೊಡಲು ಒಪ್ಪಿದರು. ಶರತ್‌ಚಂದ್ರ 'ಸ್ವಾಮಿ ಸದಾನಂದ'ನಾದನು.

ಮತ್ತೊಂದು ದಿನ ಕಾಲೇಜಿಗೆ ರಜೆಯಿದ್ದಾಗ ವಿಭೂತಿ ಮತ್ತು ಬೋಶಿ ಬೇಲೂರು ಮಠಕ್ಕೆ ಹೋದರು. ಸದಾನಂದರ ಕೋಣೆಯ ಹೊರಗೆ ತನ್ನ ಬೂಟ್ಸ್‌ಗಳನ್ನು ತೆಗೆಯುತ್ತಿರುವಾಗ ಒಳಗೆ ಸದಾನಂದರು ವಿಭೂತಿಯೊಂದಿಗೆ ಮಾತನಾಡುತ್ತಿರುವುದು ಬೋಶಿಗೆ ಕೇಳಿಸಿತು. ''ಓ ವಿಭೂತಿ, ನಿನ್ನ ಗೆಳೆಯ ಹೇಗಿದ್ದಾನೆ? ಆ ದಿನ ನಾನು ಒರಟಾಗಿ ಮಾತನಾಡಿಬಿಟ್ಟೆ. ರಾತ್ರಿ ನನಗೆ ನಿದ್ದೆಯೇ ಬರಲಿಲ್ಲ ...'' ಈ ಬಾರಿ ಅವರು ಬೋಶಿಯೊಂದಿಗೆ ಅತ್ಯಂತ ಪ್ರೀತಿ ಕರುಣೆಗಳಿಂದ ವ್ಯವಹರಿಸಿದರು, ''ತಮ್ಮಾ ನೀನು ಹೊಗೆಸೊಪ್ಪು ಸೇವಿಸುವೆಯಾ?'' ಬೋಶಿ ಹೌದು ಎಂದನು. ಕೂಡಲೇ ಅವರು ತಮ್ಮ ಹುಕ್ಕವನ್ನು ಅವನಿಗೆ ಕೊಟ್ಟರು. ಹೊರಡುವ ಸಮಯ ಬಂದಾಗ ಸ್ವಾಮಿ ಸದಾನಂದರು ಒಂದೇ ದೃಷ್ಟಿಯಿಂದ ಬೋಶಿಯ ಕಣ್ಣುಗಳನ್ನೇ ನಿಟ್ಟಿಸಿ ನೋಡಿ ಹೇಳಿದರು, ''ನಾನು ಪಡೆದಿರುವುದೆಲ್ಲಾ ಇನ್ನು ನಿನ್ನದು'' ಬೋಶಿಯ ಶರೀರದಲ್ಲಿ ವಿದ್ಯುತ್ ಹರಿದಂತಾಯಿತು. ಆ ಕ್ಷಣದಲ್ಲಿಯೇ ಅವನು ಸದಾನಂದರನ್ನು ತನ್ನ ಗುರುವನ್ನಾಗಿ ಸ್ವೀಕರಿಸಿದನು.

ಕ್ಷುರಸ್ಯಧಾರಾ: ಬೇಸಿಗೆಯ ರಜೆಯಲ್ಲಿ ವಿಷ್ಣುಪುರದ ತಮ್ಮ ಮನೆಗೆ ಹಿಂತಿರುಗಿದನು. ಕೆಲವೇ ದಿನಗಳಲ್ಲಿ ಸಿಸ್ಟರ್ ನಿವೇದಿತಾರಿಂದ ಒಂದು ಟೆಲಿಗ್ರಾಂ ಬಂದಿತು. ''ಬೋಶಿ, ಸದಾನಂದರ ಆರೋಗ್ಯ ತೀರ ಹದಗೆಟ್ಟಿದೆ. ಅವರ ಸೇವೆ ಮಾಡಲು ಜನ ಸಿಗುತ್ತಿಲ್ಲ. ನೀನು ದಯವಿಟ್ಟು ಕಲ್ಕತ್ತೆಗೆ ಬಾ...'' ಬೋಶಿ ಚಿಂತಗೀಡಾದನು. ಅವನು ಇನ್ನೂ ವಿದ್ಯಾರ್ಥಿ. ಮನೆಯ ಹಣಕಾಸಿನ ಪರಿಸ್ಥಿತಿ ಸ್ವಲ್ಪವೂ ಚೆನ್ನಾಗಿಲ್ಲ. ಆದರೆ ತನ್ನ ಸ್ವಭಾವಕ್ಕೆ ಅನುಗುಣವಾಗಿ ಬೋಶಿ ಉತ್ತರಿಸಿದನು. ''ಆಗಲಿ ಬರುತ್ತೇನೆ.''

ಸೋದರಿ ನಿವೇದಿತಾ ಹಾಗೂ ಸದಾನಂದರಿಬ್ಬರೂ ಸ್ವಾಮಿ ವಿವೇಕಾನಂದರ ಶಿಷ್ಯರು. ಸದಾನಂದರು ಅವರಿಗೆ ಬಂಗಾಳಿ ಭಾಷೆ ಕಲಿಯಲು ಸಹಾಯ ಮಾಡಿದ್ದರು. ಕಲ್ಕತ್ತದಲ್ಲಿ ರೋಗ ಹಬ್ಬಿ ಲಕ್ಷಾಂತರ ಜನರು ಹುಳುಗಳಂತೆ ಸತ್ತು ಬೀಳುತ್ತಿದ್ದಾಗ, ಸ್ವಾಮೀಜಿಯವರ ಕರೆಗೆ ಓಗೊಟ್ಟು ನಿವೇದಿತಾ ಮತ್ತು ಸದಾನಂದರು ತಮ್ಮ ಜೀವನವನ್ನು ಲೆಕ್ಕಿಸದೆ ಜನರ ಸಹಾಯಕ್ಕೆ ಧಾವಿಸಿ ಹೋಗಿದ್ದರು. ನಿವೇದಿತಾ ಬಾಗ್‌ಬಜಾರಿನಲ್ಲಿ ತಮ್ಮ ಶಾಲೆಯ ಬಳಿಯೇ ಒಂದು ಸಣ್ಣ ಬಾಡಿಗೆ ಮನೆಯನ್ನು ತೆಗೆದುಕೊಂಡು ಸದಾನಂದರನ್ನು ಅಲ್ಲಿ ಇರಿಸಿ, ಸೇವೆ ಮಾಡುವ ವ್ಯವಸ್ಥೆ ಮಾಡಿದರು. ಈ ನಡುವೆ ಬೋಶಿಗೆ ಸದಾನಂದರಿಂದಲೂ ಒಂದು ಪತ್ರ ಬಂದಿತು. ೩.೧೦.೧೯೦೮ರಲ್ಲಿ ಅವರು ಬರೆಯುತ್ತಾರೆ :

''ಪ್ರಿಯ ಬೋಶಿ, ಸಿಸ್ಟರ್ ಒಂದು ಬಾಡಿಗೆ ಮನೆಯ ವ್ಯವಸ್ಥೆ ಮಾಡುತ್ತಿದ್ದಾರೆ. ನಾನು ಅತ್ಯಂತ ದುರ್ಬಲನಾಗಿಬಿಟ್ಟಿದ್ದೇನೆ. ನಾನಾಗಿಯೇ ಆ ಮನೆಗೆ ಹೋಗುವ ಶಕ್ತಿಯೂ ಇಲ್ಲ. ನೀನು ಯಾವಾಗ ಇಲ್ಲಿಗೆ ಬಂದು ನನ್ನನ್ನು ಕರೆದುಕೊಂಡು ಹೋಗುವೆ? — ಇತಿ ಸದಾನಂದ.''

ಬೋಶಿ ಮತ್ತು ಅವನ ತಮ್ಮ ಮತೀಶ್ವರ, ಇವನನ್ನು ಎಲ್ಲರೂ ತಾಬು ಎಂದು ಕರೆಯುತ್ತಿದ್ದರು, ಇಬ್ಬರೂ ಸದಾನಂದರನ್ನು ಕರೆದುಕೊಂಡು ಆ ಬಾಡಿಗೆಯ ಮನೆಗೆ ಹೋದರು. ಅಲ್ಲಿ ಅವರಿಬ್ಬರಿಗೂ ಜೀವನದಲ್ಲಿ ಮರೆಯಲಾಗದಂಥ ಅನುಭವಗಳಾದವು. ಸದಾನಂದರು ಈ ಹುಡುಗರಿಂದ ತಾವು ಪಡೆಯುವ ಸೇವೆಗೆ ಪ್ರತಿಫಲವಾಗಿ ಅವರಿಬ್ಬರಿಗೆ ಆಧ್ಯಾತ್ಮಿಕ ಜೀವನದಲ್ಲಿ ಮಾರ್ಗದರ್ಶನ ನೀಡಲು ಸಿದ್ಧರಾದರು. ಈ ಯಾವುದರ ಅರಿವಿಲ್ಲದ ಬೋಶಿ ಮತ್ತು ತಾಬು ದುರ್ಬಲವಾಗಿ ಹಾಸಿಗೆ ಹಿಡಿದಿರುವ ರೋಗಿಯೊಬ್ಬನ ಸೇವೆ ಮಾಡುವ ಒಂದೇ ಉದ್ದೇಶದಿಂದ ಆ ಮನೆಯನ್ನು ಪ್ರವೇಶಿಸಿದ್ದರು. ಆ ಮೊದಲನೆಯ ದಿನದಿಂದ ಮುಂದಿನ ಎರಡು ವರ್ಷಗಳವರೆಗೂ ಅವರಿಬ್ಬರಿಗೆ ಊಹಿಸಲೂ ಸಾಧ್ಯವಾಗದಂಥ ಅಸಾಧಾರಣವಾದ ತರಬೇತಿ ಆರಂಭವಾಯಿತು. ತಾವಿನ್ನು ಹೆಚ್ಚು ಕಾಲ ಬದುಕುವುದಿಲ್ಲ ಎಂದು ಸದಾನಂದರಿಗೆ ಅರಿವಾಗಿತ್ತು. ಪ್ರೀತಿಯ ಮಾತುಗಳನ್ನಾಡಿ ಹುಡುಗರನ್ನು ತಿದ್ದುವ ಸಮಯ ಅವರಿಗಿರಲಿಲ್ಲ. ತಮ್ಮ ಜೀವನದಲ್ಲಿ ಉಳಿದ ಆ ಅಲ್ಪ ಸಮಯದ ನಡುವೆಯೇ ಈ ತರುಣರ ಎಲ್ಲಾ ಹಳೆಯ ಸಂಸ್ಕಾರಗಳನ್ನು, ಅಪವಿತ್ರತೆಯನ್ನು ಸುಟ್ಟು ಭಸ್ಮ ಮಾಡುವ ಕೆಲಸಕ್ಕೆ ಅವರು ಕೈಹಾಕಿದರು. ಅವರಿದ್ದ ಮನೆ ಕಲ್ಕತ್ತದ ಬಾಗ್‌ಬಜಾರಿನ, ಬೋಸ್

ಪಾರಾ ಲೇನ್‌ನಲ್ಲಿತ್ತು. ಮನೆಯ ಮುಂದಿನ ಬಾಗಿಲಿನ ಹೊರಗೆ ಎರಡೂ ಪಕ್ಕದಲ್ಲಿ ಕಲ್ಲಿನ ಬೆಂಚುಗಳಿದ್ದವು. ಸಂಜೆಯಾದರೆ ಅಕ್ಕ ಪಕ್ಕದ ಜನ ಆ ಕಲ್ಲಿನ ಕಟ್ಟೆಗಳ ಮೇಲೆ ಕುಳಿತು ಹರಟೆ ಹೊಡೆಯುತ್ತಿದ್ದರು. ಅಲ್ಲಿ ಕುಳಿತವರಿಗೆ ಮಾತ್ರವಲ್ಲ, ಸುತ್ತಮುತ್ತಲಿನ ಮನೆಗಳಲ್ಲಿ ಇರುವವರಿಗೂ ಈ ಮನೆಯಲ್ಲಿ ಇದ್ದಕ್ಕಿದ್ದಂತೆ ಆರಂಭವಾಗುತ್ತಿದ್ದ ಕಿರುಚಾಟ ಬೈಗುಳಗಳು ಸ್ಪಷ್ಟವಾಗಿ ಕೇಳಿಸುತ್ತಿದ್ದವು. ತಾಬು ಮಾಡುತ್ತಿದ್ದ ಯಾವುದೇ ಕೆಲಸವೂ ಗುರುವಿಗೆ (ಸದಾನಂದರಿಗೆ) ಸರಿ ಬರುತ್ತಿರಲಿಲ್ಲ. ಏನಾದರೂ ತಪ್ಪನ್ನು ತೆಗೆದು ತೋರಿಸಿಯೇ ತೋರಿಸುತ್ತಿದ್ದರು. ಶುರುವಾಗುತ್ತಿತ್ತು ಬೈಗುಳಗಳ ಜಡಿಮಳೆ. ಬೋಶಿ ರಾತ್ರಿ ಅವರ ಸೇವೆ ಮಾಡಿ ಬೆಳಿಗ್ಗೆ ಕಾಲೇಜಿಗೆ ಹೋಗುತ್ತಿದ್ದ. ತಾಬು ಓದನ್ನು ಕೈಬಿಟ್ಟಿದ್ದರಿಂದ ದಿನವಿಡೀ ಮನೆಯಲ್ಲಿಯೇ ಇದ್ದು ಅವರನ್ನು ನೋಡಿಕೊಳ್ಳುತ್ತಿದ್ದನು.

ಸದಾನಂದರಿಗೆ ಹಾಸಿಗೆಯಿಂದ ತಾವಾಗಿಯೇ ಏಳುವ ಶಕ್ತಿ ಇರಲಿಲ್ಲ. ಇಡೀ ದಿನ ತಾಬು ಅವರಿಗೆ ಬೀಸಣಿಗೆಯಿಂದ ಗಾಳಿ ಹಾಕುತ್ತಿದ್ದನು. ಉರಿಸೆಕೆಯಲ್ಲಿ ಮಂಜುಗಡ್ಡೆಯನ್ನು ತಂದು ಅವರ ಶರೀರವನ್ನು ತಣ್ಣಗೆ ಇಡಲು ಶ್ರಮಿಸುತ್ತಿದ್ದನು. ಬೋಶಿಯಂತೆ ಅವನಿಗೆ ಚುರುಕು ಬುದ್ಧಿ ಇರಲಿಲ್ಲ. ಆಗಾಗ ಇಬ್ಬರಲ್ಲಿ ಭಿನ್ನಾಭಿಪ್ರಾಯ ಬಂದು ಜಗಳವಾಗುತ್ತಿತ್ತು. ಒಮ್ಮೆ ಹೀಗೆ ಜಗಳ ಮುಗಿಯದಂತಾದಾಗ ಬೋಶಿ ಕೋಪದಿಂದ ಸದಾನಂದರಿಗೆ ಹೇಳಿದನು. ''ತಾಬುವಿನ ಜೊತೆ ಕೆಲಸಮಾಡಲು ನನಗಿನ್ನು ಸಾಧ್ಯವೇ ಇಲ್ಲ...'' ಕೂಡಲೇ ಸದಾನಂದರಿಂದ ಉತ್ತರ ಬಂತು: ''...ನೀನೇ ಮೊದಲು ಇಲ್ಲಿಂದ ಹೊರಡು. ಅವನೊಬ್ಬ ಎತ್ತಿನಂಥ ಮನುಷ್ಯನಿರಬಹುದು. ನೀನು ಮಹಾ ಬುದ್ಧಿವಂತನೆಂದುಕೊಂಡು ಮಾಡುತ್ತಿರುವುದೇನು, ಯೋಚಿಸು..'' ಇಲ್ಲಿಗೆ ಜಗಳ ನಿಂತುಹೋಯಿತು.

ಅವರಲ್ಲಿ ಯಾರ ಬಳಿಯೂ ಹಣವಿರಲಿಲ್ಲ. ಶ್ರೀರಾಮಕೃಷ್ಣರ ಗೃಹಸ್ಥ ಶಿಷ್ಯರು ಆಗಾಗ ಹಣವನ್ನು ತಂದು ಕೊಡುತ್ತಿದ್ದರು. ಪೋಲೀಸ್‌ನಾಗಿದ್ದ ಬೋಶಿಯ ಚಿಕ್ಕ ಅಣ್ಣನೂ ಆಗಾಗ ಹಣವನ್ನು ಕಳಿಸುತ್ತಿದ್ದನು. ಬೋಶಿ ಹಾಗೂ ತಾಬು ತಮ್ಮ ಸುಖವನ್ನು ಮರೆತು ಸದಾನಂದರ ಸೇವೆಯನ್ನು ಅತ್ಯಂತ ನಿಷ್ಠೆಯಿಂದ ಮಾಡುತ್ತಿದ್ದರು. ಒಮ್ಮೆ ಕೆಲದಿನಗಳಿಂದ ಪರಿಚಿತರು ಯಾರೂ ಬರದ್ದರಿಂದ ಆಗಾಗ ಸಿಗುತ್ತಿದ್ದ ಅಲ್ಪಸ್ವಲ್ಪ ಕಾಣಿಕೆಯೂ ನಿಂತುಹೋಯಿತು. ಕೈಯಲ್ಲಿದ್ದ ಹಣ ಖಾಲಿಯಾಗುವ ಹಂತಕ್ಕೆ ಬಂದಿತ್ತು. ತಾಬುವಿಗೆ ಆ ಕಡೆ ಮನಸ್ಸಿರಲಿಲ್ಲ. ಬೋಶಿಯನ್ನು ಹಣಕಾಸಿನ ಚಿಂತೆ ಕಾಡಿಸುತ್ತಿತ್ತು. ನಾಳೆ ಏನು ಗತಿ ಎಂದು ಚಿಂತಿಸುತ್ತಾ ಒಂದು ರಾತ್ರಿ ಬೋಶಿ ಕಾಗದವನ್ನು ತೆಗೆದುಕೊಂಡು, ಬ್ಯಾಂಕಿನ ಚೆಕ್ಕನ್ನು ಬರೆಯುವಂತೆ ಅದರ ಮೇಲೆ ಬರೆದನು: ''ವಿವೇಕಾನಂದರ ಬ್ಯಾಂಕ್, ಇನ್ನೂರು ರೂಪಾಯಿಗಳು'' ಮರುದಿನ ಬೆಳಗಾಗುತ್ತಿದ್ದಂತೆ ಮನೆಯ ಬಾಗಿಲನ್ನು ಯಾರೋ ತಟ್ಟುತ್ತಿರುವುದು ಕೇಳಿಸಿತು. ಬೋಶಿ ಬಾಗಿಲು ತೆರೆದಾಗ ಪರಿಚಿತ ವ್ಯಕ್ತಿಯೊಬ್ಬರು ಒಳಗೆ ಬಂದು, ಇನ್ನೂರು ರೂಪಾಯಿ! ಸರಿಯಾಗಿ ಇನ್ನೂರು ರೂಪಾಯಿಯನ್ನು ಸದಾನಂದರ ಕಾಣಿಕೆಯಾಗಿ ಕೊಟ್ಟರು. ಬೋಶಿಯ ಕಣ್ಣುಗಳು ದೊಡ್ಡದಾಗಿ ತೆರೆದುಕೊಂಡವು. ಅವನ ಮುಖದ ಭಾವವನ್ನು ಗಮನಿಸಿದ ಸದಾನಂದರು ಕೇಳಿದರು, ''ಏನಾಯಿತು ಬೋಶಿ? ವಿಚಿತ್ರವಾಗಿ ಆಡುತ್ತಿದ್ದೀಯಲ್ಲಾ?'' ಬೋಶಿ ಎಲ್ಲಾ ವಿಚಾರವನ್ನು ತಿಳಿಸಿದಾಗ ಸದಾನಂದರು ತಿರಸ್ಕಾರದಿಂದ ಹೇಳಿದರು: ''ನಾಚಿಕೆಯಾಗುವುದಿಲ್ಲವೆ ನಿನಗೆ, ಎಂಥ ಹೀನ ಬುದ್ಧಿ! ಸ್ವಾಮೀಜಿಯ ಬಳಿ ತ್ಯಾಗ ವೈರಾಗ್ಯಗಳನ್ನು ಬಿಟ್ಟು ದುಡ್ಡನ್ನು ಕೇಳಿದೆಯಾ?'' ನಂತರ ಅವರು ಸ್ವಾಮಿ ವಿವೇಕಾನಂದರು ತರುಣರಾಗಿದ್ದಾಗ ತಂದೆ ತೀರಿಕೊಂಡ ಮೇಲೆ ಪಟ್ಟ ಕಷ್ಟ, ಹಣಕಾಸಿನ ಸಹಾಯ ಕೇಳಿ ಶ್ರೀರಾಮಕೃಷ್ಣರ ಬಳಿ ಹೋಗಿದ್ದು, ಶ್ರೀರಾಮಕೃಷ್ಣರು ಅವರನ್ನು ಕಾಳಿಯ ದೇವಸ್ಥಾನಕ್ಕೆ ಕಳುಹಿಸಿದಾಗ, ಜಗನ್ಮಾತೆಯ ಬಳಿ ಹಣವನ್ನು ಕೇಳಲು ಮರೆತು ತ್ಯಾಗ ವೈರಾಗ್ಯಗಳಿಗಾಗಿ ಪ್ರಾರ್ಥನೆ ಮಾಡಿದ ಬಗ್ಗೆ ಹೇಳಿದರು. ಆದರೆ ಗುರುವಿನ ಕೃಪೆಯಿಂದ ನರೇಂದ್ರನ ತಾಯಿ ರಸ್ತೆಗಿಳಿದು ಭಿಕ್ಷೆ ಬೇಡಬೇಕಾಗಿ ಬರಲಿಲ್ಲ ಎಂದೂ ಹೇಳಿದರು. ಬೋಶಿ ಮತ್ತೆಂದೂ ಹಣ, ಸಂಪತ್ತಿಗಾಗಿ ಪ್ರಾರ್ಥನೆ ಮಾಡಲಿಲ್ಲ. ಅವರಿಗೂ ಗುರುಕೃಪೆಯಿಂದ ಎಂದೂ ಯಾವ ತೊಂದರೆಯೂ ಬರಲಿಲ್ಲ.

ಬೋಶಿ ತನ್ನ ತಂದೆಯನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದನು. ಆದರೂ ಒಮ್ಮೆ ಸದಾನಂದರ ಎದುರಿಗೆ ಹೇಳಿದ, ''ನಮಗೋಸ್ಕರ ತಂದೆ ಏನನ್ನೂ ಉಳಿಸಿ ಹೋಗಲಿಲ್ಲ. ಅವರು ತೀರಿಕೊಂಡ ಮೇಲೆ ನಾವು ಅನಾಥರಾಗಿ ಹೋದೆವು.'' ''ಅಪ್ಪನ ವಿರುದ್ಧವಾಗಿ ಮಾತನಾಡುವೆಯಾ?'' ಸ್ವಾಮಿ ಸದಾನಂದರು ಗರ್ಜಿಸಿದರು. ''...ಅವರು ನಿನಗೆ ಈ ಆರೋಗ್ಯವಂತ ಶರೀರವನ್ನೂ, ವಿದ್ಯೆಬುದ್ಧಿಗಳನ್ನೂ ಕೊಟ್ಟು ಹೋಗಿದ್ದಾರೆ, ಇದಕ್ಕಿಂತ ಹೆಚ್ಚಾಗಿರುವುದು ಏನಿದೆ ಹೇಳು?'' ಆ ರಾತ್ರಿ ಸದಾನಂದರು ಬೋಶಿಯ ತಲೆಯನ್ನು ನೇವರಿಸಿ ರಾಗವಾಗಿ ಒಂದು ಸಂಸ್ಕೃತ ಶ್ಲೋಕವನ್ನು ಹೇಳಿದರು.

ಕಸ್ತ್ವಂ ಕೋऽಹಂ ಕುತ ಆಯಾತಃ ಕಾ ಮೇ ಜನನೀ ಕೋ ಮೇ ತಾತಃ ।
ಇತಿ ಪರಿಭಾವಯ ಸರ್ವಮಸಾರಂ ವಿಶ್ವಂ ತ್ಯಕ್ತ್ವಾ ಸ್ವಪ್ನವಿಚಾರಮ್ ॥

(ನೀನು ಯಾರು? ಎಲ್ಲಿಂದ ಬಂದೆ? ನಿನ್ನ ತಾಯಿ, ತಂದೆ ಯಾರು? ವಿಚಾರ ಮಾಡು. ಈ ಜೀವನ ಅರ್ಥವಿಲ್ಲದ್ದು - ಕನಸಿನಂತೆ. ಇದನ್ನು ತ್ಯಾಗಮಾಡು.)

ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಒಳ್ಳೆಯ ಗುರು ಹೇಗಾದರೂ ಮಾಡಿ ಶಿಷ್ಯನು ಮುಕ್ತಿಯ ಪಥದಲ್ಲಿ ಮುಂದುವರಿಯುವಂತೆ ಮಾಡುತ್ತಾನೆ. ಅಂಥ ಗುರುವಿನ ಕೈಯಲ್ಲಿ ತರಬೇತಿ ಪಡೆಯಲು ಶಿಷ್ಯನಲ್ಲೂ ವೈರಾಗ್ಯ, ಭಕ್ತಿಗಳಿರಬೇಕು. ಬೋಶಿಯೂ ಸಂಪೂರ್ಣ ವಿಶ್ವಾಸ, ಶರಣಾಗತಿಗಳೊಂದಿಗೆ ಈ ಶಿಕ್ಷಣಕ್ಕೆ ತನ್ನನ್ನು ಒಪ್ಪಿಸಿಕೊಂಡ.

ಒಂದು ದಿನ ಬೆಳಗಿನ ಜಾವ ಮೂರು ಗಂಟೆಯಾಗಿತ್ತು. ಬೋಶಿ ಸದಾನಂದರ ಮಂಚದ ಪಕ್ಕದಲ್ಲಿಯೇ ನೆಲದ ಮೇಲೆ ಮಲಗಿದ್ದನು. ನಿದ್ದೆ ಬಂದರೂ ಅವನ ಒಳಮನಸ್ಸು ಜಾಗೃತವಾಗಿರುತ್ತಿತ್ತು. ಆದರೆ ಆ ದಿನ ಅವನಿಗೆ ಚೆನ್ನಾಗಿಯೇ ನಿದ್ದೆ ಬಂದಿತ್ತು. ಸದಾನಂದರು ನೀರನ್ನು ಕೇಳಿದರು. ಅಭ್ಯಾಸದ ಬಲದಿಂದ ಬೋಶಿ ಎದ್ದು ಕುಳಿತು ನೀರಿನ ಲೋಟವನ್ನು ಎತ್ತಿಹಿಡಿದನು. ಕಣ್ಣಿನ ಮಂಪರು ಇನ್ನೂ ಹೋಗಿರಲಿಲ್ಲ. ಸ್ವಲ್ಪ ನೀರು ಚೆಲ್ಲಿ ಹೋಯಿತು. ಸದಾನಂದರು ಲೋಟದಲ್ಲಿದ್ದ ನೀರನ್ನು ಅವನ ಮುಖದ ಮೇಲೆ ಎಸೆದರು. ''ಇನ್ನು ನಾನೇ ನಿನ್ನ ಸೇವೆ ಮಾಡಬೇಕೆಂದು ಕಾಣುತ್ತದೆ.... ಜೀವನವನ್ನು ನಿದ್ದೆಯಲ್ಲಿಯೇ ಮುಗಿಸಿಬಿಡುವೆಯಾ?''

ಶ್ರೀರಾಮಕೃಷ್ಣರು ಹೇಳುತ್ತಿದ್ದ ಕಥೆಗಳನ್ನು ಸದಾನಂದರು ತಮ್ಮ ಈ ತರುಣ ಸೇವಕರಿಗೆ ಆಗಾಗ ಹೇಳುತ್ತಿದ್ದರು. ನಿಷ್ಠೆಯಿಂದ ಸಂಸಾರದ ಕೆಲಸ ಮಾಡುತ್ತಾ ಭಗವಂತನ ಕೃಪೆಯನ್ನು ಪಡೆದ ರೈತನೊಬ್ಬನ ಕಥೆಯನ್ನು ಹೇಳಿದ್ದರು. ದೇವರ ಹೆಸರಿನಲ್ಲಿ ವಿಶ್ವಾಸ ವಿಟ್ಟು ನದಿಯನ್ನು ನಡೆದೇ ದಾಟಿದ ಹಾಲು ಮಾರುವವಳ ಕಥೆಯನ್ನು ಹೇಳಿದ್ದರು. ಪ್ರತಿಯೊಬ್ಬ ವ್ಯಕ್ತಿಯ ಕಷ್ಟಗಳ ಮೂಲವೇ ಅಹಂಕಾರ. ''ಪ್ರಭು ನಾನಲ್ಲ, ನಾನಲ್ಲ, ಕೇವಲ ನೀನು, ನೀನು'' ಎಂದು ಮನುಷ್ಯ ನಮ್ರನಾಗುವವವರೆಗೆ ಪಡಬೇಕಾದ ಕಷ್ಟಗಳನ್ನು ಮನದಟ್ಟು ಮಾಡಲು ರಾಮಕೃಷ್ಣರು ಕೊಡುತ್ತಿದ್ದ ಉಪಮೆಗಳನ್ನು ವಿವರಿಸಿ ಹೇಳುತ್ತಿದ್ದರು.

ಒಮ್ಮೆ ಗ್ರೇಟ್ ಈಸ್ಟರ್ನ್ ಹೋಟೆಲಿನಿಂದ ಬ್ರಿಟಿಷರ ಆಹಾರವನ್ನು ಕೊಂಡು ತರುವಂತೆ ಸದಾನಂದರು ಹೇಳಿದರು. ವಿವಿಧ ರೀತಿಯ ಆಹಾರ ಪದಾರ್ಥಗಳನ್ನು ತರಲಾಯಿತು. ಅವರು ತಟ್ಟೆಯನ್ನೊಮ್ಮೆ ವೀಕ್ಷಿಸಿ, ಬೋಶಿಗೆ ಹೇಳಿದರು. ''ಶುರುಮಾಡು ಬೋಶಿ'' ಬೋಶಿ ಗಾಬರಿಯಾದನು. ತಟ್ಟೆಯಲ್ಲಿದ್ದ ಮಾಂಸದ ಸಾರು ದನದ ಮಾಂಸವಿರಬಹುದೆಂದು ಹೆದರಿ ತಟ್ಟೆಗೆ ಕೈಹಾಕಲು ಹಿಂದೇಟು ಹಾಕಿದನು. ಮತ್ತೆ ಸದಾನಂದರು ಒತ್ತಾಯ ಮಾಡುತ್ತಾ ಅವನಿಗೆ ಹೇಳಿದರು, ''ಧರ್ಮ ಅಡುಗೆಯ ಪಾತ್ರೆಯಲ್ಲಿಲ್ಲ! ನಮ್ಮ ಹೃದಯದಲ್ಲಿದೆ. ಧರ್ಮ ಕೇವಲ ಆಚರಣೆಯಲ್ಲ , ಅದು ಮನುಷ್ಯನಲ್ಲಿಯ ಪೂರ್ಣತೆಯ ವಿಕಾಸ. ಶಾಸ್ತ್ರಗಳಲ್ಲಿ, ಪೂಜೆಯ ಪದ್ಧತಿಗಳಲ್ಲಿ ಧರ್ಮವಿಲ್ಲ, ಬೌದ್ಧಿಕ ತರ್ಕ-ಯುಕ್ತಿಗಳಲ್ಲಿಯೂ ಇಲ್ಲ'' ಹೀಗೆಂದು ಅವರು ಸ್ವಾಮಿ ವಿವೇಕಾನಂದರ ಜೀವನದ ಕೆಲವು ಘಟನೆಗಳನ್ನು ಉದಾಹರಣೆಯಾಗಿ ಹೇಳಿದರು.

ಆಗಲೇ ಬಂಗಾಳದ ಯುವಕರಲ್ಲಿ ಬ್ರಿಟಿಷರ ವಿರುದ್ಧ ಮನೋಭಾವ ತೀವ್ರವಾಗಿ ಜಾಗೃತವಾಗಿತ್ತು. ಅರವಿಂದರೇ ಮುಂತಾದ ಉಗ್ರಗಾಮಿಗಳು ಸೋದರಿ ನಿವೇದಿತಾ ಮನೆಗೆ ಬಂದು ವಿವಿಧ ರೀತಿಯ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು. ನಿವೇದಿತಾ ಭಾರತದ ಸ್ವಾತಂತ್ರ್ಯ ಚಳುವಳಿಗೆ ಬೆಂಬಲವಾಗಿ ನಿಂತಿದ್ದರು. ಯುವಕ ಬೋಶಿಗೂ ಇದರ ಬಿಸಿ ತಗುಲಿತು. ಅವಕಾಶ ಸಿಕ್ಕಾಗಲೆಲ್ಲಾ ಬ್ರಿಟಿಷರ ವಿರುದ್ಧವಾಗಿ ಅವನು ಧ್ವನಿ ಎತ್ತುತ್ತಿದ್ದನು. ಈ ಎಲ್ಲಾ ವಿಚಾರಗಳು ಸದಾನಂದರ ಗಮನಕ್ಕೆ ಬಾರದೆ ಇರಲಿಲ್ಲ. ಅವರೊಮ್ಮೆ ಬೋಶಿಯನ್ನು ಕೇಳಿದರು, ''ಭಾರತದಲ್ಲಿ ಬ್ರಿಟಿಷ್ ನಾಗರಿಕರ ಸಂಖ್ಯೆ ಎಷ್ಟಿರಬಹುದು?'' ''ಐವತ್ತು ಸಾವಿರವಿರ ಬೇಕು'' ಬೋಶಿ ಉತ್ತರಿಸಿದನು. ''ನಾವು ಎಷ್ಟು ಜನರಿದ್ದೀವಿ?'' ''೩೦ ಕೋಟಿ'', ಉತ್ತರ ಕೇಳಿ ಸದಾನಂದರು ಗಂಭೀರವಾಗಿ ಬೋಶಿಯನ್ನು ನಿಟ್ಟಿಸಿ ನೋಡಿ ಹೇಳಿದರು. ''ಈಗ ಹೇಳು ನಮ್ಮ ಗುಲಾಮತನಕ್ಕೆ ಕಾರಣವೇನು? ಬ್ರಿಟಿಷರಲ್ಲಿರುವ ಶಕ್ತಿಯೊ? ಅಥವಾ ನಮ್ಮ ದುರ್ಬಲತೆಯೊ?'' ಬೋಶಿ ನಿರುತ್ತರನಾದನು. ತುಂಬ ಕಳಕಳಿಯಿಂದ ಅವರು ಮುಂದುವರೆಸಿದರು. ''ನಿನ್ನ ಚಾರಿತ್ರ್ಯವನ್ನು ದೃಢಗೊಳಿಸಿಕೋ ಬೋಶಿ. ದೇಶಕ್ಕೆ ಶಾಶ್ವತವಾದದ್ದೇನಾದರೂ ಕೊಡು. ಅವರಿವರ ವಿರುದ್ಧವಾಗಿ ಕೂಗಾಡಿ ಯಾವುದೇ ಪ್ರಯೋಜನವಿಲ್ಲ.'' ಸ್ವಾಮಿ ವಿವೇಕಾನಂದರು ಯಾವುದೇ ರೀತಿಯ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ಮಠದ ಸಂನ್ಯಾಸಿಗಳಿಗೆ ಎಚ್ಚರಿಕೆ ನೀಡಿದ್ದರು. ಸ್ವಾಮೀಜಿ ದೇಶದ ತರುಣರಿಂದ ಬಯಸುತ್ತಿದ್ದುದ್ದು ಏನೆಂದು ಸದಾನಂದರು ಬೋಶಿಗೆ ಅರ್ಥ ಮಾಡಿಸಿದರು.

ಈ ಹಿಂದೆ ಬಾಗ್‌ಬಜಾರಿನಲ್ಲಿ ಶ್ರೀಮಾತೆ ಶಾರದಾದೇವಿಯವರು ಇದ್ದ ಮನೆಯಲ್ಲಿಯೇ ಸದಾನಂದರು ಕೆಲಕಾಲ ನೆಲೆಸಿದ್ದರು. ಅವರು ಒಂದೇ ಒಂದು ಸಲ ಶ್ರೀಮಾತೆಯ ದರ್ಶನ ಪಡೆದಿದ್ದರು. ಆ ದಿನ ಶ್ರೀಮಾತೆಯ ಶ್ರೀಚರಣಗಳಿಗೆ ವಂದಿಸಿ, ತಮ್ಮ ಶರೀರ ಮನಸ್ಸುಗಳು ಅಪೂರ್ವವಾದ ಪವಿತ್ರ ಭಾವದಲ್ಲಿ ತುಂಬಿ ಹೋಗಿರುವ ಅನುಭವವನ್ನು ಪಡೆದಿದ್ದರು. ತಮ್ಮ ಜೀವನದ ಈ ಅಂತಿಮ ಸಮಯದಲ್ಲಿ ಮತ್ತೊಮ್ಮೆ ಆ ಪವಿತ್ರತೆಯಲ್ಲಿ ಮೀಯಲು ಅವರ ಮನಸ್ಸು ಹಾತೊರೆಯಿತು. ತಮ್ಮ ಈ ಇಚ್ಛೆಯನ್ನು ಅವರು ಸ್ವಾಮಿ ಶಾರದಾನಂದರಿಗೆ ನಿವೇದಿಸಿದರು. ಇದನ್ನು ತಿಳಿದ ಕೂಡಲೇ ಶ್ರೀಮಾತೆ ಸದಾನಂದರನ್ನು ಕಾಣಲು ಅವರಿದ್ದ ಮನೆಗೆ ಬಂದರು. ಸದಾನಂದರು ಕೈಮುಗಿದುಕೊಂಡು ಕರುಣಾರ್ದ್ರ ಕಂಠದಲ್ಲಿ ಹೇಳಿದರು, ''ಅಮ್ಮಾ ಈ ಹಿಂದೆ ನನಗೆ ಕೃಪೆ ಮಾಡಿದ್ದೀರಿ. ಮತ್ತೊಮ್ಮೆ ನಿಮ್ಮ ಕೃಪೆಯನ್ನು ಯಾಚಿಸುತ್ತೇನೆ...'' ಶ್ರೀಮಾತೆ ಹೇಳಿದರು, ''ಮಗು, ಶ್ರೀರಾಮಕೃಷ್ಣರು ನಿನಗಾಗಿ ಕಾಯುತ್ತಿದ್ದಾರೆ.'' ಸದಾನಂದರು ಬಿಡಲಿಲ್ಲ, ಶ್ರೀಮಾತೆ ಪಾದದಿಂದ ತಮ್ಮ ತಲೆಯನ್ನು ಸ್ಪರ್ಶಿಸುವಂತೆ ಮತ್ತೆ ಮತ್ತೆ ಬೇಡಿಕೊಳ್ಳತೊಡಗಿದರು. ಶ್ರೀಮಾತೆ ಕೊನೆಗೂ ಒಪ್ಪಿಕೊಳ್ಳಲೇಬೇಕಾಯಿತು. ಸದಾನಂದರ ಮನಸ್ಸು ಶಾಂತಿಯಿಂದ ತುಂಬಿಹೋಯಿತು. ಅವರೆಂದರು, ''ಈಗ ನನಗೆ ಇಲ್ಲಿಂದ ಹೊರಡುವ ಟಿಕೆಟ್ ಸಿಕ್ಕಿತು.'' ಇದಾದ ಕೆಲವೇ ದಿನಗಳಲ್ಲಿ - ೧೮.೦೨.೧೯೧೧ರಂದು ಅವರು ದೇಹತ್ಯಾಗ ಮಾಡಿದರು. ಬೋಶಿ ಮತ್ತು ತಾಬು ಅನಾಥರಂತಾಗಿ ಬಿಡುತ್ತಾರೆಂದು ಎಲ್ಲರೂ ಅಂದುಕೊಂಡಿದ್ದರು. ಆದರೆ ಅವರಿಗೆ ಗುರು ಸದಾನಂದರಿಂದ ಸರಿಯಾದ ಶಿಕ್ಷಣ ಸಿಕ್ಕಿತ್ತು. ಜನ್ಮ ಹಾಗೂ ಸಾವಿನ ಆಚೆಗಿದೆ ಅಮರವಾದ ಆತ್ಮ. ಈ ಆತ್ಮವೇ ನಾನು, ಶರೀರವಲ್ಲ. ಶರೀರ ಎರಡು ದಿನದ್ದು ಮಾತ್ರ. ಗುರುವಿನ ಹೆಸರೇ 'ಸದಾನಂದ.' ಅವರು ತಮ್ಮ ಈ ಯುವ ಶಿಷ್ಯರಿಗೆ ಅದನ್ನೇ ಕೊಟ್ಟುಹೋದರು.

ಸ್ವಾಮಿ ವಿವೇಕಾನಂದರ ಅಮೆರಿಕನ್ ಶಿಷ್ಯೆಯಾದ ಸಿಸ್ಟರ್ ಕ್ರಿಸ್ಟೀನ್ ನಿವೇದಿತಾ ಸ್ಕೂಲಿನಿಂದ ಸದಾನಂದರನ್ನು ನೋಡಲು ಬರುತ್ತಿದ್ದರು. ಬೋಶಿ ಮತ್ತು ತಾಬು ಎಷ್ಟು ಪ್ರೀತಿಯಿಂದ ಸದಾನಂದರನ್ನು ನೋಡಿಕೊಳ್ಳುತ್ತಿದ್ದರೆಂದು ಕಣ್ಣಾರೆ ಕಂಡ ಕ್ರಿಸ್ಟೀನ್ ಬರೆಯುತ್ತಾರೆ: ''ಗುರು-ಶಿಷ್ಯರೆಂಬ ಭಾವವೇ ಅಲ್ಲಿರಲಿಲ್ಲ. ಆ ಎರಡು ವರ್ಷಗಳಲ್ಲಿ ಸದಾನಂದರು ತಾವು ವಿವೇಕಾನಂದರಿಂದ ಕಲಿತದ್ದನ್ನೆಲ್ಲಾ ತಮ್ಮ ಈ ಶಿಷ್ಯರಿಗೆ ಕೊಟ್ಟಿದ್ದರು. ಈಗಲೂ ನಾನು ಬೋಶಿಯಲ್ಲಿ ಆ ಭಾವ ತುಂಬಿರುವುದನ್ನು ಕಾಣುತ್ತೇನೆ. ಸದಾನಂದರು ಈ ಹುಡುಗರಿಗೆ ಹೇಳಿದ್ದರು, 'ನಾನು ಒಂದೇ ಒಂದು ಕೆಲಸವನ್ನು ನಿಮಗಾಗಿ ಮಾಡಬಲ್ಲೆ. ಸ್ವಾಮೀಜಿಯ ಬಳಿ ನಿಮ್ಮನ್ನು ಕರೆದೊಯ್ಯಬಲ್ಲೆ!' 'ಅಷ್ಟೇ ಸಾಕು' ಎಂದು ಅವರಿಬ್ಬರೂ ಕೂಗಿ ಹೇಳುತ್ತಿದ್ದರು. ಹುಡುಗರಿಬ್ಬರೂ ಆನಂದವಾಗಿದ್ದರು. ಆದರೆ

ಹೊರಗಿನ ಜನರ ದೃಷ್ಟಿಯೇ ಬೇರೆ. 'ಈ ಗುರುವಿನ ಬೈದಾಟ ಕಿರುಚಾಟಗಳ ನಡುವೆ ಈ ಬಡಪಾಯಿಗಳದ್ದು ಎಂಥ ಕಷ್ಟದ ಜೀವನವಪ್ಪಾ?' ಎಂದು ಅವರು ಮಾತನಾಡಿಕೊಳ್ಳುತ್ತಿದ್ದರು...''

ಸದಾನಂದರು ತೀರಿಹೋದ ಮೇಲೆ ಬೋಶಿ ಒಂದು ದಿನ 'ಉದ್ಬೋಧನ' ಮನೆಯಲ್ಲಿದ್ದ ಶ್ರೀಮಾತೆಯವರನ್ನು ಕಾಣಲು ಹೋದನು. ಶ್ರೀಮಾತೆಯ ಎದುರಿಗೇ ಸ್ವಾಮಿ ಶಾರದಾನಂದರು ಹೇಳಿದರು, ''ಬೋಶಿ, ಸದಾನಂದ ನಿನಗೆ ಮಂತ್ರದೀಕ್ಷೆ ಕೊಡಲಿಲ್ಲ. ನೀನು ದೀಕ್ಷೆ ಕೊಡುವಂತೆ ಶ್ರೀಮಾತೆಯವರನ್ನು ಕೇಳಿಕೋ.'' ಬೋಶಿ ಮೌನವಾಗಿ ನಿಂತಿದ್ದನು. ಶ್ರೀಮಾತೆ ಅಂತರ್ಯಾಮಿ. ಅವರೆಂದರು, ''ಇಲ್ಲ, ಬೋಶಿಗೆ ಮಂತ್ರದೀಕ್ಷೆ ಬೇಕಾಗಿಲ್ಲ.'' ಹೌದು, ಸದಾನಂದರು ಆಧ್ಯಾತ್ಮಿಕ ಜೀವನಕ್ಕೆ ಬೇಕಾದುದನ್ನೆಲ್ಲಾ ಅವನಿಗೆ ಕೊಟ್ಟು ಹೋಗಿದ್ದಾರೆ. ಬೋಶಿಗೆ ಈಗ ಬೇಕಾಗಿರುವುದು ಕೇವಲ ಶ್ರೀಮಾತೆಯ ಕೃಪೆ ಮಾತ್ರ. ಸದಾನಂದರೊಂದಿಗಿನ ಆ ಎರಡು ವರ್ಷಗಳ ಒಡನಾಟದಿಂದ ಬೋಶಿಗೆ ಈಗ ಚೆನ್ನಾಗಿ ಅರಿವಾಗಿತ್ತು – ಆಧ್ಯಾತ್ಮಿಕ ಜೀವನ ಅಂತರ್ಮುಖ ಜೀವನ. ಸಾಧಕನ ಹೋರಾಟ ತನ್ನಲ್ಲಿನ ಅಹಂಕಾರ, ಅಪವಿತ್ರತೆಗಳೊಂದಿಗೆ. ಮನುಷ್ಯನ ಮನಸ್ಸನ್ನು ಆತ್ಮಜಾಗೃತಿಯತ್ತ ಪ್ರೇರೇಪಿಸಲು ಜಗತ್ತಿನ ವಿವಿಧ ಭಾಗಗಳಿಗೆ ಬಿರುಗಾಳಿಯಂತೆ ಹೋದ ವಿವೇಕಾನಂದರೇ ನಿಜವಾದ ಕ್ರಾಂತಿಕಾರಿ.

ವೈಜ್ಞಾನಿಕ ಅನ್ವೇಷಣೆ: ಸ್ವಾಮಿ ಸದಾನಂದರು ತೀರಿಕೊಂಡ ಮೇಲೆ ಕೂಡ ಬೋಶಿ ಆ ಬಾಡಿಗೆ ಮನೆಯನ್ನು ಬಿಡಲಿಲ್ಲ. ಸಿಸ್ಟರ್ ನಿವೇದಿತಾ ಮೊದಲಿನಂತೆಯೇ ಅದರ ಬಾಡಿಗೆಯನ್ನು ಕಟ್ಟುತ್ತಿದ್ದರು. ಬೋಶಿ B.Sc. ಮುಗಿಸಿ M.Sc. ಸೇರಲು ಯೋಚಿಸುತ್ತಿದ್ದರು. ಹಣಕಾಸಿನ ಚಿಂತೆ ಮೊದಲಿನಂತೆಯೇ ಕಾಡುತ್ತಿತ್ತು. ಬೋಶಿಯ ಮನೆಗೆ ರಾಮಕೃಷ್ಣ ಮಠದ ಸಂನ್ಯಾಸಿ ಬ್ರಹ್ಮಚಾರಿಗಳು ಆಗಾಗ ಬರುತ್ತಿದ್ದರು. ಬ್ರಹ್ಮಚಾರಿಗಳಲ್ಲಿ ಕೆಲವರು ತಮ್ಮದೇ ವಯಸ್ಸಿನ ಬೋಶಿಗೆ ಹೇಳುತ್ತಿದ್ದರು, ''ಈ ಜೀವನದಲ್ಲಿಯೇ ಶಾಶ್ವತವಾದುದನ್ನು ಪಡೆಯಲು ಯತ್ನಿಸು.'' ಬೋಶಿ ಚಿಂತೆಗೀಡಾದರು. ರಾಮಕೃಷ್ಣ ಮಠಕ್ಕೆ ಸೇರಲು ನಿರ್ಧರಿಸಿ, ತಮ್ಮ ಮನೆಯ ಬಳಿಯಲ್ಲಿ ಇರುವ ಬಲರಾಮ ಬಸುವಿನ ಮನೆಯಲ್ಲಿದ್ದ ಸ್ವಾಮಿ ಬ್ರಹ್ಮಾನಂದರನ್ನು ಕಾಣಲು ಹೋದರು. ಬೋಶಿಯನ್ನು ಕಂಡೊಡನೆಯೇ ಬ್ರಹ್ಮಾನಂದರು ಕೇಳಿದರು. ''ವಿಜ್ಞಾನದಲ್ಲಿ ಇತ್ತೀಚೆಗೆ, ಆದ ಹೊಸ ಅನ್ವೇಷಣೆಯ ಬಗ್ಗೆ ಸ್ವಲ್ಪ ಹೇಳು.'' ಬೋಶಿ ಇಲೆಕ್ಟ್ರಾನ್‌ಗಳ ವಿಚಾರವಾಗಿ ಅವರಿಗೆ ವಿವರಿಸಿದನು. ವಿಜ್ಞಾನದ ವಿವಿಧ ಕೊಡುಗೆಗಳ ಬಗ್ಗೆ ಹೇಳಿದನು. ಅವನು ಮಾತನ್ನು ನಿಲ್ಲಿಸಿದ ಕೂಡಲೇ ಬ್ರಹ್ಮಾನಂದರು ಹೇಳಿದರು. ''ನೀನು ವಿಜ್ಞಾನದ ಅಧ್ಯಯನವನ್ನು ಮುಂದುವರೆಸು. ಬೋಶಿ, ಈ ವಿಜ್ಞಾನದ ಮೂಲಕವೇ ನಿನಗೆ ಎಲ್ಲವೂ ಸಿಗುತ್ತದೆ.'' ಬೋಶಿಯ ಮನಸ್ಸಿನ ದ್ವಂದ್ವ ದೂರವಾಯಿತು. ತನ್ನ ಮುಂದಿನ ಜೀವನ ಯಾವ ದಾರಿಯಲ್ಲಿ ಮುಂದುವರಿಯಲಿದೆ ಎಂದು ಸ್ಪಷ್ಟವಾಯಿತು.

ಸಿಸ್ಟರ್ ನಿವೇದಿತಾ ವಿಜ್ಞಾನಿ ಜಗದೀಶಚಂದ್ರ ಬೋಸ್‌ರಿಗೆ ಬೋಶಿಯ ಪರಿಚಯ ಮಾಡಿಕೊಟ್ಟರು. ಈಗಾಗಲೇ ಡಾ. ಜಗದೀಶ್ ಚಂದ್ರ ಬೋಸರು ವೈಜ್ಞಾನಿಕ ಕ್ಷೇತ್ರದಲ್ಲಿ ದೇಶ ವಿದೇಶಗಳಲ್ಲಿ ಪ್ರಖ್ಯಾತರಾಗಿದ್ದರು. ೨೧.೧೦.೧೮೯೦ರಲ್ಲಿ ಬ್ರಿಟಿಷ್ ಅಸೋಸಿಯೇಶನ್‌ನ್ನಲ್ಲಿ ತಮ್ಮ ಸಂಶೋಧನೆಗಳನ್ನು ಕುರಿತು ಅವರು ಭಾಷಣ ಮಾಡಿದ ನಂತರ ಹೊರದೇಶಗಳ ವಿವಿಧ ವೈಜ್ಞಾನಿಕ ಸಂಸ್ಥೆಗಳಿಂದ ಅವರಿಗೆ ಕರೆ ಬರಲಾರಂಬಿಸಿತು. ೧೮೯೬ರ ಅಕ್ಟೋಬರ್ ೨೫ರ ಲಂಡನ್ ಟೈಮ್ಸ್ ಪತ್ರಿಕೆ ಬರೆಯುತ್ತದೆ, ''Strikingly original Researches on the Polorization of the electric Ray ...'' ಡೈಲಿ ಕ್ರಾನಿಕಲ್ ಪತ್ರಿಕೆ ಬರೆಯುತ್ತದೆ, (೧೮.೧೧.೧೮೯೬) ''It is telegraphy without any kind of intervening conductor... this alone will be a priceless benifit to the human race''

''ಜಡವಸ್ತುವಿನಲ್ಲಿಯೂ ಪ್ರಾಣವಿದೆ. ಚೈತನ್ಯ ಎಲ್ಲೆಡೆಯೂ ಓತಪ್ರೋತವಾಗಿದೆ. ಮೊದಲು ಮರಗಿಡಗಳಲ್ಲಿ, ನಂತರ ಕಲ್ಲು ಲೋಹಗಳಲ್ಲಿ ಪ್ರಾಣವಿರುವುದನ್ನು ಪ್ರಮಾಣ ಮಾಡಿ ತೋರಿಸುತ್ತೇನೆ'' ಎಂದು ಸ್ವಾಮಿ ವಿವೇಕಾನಂದರ ಅನುಯಾಯಿಗಳಾದ ಸಾರಾಬುಲ್ ಮತ್ತು ಮಾರ್ಗರೆಟ್ ನೊಬೆಲ್ಲರ (ನಿವೇದಿತಾ) ಎದುರಿಗೆ ಘೋಷಣೆ ಮಾಡಿದ್ದರು ಡಾ. ಜಗದೀಶ್ ಚಂದ್ರ ಬೋಸ್.

೧೮೯೫ರಲ್ಲಿ ಅವರು ಕಲ್ಕತ್ತದ ಗವರ್ನರ್ ಎದುರಿಗೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ತರಂಗಗಳ ಶಕ್ತಿಯ ಪ್ರದರ್ಶನ ಮಾಡಿ ತೋರಿಸಿದ್ದರು. ಈ ತರಂಗವನ್ನು ಒಂದು ದಪ್ಪವಾದ ಗೋಡೆಯ ಮೂಲಕ ಹಾಯಿಸಿ, ಭಾರವಾದ ವಸ್ತುವನ್ನು ಸರಿಸುವಂತೆ ಮಾಡಿದ್ದರು. ಈ ತರಂಗಗಳು ತಗುಲಿದಾಗ ಗಂಟೆ ತಾನಾಗಿಯೇ ಬಾರಿಸುವುದನ್ನು ತೋರಿಸಿದರು. ಮುಚ್ಚಿದ ಕೋಣೆಯೊಳಗೆ ನೆಲದೊಳಗೆ ಹೂತಿದ್ದ ಸಣ್ಣದೊಂದು ಬಾಂಬ್ ಸ್ಫೋಟಗೊಳ್ಳುವಂತೆ ಮಾಡಿದರು.

ಬೋಶಿ ಜಗದೀಶ್ ಚಂದ್ರರ ವಿದ್ಯಾರ್ಥಿಯಾಗಿ ಹೋದಾಗ ಬೋಸ್‌ರವರ ವೈಜ್ಞಾನಿಕ ಸಂಶೋಧನೆಯ ಸಂಸ್ಥೆ (Bose Institute) ಆರಂಭವಾಗಿಯೇ ಇರಲಿಲ್ಲ. ಪ್ರೆಸಿಡೆನ್ಸಿ ಕಾಲೇಜಿನ ಒಂದು ಸಣ್ಣ ಕೋಣೆಯಲ್ಲಿ ಕೇವಲ ಐದು ಜನ ಸಂಶೋಧನೆಯ ವಿದ್ಯಾರ್ಥಿಗಳೊಂದಿಗೆ ಜಗದೀಶ್‌ಚಂದ್ರರು ತಮ್ಮ ಲ್ಯಾಬೊರೇಟರಿಯನ್ನು ಆರಂಭಿಸಿದ್ದರು. ಬೋಶಿ ಅವರ ಬಳಿ ವಿದ್ಯಾರ್ಥಿಯಾಗಿ ಹೋದ ಸಮಯದಲ್ಲಿ ಜಗದೀಶ್‌ಚಂದ್ರರು ಭೌತವಿಜ್ಞಾನದಿಂದ ಸರಿದು ಸಸ್ಯಗಳಲ್ಲಿರುವ ಪ್ರಾಣದ ಶಕ್ತಿಯ ಅನ್ವೇಷಣೆಯತ್ತ ಮನಸ್ಸನ್ನು ಕೊಟ್ಟಿದ್ದರು. ಸಸ್ಯಗಳಲ್ಲಿ ಉಂಟಾಗುವ ಅತ್ಯಂತ ಸೂಕ್ಷ್ಮವಾದ ಪ್ರತಿಕ್ರಿಯೆಗಳನ್ನು ಅಧ್ಯಯನ ಮಾಡಲು ತಾವೇ ಯಂತ್ರವನ್ನು ತಯಾರಿಸಿದ್ದರು. ಸಸ್ಯಗಳಿಗೆ ಪ್ರಾಣಿಯಂತೆ ಬುದ್ಧಿ ಮನಸ್ಸುಗಳಿವೆ ಎಂದು ಪ್ರಮಾಣ ಮಾಡಲು ಅವರು ಹೋಗಲಿಲ್ಲ. ಹೊರಗಿನ ವಿದ್ಯುತ್ ತರಂಗಗಳು ಅಥವಾ ಬಿಸಿ ತಗುಲಿದಾಗ ಪ್ರಾಣಿಯ ಶರೀರದಲ್ಲಿ ಯಾವ ರೀತಿಯ ಪ್ರತಿಕ್ರಿಯೆ ಉಂಟಾಗುತ್ತದೆಯೋ, ಸಸ್ಯಗಳಲ್ಲಿಯೂ ಅದೇ ರೀತಿ ಉಂಟಾಗುತ್ತದೆ ಎನ್ನುವುದನ್ನು ಪ್ರಯೋಗಗಳ ಮೂಲಕ ವಿಸ್ಮಿತವಾದ ಜಗತ್ತಿನ ಎದುರು ಪ್ರದರ್ಶಿಸಿದರು. *(ಮುಂದುವರಿಯುವುದು)*



ಕೈಲಾಸ - ಮಾನಸ ಸರೋವರ ಯಾತ್ರೆ

ಡಾ. ಹೆಚ್. ಪಾಂಡುರಂಗ ವಿಠಲ

ಭಾಗ-೨

ಶೆರಾತಾಂಗ್‌ನಲ್ಲಿ ಕೊನೆಯ ವೈದ್ಯಪರೀಕ್ಷೆ

ಮರುದಿನ ಶೆರಾತಾಂಗ್ (Sherathang) ಎಂಬ ಊರಿನಲ್ಲಿ ನಮ್ಮನ್ನು ಉಳಿಸಿದರು. ಪರ್ವತ ವಾತಾವರಣಕ್ಕೆ ನಮ್ಮ ದೇಹ ಹೊಂದಿಕೊಳ್ಳಲು ಒಂದು ದಿನ ಉಳಿಸುವ ಎರಡನೆಯ ಕೇಂದ್ರ ಇದು. ಎತ್ತರ ೧೩,೫೦೦ ಅಡಿ. ಇಬ್ಬರು ಮಲಗುವ, ಬಾತ್ ರೂಮು ಇರುವ, ತುಂಬ ಸೌಕರ್ಯಗಳಿರುವ ಕೋಣೆಗಳು. ಎಲ್ಲೋ ಕೆಲವರಿಗೆ ಮಾತ್ರ ಡಾರ್ಮೆಟರಿ. ನಾವು ಬಂದಾಗ ಮಧ್ಯಾಹ್ನದ ಊಟದ ಸಮಯ. ಎಲ್ಲರೂ ವಿಶ್ರಾಂತಿ ಪಡೆದ ಮೇಲೆ, ಐಟಿಬಿಪಿ (ಇಂಡೋ ಟಿಬೆಟನ್ ಬಾರ್ಡರ್ ಪೊಲೀಸ್) ಅಧಿಕಾರಿಗಳು ನಮ್ಮನ್ನು ಉದ್ದೇಶಿಸಿ ಅತಿ ಎತ್ತರದಲ್ಲಿ ಇರುವ ತೊಂದರೆಗಳ ಬಗ್ಗೆ, ಅವನ್ನು ಪರಿಹರಿಸಿಕೊಳ್ಳುವ ಮಾರ್ಗಗಳ ಬಗ್ಗೆ ವಿವರಿಸಿದರು. ಇದು ಮುಂದೆ ನಮಗೆ ತುಂಬ ಉಪಯೋಗಕ್ಕೆ ಬಂತು. ನಾನು ಬೆಳಿಗ್ಗೆ ತಿಂಡಿ ಬಲವಾಗಿ ತಿನ್ನುವವ; ಊಟಗಳು ಅಷ್ಟಕ್ಕಷ್ಟೇ. ಹೀಗೆ ಅತಿಯಾಗಿ ತಿಂದರೆ ಅರಗುವುದಿಲ್ಲ ಎಂಬುದು ತಿಳಿಯಿತು. ಸುಲಭವಾಗಿ ಅರಗುವ ಪದಾರ್ಥಗಳನ್ನೆ ಸ್ವಲ್ಪಸ್ವಲ್ಪ ತಿನ್ನಲು ಆರಂಭಿಸಿದೆ. ರುಚಿಯಾಗಿದೆ ಎಂದು ಎಂದೂ ಹೆಚ್ಚು ತಿನ್ನದೆ ಆರೋಗ್ಯ ಉಳಿಸಿಕೊಂಡೆ. ರಾತ್ರಿ ಸಾಕ್ಸ್ ಹಾಕಿಕೊಂಡು ಮಲಗಲಾರಂಭಿಸಿದೆ. ಹೆಚ್ಚು ಆಯಾಸ ಮಾಡಿಕೊಳ್ಳಲು ಹೋಗದೆ ಶಕ್ತಿ ಉಳಿಸಿಕೊಂಡೆ. ಈ ಊರಿನಲ್ಲಿ ಬರೀ ಸೈನಿಕರೇ ಇರುವುದು. ಕೊನೆಯ ಎಟಿಎಂ, ಕೊನೆಯ ಟೆಲಿಫೋನ್ ಎಕ್ಸ್‌ಚೇಂಜ್ ಇಲ್ಲಿ ಇವೆ. ಮೊಬೈಲ್‌ಗಳು ಕೆಲಸಕ್ಕೆ ಬಾರವು. ಮರುದಿನ ಟಿಬೆಟ್ ಪ್ರವೇಶವಾದ್ದರಿಂದ, ಎರಡು ಬಾರಿ ಹೋಗಿ ಪ್ರಯತ್ನಿಸಿ ಮನೆಗೆ ಫೋನ್ ಮಾಡಿದೆ. ಸೈನ್ಯದ ಫೋನೂ ಕೆಲವೊಮ್ಮೆ ಕೈ ಕೊಡುತ್ತದೆ ಎಂದು ಗೊತ್ತಾಯಿತು.

ಜುಲೈ ೧೭ರಂದು ಕೊನೆಯ ಚೆಕ್‌ಅಪ್ ನಡೆಯಿತು. ವಿಪರೀತ ಜ್ವರದಿಂದ ಬಳಲುತ್ತಿದ್ದ ನಮ್ಮ ಗುಂಪಿನ ವೃದ್ಧೆಯೊಬ್ಬರು ಹಿಂದಿರುಗಲು ನಿರ್ಧರಿಸಿದರು. ಹಿಂದಿರುಗುತ್ತಿದ್ದ ನಾಲ್ಕನೇ ಬ್ಯಾಚ್ ಜೊತೆಗೆ ಅವರೂ ಹೊರಟರು. ಉಳಿದ ೩೫ ಮಂದಿಗೆ ಈ ಪರೀಕ್ಷೆಯಲ್ಲಿ ಮುಂದುವರಿಯಲು ಅರ್ಹತೆ ಗಳಿಸಿದ ಸಂತೋಷ. ನಮ್ಮನ್ನು ೬೨ರ ಚೀನಾ ಯುದ್ಧದ ವೀರ ಬಾಬಾ ಮಂದಿರಕ್ಕೆ ಕರೆದೊಯ್ದರು. ಅಲ್ಲಿ ಕೆಲವು ಸ್ಮರಣಿಕೆಗಳನ್ನು ಕೊಂಡೆವು. 'ಸೆರಾಟಾಂಗಿನಲ್ಲೆ ಮುಂದೆ ಬೇಕಾಗದ ಹೆಚ್ಚಿನ ಲಗೇಜುಗಳನ್ನು ಬಿಡಿ, ಅವನ್ನು ಮರಳುವಾಗ ಗ್ಯಾಂಗ್ಟೋಕ್‌ನಲ್ಲಿ ಪಡೆಯಬಹುದು' ಎಂದು ಹೇಳಿದಾಗ, ಹಾಗೇ ಮಾಡಿದೆವು. ಕಸ್ಟಮ್ಸ್ ಮತ್ತು ಇಮಿಗ್ರೇಷನ್ ಅಧಿಕಾರಿಗಳು ಬೇಕಾದ ಮಾಹಿತಿಗಳನ್ನು ಪಡೆದರು. ಇಲ್ಲಿಂದ ಐದು ಜನ ಸಿಕ್ಕಿಂ ಅಡುಗೆಯವರು ನಮ್ಮ ಜೊತೆಗೂಡಿದರು.

ಚೀನಾ ಪ್ರವೇಶ

ಕೊನೆಗೂ ಭಾರತ ಬಿಡುವ ದಿನ ಬಂತು. ಜುಲೈ ೧೮ರಂದು ಬೆಳಿಗ್ಗೆ ಏಳು ಗಂಟೆಗೆ ನಾಥುಲಾ ಪಾಸ್‌ಗೆ ಹೊರಟೆವು. ಇಲ್ಲಿ ಐಟಿಬಿಪಿಯವರು ಒಳ್ಳೆಯ ಟೀ, ಸಿಹಿತಿಂಡಿ, ಒಣಹಣ್ಣುಗಳನ್ನು ನೀಡಿ ಸಂತೋಷಪಟ್ಟರು. ಎಂಟೂವರೆಗೆ (ಚೀನಾದಲ್ಲಿ ಹನ್ನೊಂದು ಗಂಟೆ) ಗಡಿ ದಾಟಿ, ಅಲ್ಲಿನ ಕಸ್ಟಮ್ಸ್, ಪೊಲೀಸ್ ಅಧಿಕಾರಿಗಳಿಂದ ಆರೋಗ್ಯ ಹಾಗೂ ಇನ್ನಿತರ ತಪಾಸಣೆಗಳಿಗೆ ಒಳಗಾದೆವು. ನಮಗೆ ಎರಡು ಬಸ್ಸುಗಳನ್ನು ನೀಡಿದರು. ಮೂರು ಪ್ಯಾಟ್ರೋಲ್ ಕಾರುಗಳಲ್ಲಿ ನಮ್ಮ ಜೊತೆ ಬಂದ ಈ ಅಧಿಕಾರಿಗಳೇ ಅಧಿಕೃತ ಗೈಡ್‌ಗಳಾಗಿ ಯಾತ್ರೆಯುದ್ದಕ್ಕೂ ನಮ್ಮ ಮುಂದೆ ಇದ್ದರು. ಇನ್ನೊಂದು ಟ್ರಕ್ ನಮ್ಮ ಲಗೇಜುಗಳನ್ನು ಒಯ್ಯುತ್ತಿತ್ತು. ಅದರ ಹಿಂದೆ ಮತ್ತೊಂದು ಪ್ಯಾಟ್ರೋಲ್ ಕಾರು. ಎರಡು ತಾಸು ಘಟ್ಟದ ಹಾದಿ ಕಳೆದು ಸಣ್ಣ ಪಟ್ಟಣದಲ್ಲಿದ್ದ ದೊಡ್ಡ ಹೊಟೇಲಿನಲ್ಲಿ ಉತ್ತಮ ಸಸ್ಯಾಹಾರಿ ಊಟ ಮಾಡಿದೆವು. ಇಲ್ಲಿ ಚೀನೀಯರು ೧೬೦೧ ಡಾಲರ್ ಹಾಗೂ ಇಮಿಗ್ರೇಶನ್ ಫೀ ಎಂದು ೫೦ ಯುವಾನ್ (RMB)ಗಳನ್ನು ಪಡೆದರು ಹಾಗೂ ನಮ್ಮ ಪಾಸ್‌ಪೋರ್ಟ್‌ಗಳನ್ನು

ತೆಗೆದಿಟ್ಟುಕೊಂಡರು. ಸಂಜೆ ೫ ಗಂಟೆಗೆ ಕಾಂಗ್ಮಾ (೧೩,೭೦೦ ಅಡಿ) ತಲುಪಿದೆವು. ಮೂರು ಅಂತಸ್ತಿನ ನಾಲ್ಕು ಕಟ್ಟಡಗಳಲ್ಲಿ ನಮ್ಮನ್ನು ಇಳಿಸಿದರು. ಮೂರು ಬೆಡ್ ಇರುವ ರೂಮುಗಳು. ಬಿಸಿನೀರು ತುಂಬಿದ ದೊಡ್ಡ ಫ್ಲಾಸ್ಕು ಕಿಚನ್ನಿನಲ್ಲಿ. ಭಾರತೀಯ ಮಾದರಿಯ ಟಾಯ್ಲೆಟ್ ಬಾತ್ ರೂಮು. ವಸತಿ ಅನುಕೂಲಕರವಿದ್ದರೂ, ಬಿಸಿನೀರು ಇಲ್ಲ. ನಮ್ಮವರ ಅಡುಗೆ. ಬಿಸಿ ಸೂಪ್‌ನಿಂದ ಊಟ ಪ್ರಾರಂಭ.

ಮರುದಿನ ೨೧ ರಂದು ಸುಮಾರು ೩೦೦ ಕಿ.ಮೀ. ಪ್ರಯಾಣಿಸಿ, ಸಂಜೆ ೪ಕ್ಕೆ ಲಾಜಿ (Lazi) ತಲುಪಿದೆವು. ದಾರಿಯಲ್ಲಿ ರುಚಿಯಾದ ಸೇಬು ಸಹಿತ ಊಟ. ಲಾಜಿಯಲ್ಲಿ ಉತ್ತಮ ಸೌಕರ್ಯಗಳಿದ್ದ ಹಳೆಯ ಟಿಬೆಟ್ ಲಾಜಿ ಪೆಸೆಂಟ್ಸ್ ಹೊಟೇಲಿನಲ್ಲಿ ವಾಸ್ತವ್ಯ. ವಿದೇಶೀ ಶೈಲಿಯ ಟಾಯ್ಲೆಟ್ ಬಾತ್‌ರೂಂ. ಪಟ್ಟಣ ತಿರುಗಿ ಕೆಲವು ವಸ್ತುಗಳನ್ನು ಕೊಂಡೆವು. ಮರುದಿನ ೪೭೫ ಕಿ.ಮೀ. ಕ್ರಮಿಸಿ, ಸಂಜೆ ೪.೩೦ಕ್ಕೆ ಜೊಂಗ್‌ಬಾ (Zhongba) ತಲುಪಿದೆವು. ಇಲ್ಲಿ ಎರಡು ಬೆಡ್‌ಗಳ ರೂಮುಗಳು. ಚೀನೀ ಮಾದರಿ ಟಾಯ್ಲೆಟ್ ಉಪಯೋಗಿಸಲು ಸ್ವಲ್ಪ ಕಷ್ಟ. ಉತ್ತಮ ಊಟ ತಿಂದು, ವಿಶ್ರಾಂತಿ ಪಡೆದೆವು. ಜುಲೈ ೨೧ರಂದು ದಾರ್ಚೆನ್ ಕಡೆಗೆ ನಮ್ಮ ಪ್ರಯಾಣ. ಮಾನಸ ಸರೋವರದ ಬಳಿ ಇರುವ ಇದೂ ೪೭೫ ಕಿ.ಮೀ. ದೂರ; ಸರೋವರ ನೋಡಿ ಎಲ್ಲರಿಗೂ ಖುಷಿ. ಇಲ್ಲಿಂದ ಮುಂದೆ ಟಿಬೆಟನ್ ಬಸ್‌ಗಳಲ್ಲಿ ಪ್ರಯಾಣ ಮುಂದುವರಿಯಿತು. ೩.೩೦ಕ್ಕೆ ದಾರ್ಚೆನ್. ಎರಡು ಬೆಡ್ ಇರುವ ರೂಮುಗಳು. ಊಟದ ಅನಂತರ ಎಲ್ಲೋ ಸಾಬ್ ತೀರ ಸುಸ್ತಾಗಿದ್ದ ಒಬ್ಬರನ್ನು ಅಲ್ಲಿಯೇ ಬಿಡಲು ತೀರ್ಮಾನಿಸಿದ್ದರು. ನಾವೆಲ್ಲ ಆಕ್ಸಿಜನ್ ಸಿಲಿಂಡರ್ ಜೊತೆಗೆ ಒಯ್ಯುವಂತೆ ಅವರಿಗೆ ತಿಳಿಹೇಳಿ, ಎಲ್ಲೋ ಸಾಬ್‌ಗೆ ಅವರನ್ನೂ ಕರೆದೊಯ್ಯಲು ವಿನಂತಿಸಿದೆವು. ಅಂತೂ ಯಾರೂ ಹಿಂದೆ ಉಳಿಯಲಿಲ್ಲ. ಕುದುರೆ ಹಾಗೂ ಪೋರ್ಟರ್‌ಗೆ ಇಲ್ಲೇ ತಲಾ ೨೩೪೦ ಯುವಾನ್‌ಗಳನ್ನು ಕೊಟ್ಟೆವು. ಇಲ್ಲೂ ಅತ್ಯಗತ್ಯವಾದ ವಸ್ತುಗಳಿದ್ದ ಒಂದು ಚೀಲ ಮಾತ್ರ ತೆಗೆದುಕೊಂಡು, ಉಳಿದುವನ್ನು ಒಂದು ರೂಮಿನಲ್ಲಿ ಇಟ್ಟುಬಿಟ್ಟೆವು.

ಕೈಲಾಸ ಪರಿಕ್ರಮ ಪ್ರಾರಂಭ

ಜುಲೈ ೨೨ಕ್ಕೆ ದಾರ್ಚೆನ್‌ನಿಂದ ದೇರಾಪುಕ್‌ಗೆ (೧೫,೧೫೭ ಅಡಿ) ಹೊರಟೆವು. ಯಮದ್ವಾರ್ ಎಂಬ ಜಾಗದ ತನಕ ಬಸ್ಸು. ಅಲ್ಲಿ ಲಾಟರಿ ಎತ್ತಿ ಕುದುರೆ, ಪೋರ್ಟರ್ ಪಡೆದೆವು. ನನಗೆ ಸಿಕ್ಕ ಕುದುರೆ, ಕಾಸ್ತಾರ, ಪೋರ್ಟರ್ ಒಳ್ಳೆಯವರು. ಮಳೆ. ಎಲ್ಲರೂ ಬೆಂಚೀಲದಿಂದ ರೇನ್‌ಕೋಟ್ ತೆಗೆದೆವು. ಸ್ವಲ್ಪ ಹೊತ್ತಿನಲ್ಲಿ ಮಳೆ ನಿಂತಿತು. ಕಾಲುದಾರಿಯ ಸೌಂದರ್ಯ ಹೇಳತೀರದು. ಪಕ್ಕದಲ್ಲಿ ಅಲ್ಲಲ್ಲಿ ಕೈಲಾಸ ಪರ್ವತ ಕಾಣಿಸುತ್ತಿತ್ತು. ೩ ಗಂಟೆಗೆ ದೇರಾಪುಕ್ ತಲುಪಿದೊಡನೆ ಎಂತಹ ದೃಶ್ಯ! ಎರಡು ಬೆಟ್ಟಗಳ ನಡುವೆ ಕಾಣುವ ಕೈಲಾಸ ಪರ್ವತ, ಅಲ್ಲಿಂದ ಹರಿದು ಬರುವ ತೊರೆ. ಉದ್ದನೆಯ ವಸತಿಗೃಹದಲ್ಲಿ ಐದು ಜನ ಇರುವ ಕೊಠಡಿಗಳು. ಹಿಂಬದಿ ಟಾಯ್ಲೆಟ್‌ಗಳು, ಸ್ನಾನದ ಮನೆ ಇಲ್ಲ. ಕೈಲಾಸಪತಿಯ ಸಾನ್ನಿಧ್ಯದಲ್ಲಿ ಗೊಣಗುವವರಾರು? ಸೂಜಿಯಂತೆ ಚುಚ್ಚುವ ಮಳೆಹನಿಗಳ ನಡುವೆಯೇ ಎಲ್ಲರೂ ಆಗಾಗ ಕೈಲಾಸ ನೋಡುವವರೇ. ಕೈಲಾಸವನ್ನು ಇಷ್ಟು ಹತ್ತಿರದಿಂದ ಮತ್ತೆಲ್ಲಿಯೂ ನೋಡಲು ಅಸಾಧ್ಯ. ರುದ್ರ, ಚಮಕ ಹೇಳುತ್ತ ನಮ್ಮ ರೂಮಿನಲ್ಲಿ ತಂದ ಹಣತೆಗಳನ್ನು ಹೊತ್ತಿಸಿ, ಎಲ್ಲರೂ ಆರತಿ ಮಾಡಿದೆವು. ರಾತ್ರಿ ಊಟದ ಅನಂತರ ಮುಂದಿನ ದಿನದ ಕಠಿಣ ಯಾತ್ರೆಗೆ ಶಕ್ತಿ ಉಳಿಸಲು ನಿದ್ರೆ.

ಮರುದಿನ ತೀರ ನಸುಕಿನಲ್ಲೇ ಡೊಲ್ಮಾ ಪಾಸ್‌ಗೆಂದು (೧೮,೬೦೦ ಅಡಿ) ಹೊರಟೆವು. ಕುದುರೆಗೂ ಕಠಿನವಾದ ಹಾದಿ. ಪಕ್ಕದಲ್ಲೇ ಕೈಲಾಸ ಪರ್ವತ. ಇಳಿತ ಬಂದೊಡನೆ ಕುದುರೆ ಇಳಿಸಿದ ಕಾಸ್ತಾರ ನನ್ನನ್ನು ನಡೆಯಲು ಹೇಳಿ, ಇತರರೊಂದಿಗೆ ಗುಂಪಲ್ಲಿ ಹರಟುತ್ತ ಕೂತ. ಒಂದು ಕಿ.ಮೀ. ನಡೆದ ನಂತರ ಪೋರ್ಟರ್‌ಗೆ, 'ನನಗೆ ನಡೆಯುವುದು ಕಷ್ಟ' ಎಂದು ಹೇಳಿ ಕುದುರೆ ಬರುವವರೆಗೆ ಕುಳಿತೆ. ಆರು ಕಿ.ಮೀ. ಕ್ರಮಿಸಿ, ಡೊಲ್ಮಾಪಾಸ್‌ನಲ್ಲಿ ಇಳಿದಾಗ ಉಸಿರಾಡಲೂ ಕಷ್ಟ. ಸಿಕ್ಕಿಂ ಸರಕಾರ ನೀಡಿದ್ದ ಕರ್ಪೂರದ ಚೀಲ ಸಹಾಯಕ್ಕೆ ಬಂತು. ಪಕ್ಕದಲ್ಲಿ ಇರುವ ಗೌರೀಕುಂಡದಿಂದ ನೀರು ತರಲು ಯಾರೋ ಹಣ ನೀಡಿದರೆಂದು ನಮ್ಮ ಪೋರ್ಟರ್ ಇಳಿದು ಹೋದ. ಇನ್ನೊಬ್ಬ ನನ್ನ ಕೈ ಹಿಡಿದು, ಡೊಲ್ಮಾಪಾಸ್‌ನಲ್ಲಿ ನಿಲ್ಲಲು ಬಿಡದೆ ವೇಗವಾಗಿ ಇಳಿಸತೊಡಗಿದ. ನನಗೋ ಸ್ನೇಹಿತ ಎಂ. ರಾಜಗೋಪಾಲ್ ಬರೆದ 'ಸಾಕಾರದಿಂದ ನಿರಾಕಾರಕ್ಕೆ' ಪುಸ್ತಕದಲ್ಲಿ ಇರುವ ಕರಿಯ ಕಲ್ಲು, ಸಿದ್ಧ ಶಿಲೆ ಎಲ್ಲೋ ಹಾದಿಯ ಪಕ್ಕದಲ್ಲಿ ಇದೆ, ಅದನ್ನು ಗುರುತಿಸಿ, ಅದರ ಮೇಲೆ ನಾನೂ ಧ್ಯಾನ ಮಾಡಬೇಕು ಎಂಬ ತವಕ. ಅಲ್ಲಲ್ಲಿ ಕಂಡ ಕಲ್ಲುಗಳ ಮೇಲೆ ಕೂತೆ. ಅದು ಯಾವುದೂ ಅಲ್ಲ. ಎಲ್ಲೆಲ್ಲೂ ಉದ್ದ ದಾರಕ್ಕೆ ನೇತುಬಿಟ್ಟ ಪ್ರಾಯಶ್ಚಿತ್ತ ಪಟಗಳು, ಮಂತ್ರಧ್ವಜಗಳು. ಕೊನೆಗೆ ಇತರರ ಜೊತೆಗೆ ನಾನೂ ಇಳಿದೆ. ವಾಯು, ವರುಣ, ಸೂರ್ಯ ಮೂರೂ ದೇವತೆಗಳು ನಮ್ಮ ಮೇಲೆ ಕರುಣೆ ತೋರಿದರು. ಮಳೆ ಗಾಳಿ ಬೀಸಲಿಲ್ಲ. ಸೂರ್ಯನೂ ನೆತ್ತಿ ಸುಡಲಿಲ್ಲ. ಹದವಾದ ವಾತಾವರಣ. ಮೂರು ಕಿ.ಮೀ. ನಡೆದು (ಅದರಲ್ಲಿ ಹಿಮನದಿಯ ಮೇಲಿನ ಸ್ವಲ್ಪದೂರದ ಪ್ರಯಾಣವೂ ಇತ್ತು) ದಾರಿ ಪಕ್ಕದ ಹೋಟೆಲಿನಲ್ಲಿ ಕುಳಿತೊಡನೆ ಭಾರೀ ಮಳೆ. ನಮ್ಮ ಊಟದ ಬುತ್ತಿ ತೆಗೆದು ಸ್ವಲ್ಪ ತಿಂದೆ. ಬಿಸಿನೀರಿಗೇ ಹತ್ತು ಯುವಾನ್ ಕೊಡಬೇಕಾಯಿತು. ಅನಂತರ ಕುದುರೆಯ ಮೇಲೆ ೧೦ ಕಿ.ಮೀ. ಕ್ರಮಿಸಿ, ಜುಂಜುಯಿ ಪೂ (೧೫,೮೦೦ ಅಡಿ) ಅನ್ನು ೨ ಗಂಟೆಗೆ ತಲುಪಿದೆವು. ಎಲ್ಲ ೩೫ ಯಾತ್ರಿಗಳೂ ಕೈಲಾಸ ಪರಿಕ್ರಮ ಪೂರೈಸಿದುದು ನಮ್ಮ ಬ್ಯಾಚಿನ ವಿಶೇಷ. ಜುಂಜುಯಿ ಪೂ (Zhunzui Pu) ನಲ್ಲೂ ಐದು ಜನ ಮಲಗುವ ಪೆಟ್ಟಿಗೆಯಂತಹ ಕೋಣೆಗಳು, ರಸ್ತೆಯಾಚೆ ಟಾಯ್ಲೆಟ್. ಸಾಧನೆ ಮಾಡಿದ ಹಿಗ್ಗಿನಲ್ಲಿ ಊಟದ ಅನಂತರ ವಿಶ್ರಾಂತಿ.

ಮರುದಿನ ಮತ್ತೆ ಕುದುರೆ ಪ್ರಯಾಣ. ಕೊನೆಯಲ್ಲಿ ಅರ್ಧ ಕಿ.ಮೀ. ನಡೆಯಬೇಕಾಯಿತು. ಮುಂಜಾನೆಯ ಬಿಸಿಲು ಓರೆಯಾಗಿ ಬೀಳುತ್ತಿದ್ದುದರಿಂದ ಸ್ವರ್ಗಸದೃಶ ದೃಶ್ಯಗಳ ಫೋಟೋ ತೆಗೆದೆ. ಮುಂದೆ ಮಂತ್ರ ಬರೆದ ಕಲ್ಲುಗಳ ರಾಶಿಗಳ ಹತ್ತಿರ ಬಸ್ಸುಗಳು ನಿಂತಿದ್ದುವು. ೩೬ ಕಿ.ಮೀ. ಪರಿಕ್ರಮವು ಕುದುರೆ, ಕಾಸ್ತಾರ, ಪೋರ್ಟರುಗಳ ಸಹಾಯಹಸ್ತ, ಬೆಂಬಲ ಇಲ್ಲದಿದ್ದರೆ ಅಸಾಧ್ಯವೇ ಸರಿ. ಕೃತಜ್ಞತೆಯಿಂದ ಭಾಷೆ ಅರ್ಥವಾಗದಿದ್ದರೂ ಅವರಿಗೆ ಕಣ್ಣೀರಿನೊಡನೆ ಧನ್ಯವಾದ ಹೇಳಿ, ಟಿಪ್ಸ್ ನೀಡಿದೆವು.

ಮಾನಸ ಸರೋವರದ ದಂಡೆಯಲ್ಲಿ ಎರಡು ದಿನ

ಬಸ್ಸುಗಳಲ್ಲಿ ಮಾನಸಸರೋವರದ ಕಡೆ ನಮ್ಮ ಪ್ರಯಾಣ ಆರಂಭವಾಯಿತು. ಪುನಃ ದಾರ್ಚನ್‌ಗೆ ಹೋಗಿ, ಅಲ್ಲಿ ಬಿಟ್ಟಿದ್ದ ವಸ್ತುಗಳನ್ನು ತೆಗೆದುಕೊಂಡು, ಮಾನಸ ಸರೋವರದ ದಂಡೆಯ ಮೇಲಿನ ಕುಗು ತಲುಪಿದಾಗ ಮಧ್ಯಾಹ್ನ ಎರಡೂವರೆ. ಇಲ್ಲೂ ಐದು ಜನ ಇರುವ ರೂಮುಗಳು, ದೂರ ಇರುವ, ಎಲ್ಲರಿಗೂ ಸಾಮಾನ್ಯವಾದ ಸಂಡಾಸುಗಳು. ಹೆಚ್ಚಿನ ಎಲ್ಲರೂ ಸರೋವರದಲ್ಲಿ ಪವಿತ್ರ ಸ್ನಾನ ಮಾಡಿ, ಪೂಜೆ ಮಾಡಿ ರೂಮಿಗೆ ಹಿಂದಿರುಗಿದರು. ಪ್ರಜ್ಞೆಯನ್ನು ಪ್ರತಿಬಿಂಬಿಸುವ, ವೇದಗಳನ್ನು ಗರ್ಭೀಕರಿಸಿರುವುದೆಂದು ನಂಬಲಾದ ಬ್ರಹ್ಮನಿರ್ಮಿತ ಮಾನಸ ಸರೋವರ ರೂಮುಗಳಿಂದಲೇ ಕಾಣುತ್ತಿತ್ತು. ಅದನ್ನು ನೋಡುತ್ತ, ಪಕೋಡ ತಿನ್ನುತ್ತ ಸಂಜೆ ಸುಂದರವಾಗಿ ಕಳೆಯಿತು. ಪುಸ್ತಕಗಳಲ್ಲಿದ್ದಂತೆ ದೇವರುಗಳು ಮಾನಸ ಸರೋವರದಲ್ಲಿ ಜ್ಯೋತಿರೂಪದಲ್ಲಿ ಸ್ನಾನ ಮಾಡುವುದು ಕಾಣುತ್ತದೇನೋ ಎಂದು ರಾತ್ರಿ ಹನ್ನೆರಡರಿಂದ ಒಂದೂವರೆಯವರೆಗೆ ನೋಡಿಯೇ ನೋಡಿದೆ. ಆಚೆ ದಡದ ದೀಪಗಳನ್ನು ಬಿಟ್ಟರೆ ಉಲ್ಕಾಪಾತ ಏನೂ ಕಾಣಲಿಲ್ಲ. ನಮ್ಮ ಗುಂಪಿನ ಉಪನಾಯಕ ಕ್ಯಾಪ್ಟನ್ ಗೋಪೀನಾಥ್‌ರಿಗೆ ಕೇಳಿದಾಗ ಅವರೂ ಹೀಗೇ ಉತ್ತರಿಸಿದರು. ನೀಲಿ ಬಣ್ಣದ ಈ ದುಂಡನೆಯ ಸಿಹಿನೀರಿನ ಶಾಂತ ಸರೋವರ ಹೊತ್ತು ಹೋದಂತೆ ಹಸಿರಾಗಿ, ಕಂದು ಬಣ್ಣವಾಗಿ, ಕೊನೆಗೆ ಬಣ್ಣವಿಲ್ಲದ್ದಾಗುತ್ತಿತ್ತು. ಈ ಪರಿವರ್ತನೆ ನಾವಿದ್ದ ಎರಡು ದಿನವೂ ಇತ್ತು.

ಜುಲೈ ೨೫ರಂದು, ಮಾನಸದಲ್ಲಿನ ಪವಿತ್ರ ಸ್ನಾನದ ಬಳಿಕ ಹವನ ಪೂಜೆಗಳನ್ನು ನೆರವೇರಿಸಿದೆವು. ತಿಂಡಿಗೆ ಎಲ್ಲರೂ ಹೋದ ಮೇಲೆ, ಹವನ ಸರಿ ಆಗಲಿಲ್ಲ ಎಂದು ಭಾವಿಸಿದ ನಮ್ಮ ಗುಂಪಿನ ಪೂಜಾರಿಗಳು ನಾವು ನಾಲ್ವರಿಗೇ ಪುನಃ ಹವನ ಮಾಡಿಸಿದರು! ಹೊತ್ತಾಗಿ ಹೋದರೂ, ನಮಗೆ ತಿಂಡಿ ಇಟ್ಟಿದ್ದರು. ಸಂಜೆ ಹಣತೆಗಳನ್ನು ಹಚ್ಚಿ ಸಂಧ್ಯಾರತಿ ಮಾಡಿದೆವು. ಇಷ್ಟೊಂದು ಹಣತೆಗಳನ್ನು ಗೋಪಿ ತಿರುವನಂತಪುರದಿಂದ ತಂದಿದ್ದರು. ಯಾತ್ರೆ ಮುಗಿದು ಜುಲೈ ೨೬ರಂದು ನಾವು ಮರುಪ್ರಯಾಣ ಆರಂಭಿಸಿ, ಮಾನಸ ಸರೋವರ ಪರಿಕ್ರಮ ಮಾಡಿದೆವು. ದಾರಿಯಲ್ಲಿ ಎಡಕ್ಕೆ ಉಪ್ಪು ನೀರಿನ, ನವಮಿಯ ಚಂದ್ರನ ಆಕಾರದ, ದೊಡ್ಡ ಅಲೆಗಳ ರಾಕ್ಷಸತಾಲ್ (ಸರೋವರ). ರಾವಣ ಇಲ್ಲಿ ತಪಸ್ಸು ಮಾಡಿದ್ದನಂತೆ.



ಮಾನಸ ಸರೋವರ, ಕೈಲಾಸ ದರ್ಶನ

ಇದರ ದಂಡೆಯ ಮೇಲೆ ಇಪ್ಪತ್ತು ನಿಮಿಷ ನಿಂತು ಫೋಟೋ ತೆಗೆದೆವು. ಸರೋವರದ ನೀರು ತಗುಲಿದರೆ ಜಗಳವಾಗುತ್ತದೆಂಬ ನಂಬಿಕೆ ಇರುವುದರಿಂದ, ಅದರ ಸಮೀಪ ಯಾರೂ ಹೋಗಲಿಲ್ಲ. ನಮ್ಮ ಚೀನೀ ಮಹಿಳಾಧಿಕಾರಿ ನಗುತ್ತ ನಾಲ್ಕೈದು ಕಲ್ಲುಗಳನ್ನು ಒಂದರ ಮೇಲೊಂದು ಇಟ್ಟು ಮಾಡುವ ದೇವಸ್ಥಾನಗಳನ್ನು ಮಾಡಿ ಕೃತಾರ್ಥಳಾದಳು. ಚೀನೀಯರು ಸ್ನೇಹಭಾವ ತೋರಿದ್ದು ನಮಗೆ ಅಚ್ಚರಿ ತಂದಿತು. ಸಂಜೆಯ ಹೊತ್ತಿಗೆ ಜೊಂಗ್‌ಬಾ ತಲುಪಿದೆವು. ವಸತಿ ಅದೇ, ಮಾಮೂಲಿ ಊಟ.

ಮರುಪ್ರಯಾಣದ ಇಳಿತ

ಮರುದಿನ ಬೆಳಗಿನ ತಿಂಡಿಗೆ ಮಾಡಿದ್ದ ಪೂರಿಗಳಲ್ಲೆ ಹಲವನ್ನು ಪ್ಯಾಕ್ ಮಾಡಿ, ತೆಗೆದುಕೊಂಡು ಹೋಗಿದ್ದು, ದಾರಿಯಲ್ಲಿ ಊಟಕ್ಕೆ ಅದನ್ನೇ ತಿಂದೆವು. ಮರುಪ್ರಯಾಣದ ನಿರಾಳತೆಯಲ್ಲಿ ಜೊಂಗ್‌ಬಾ ಬೇಸರ ತರಲಿಲ್ಲ. ೪.೩೦ ರ ಹೊತ್ತಿಗೆ ಲಾಜಿ ತಲುಪಿ, ಬೇರೆ ರೂಮುಗಳಲ್ಲಿ ವಾಸ್ತವ್ಯ ಹೂಡಿದೆವು. ಕಾರಣ ೭ನೆ ಬ್ಯಾಚಿನ ಯಾತ್ರಾರ್ಥಿಗಳು ಆಗಲೆ ಅಲ್ಲಿದ್ದರು. ಅಟ್ಯಾಚ್ಡ್ ಬಾತ್‌ರೂಂ ಇಲ್ಲದೆ, ಸ್ನಾನಕ್ಕೆ ಪರದಾಟ. ಮರುದಿನ, ೨೮ರಂದು ಊಟದಂತಹ ತಿಂಡಿ ತಿಂದು, ಹನ್ನೊಂದು ಗಂಟೆಗೆ ಹೊರಟು, ಸಂಜೆ ಐದಕ್ಕೆ ಕಾಂಗ್ಮಾ ತಲುಪಿದೆವು. ಅದೇ ಮೂರು ಅಂತಸ್ತಿನ ಕಟ್ಟಡ ಸಮುಚ್ಚಯದ ರೂಮುಗಳು. ರಾತ್ರಿ ಎಂಟಕ್ಕೆ ಭೂರಿಭೋಜನ. ಸಹಕಾರ ನೀಡಿದ ಚೀನೀ ಅಧಿಕಾರಿಣಿ, ಸಿಬ್ಬಂದಿಗೆ ಅವರ ಮಾರ್ಗದರ್ಶಿತ್ವ, ಸಹಾಯಕ್ಕೆ ನೆನಪಿನ ಕಾಣಿಕೆ ಕೊಟ್ಟು ಧನ್ಯವಾದ ಹೇಳಿದೆವು. ಚೀನೀಯರೂ ತಮ್ಮ ಸಾಂಸ್ಕೃತಿಕ ಸಂಗೀತದಿಂದ ನಮ್ಮನ್ನು ರಂಜಿಸಿ, ನಮ್ಮ ಅಧಿಕಾರಿಗಳೊಂದಿಗೆ ಕುಣಿದರು. ಕುಡಿಯಲು ಬೀರು, ಒಲ್ಲದವರಿಗೆ ಕೋಕಾಕೋಲ, ಸ್ನ್ಯಾಕ್ಸ್ ಇವು

ಗಳೆಲ್ಲ ಇದ್ದುವು. ಸಾಂಸ್ಕೃತಿಕ ಸಂಜೆಯ ಅನಂತರ ಒಳ್ಳೆಯ ಊಟ ದೊರೆಯಿತು.

೨೯ರ ಮುಂಜಾನೆ ೬.೩೦ಕ್ಕೆ ಮರುಪ್ರಯಾಣ. ದಾರಿಯಲ್ಲಿ ಪಾಸ್‌ಪೋರ್ಟುಗಳನ್ನು ಹಿಂದಿರುಗಿಸಿದರು. ೯.೩೦ರ ಹೊತ್ತಿಗೆ ನಾಥು ಲಾ ಬಾರ್ಡರ್ ತಲುಪಿ, ಚೀನೀಯರು ನಮ್ಮನ್ನು ಬೀಳ್ಕೊಟ್ಟರು, ನಮ್ಮ ಐಟಿಬಿಪಿ ಯೋಧರು ಟೀಯೊಡನೆ ಸ್ವಾಗತಿಸಿದರು, ಇಮಿಗ್ರೇಷನ್ ಪರಿಶೀಲನೆ ಮುಗಿದ ಮೇಲೆ ನಾವು ಶೆರಾಥಾಂಗ್ ತಲುಪಿದೆವು. ಅಲ್ಲಿ ಮಾಮೂಲಿ ರೂಮುಗಳು. ಆದರೆ, ವಾಪಸು ಬಂದ ಖುಷಿ. ಇಲ್ಲಿಯೂ ಐಟಿಬಿಪಿ ಯೋಧರು ಸಂಭ್ರಮದಿಂದ ಸ್ವಾಗತಿಸಿದರು, ಅಷ್ಟೇ ಅಲ್ಲ, ಒಳ್ಳೆಯ ಊಟವನ್ನೂ ಹಾಕಿದರು. ಊಟ ಬಡಿಸಿದ ರೀತಿ ಹೃದಯಸ್ಪರ್ಶಿಯಾಗಿತ್ತು. ಅನಂತರ ನಮಗೆಲ್ಲರಿಗೂ ನಮ್ಮ ಯಾತ್ರಾಸಾಧನೆಯ ಬಗೆಗೆ ಪ್ರಶಂಸಾಪತ್ರ, ನೆನಪಿನ ಕಾಣಿಕೆಗಳನ್ನು ನೀಡಿ, ಗೌರವಿಸಿದರು. ಅನಂತರ ಗ್ಯಾಂಗ್ಟೋಕ್ ಕಡೆ ಪ್ರಯಾಣ. ದಾರಿಯಲ್ಲಿ ಭೂಕುಸಿತ, ಸ್ವಲ್ಪ ಕಾಯುವಿಕೆಯ ಅನಂತರ ೩ ಗಂಟೆಯ ಹೊತ್ತಿಗೆ ಮಾಮೂಲಿ 'ಹೊಟೇಲ್ ಮಯೂರ' ತಲುಪಿದೆವು. ಅವೇ ರೂಮುಗಳನ್ನು ನಿಗದಿಪಡಿಸಿದ್ದರು. ಸಂಜೆ ಸಿಕ್ಕಿಂ ಟೂರಿಸಂ, ಸಿಕ್ಕಿಂ ಸರ್ಕಾರ, ಗ್ಯಾಂಗ್ಟೋಕ್ ಮೇಯರ್, ಸರ್ಕಾರದ ಟೂರಿಸಂನ ವಿಶೇಷ ಕಾರ್ಯದರ್ಶಿ ಇವರೆಲ್ಲರೂ ನಮ್ಮನ್ನು ಅಭಿನಂದಿಸುವ ಸಮಾರಂಭ. ಅವರಿಂದಲೂ ಸರ್ಟಿಫಿಕೇಟು, ನೆನಪಿನ ಕಾಣಿಕೆ. ಸೈನಿಕರೊಬ್ಬರು ನಮ್ಮ ಕ್ಯಾಮರಾ ಪಡೆದು, ಫೋಟೋಗಳನ್ನು ನಕಲು ಮಾಡಿಕೊಂಡರು. ಈ ರಾತ್ರಿಯೂ ಅಲ್ಲಿನ ಎಂ.ಜಿ. ರೋಡಿನಲ್ಲಿ ತಿರುಗಾಡಿದೆವು. ನಾನು ವಿಶೇಷ ಟೀ ಪುಡಿ, ಮಫ್ಲರ್ ಕೊಂಡೆ. ಸಿಕ್ಕಿಂ ರಾಜಧಾನಿಯ ವಾಸ, ಬಿಸಿನೀರಿನ ಶವರ್ ಸ್ನಾನ ಸೊಗಸಾಗಿತ್ತು. ಮರುದಿನ ಜುಲೈ ೩೦ರಂದು ಹೆಚ್ಚಿನವರು ಗ್ಯಾಂಗ್ಟೋಕ್ ದರ್ಶನ ಪ್ರವಾಸ ಕೈಕೊಂಡೆವು. ೨೩ನೆ ಕರ್ಮಪಾ ಬೌದ್ಧ ಮಠ, ದಾರಿಯಲ್ಲಿನ ಜಲಪಾತ, ಬೆಟ್ಟದ ಮೇಲಿನ ಗಣೇಶ ದೇವಸ್ಥಾನ, ಮಿಲಿಟರಿ ಶಿಬಿರದ ಹತ್ತಿರದ ಗುಡ್ಡದ ಮೇಲಿನ ಹೋಟೆಲು ಎಲ್ಲ ಚೆನ್ನಾಗಿದ್ದುವು. ರಾತ್ರಿ ಆರ್ಥಿಕ ಸಮಿತಿಯವರು ಸಾವಿರದ ಐನೂರು ರೂಪಾಯಿಗಳನ್ನು ಉಳಿಕೆ ಎಂದು ಎಲ್ಲರಿಗೂ ವಾಪಸ್ಸು ನೀಡಿದರು. ಬೇಸರವೆಂದರೆ ಅನೇಕ ಯಾತ್ರಿಗಳು ಮತ್ತು ಯೆಲ್ಲೋ ಸಾಬ್ ೩೦ ರ ಮುಂಜಾನೆಯೇ ನಮ್ಮನ್ನು ಬಿಟ್ಟು ಖಾಸಗಿ ಕಾರಿನಲ್ಲಿ ವಾಪಸು ಹೋದದ್ದು. ಅವರಿಗೆ ಮನೆಗೆ ಹೋಗುವ ಆತುರ.

ಕೊನೆಯ ಈ ಆರು ದಿನಗಳ ವಿವರವನ್ನು ಸಂಕ್ಷಿಪ್ತವಾಗಿ, ವಿವರಣೆ ಹೆಚ್ಚಿಲ್ಲದೆ ನೀಡಿರುವುದನ್ನು ಗಮನಿಸಿ. ಯಾತ್ರೆಯಿಂದ ಹಿಂದಿರುಗುವಾಗ ನಿರಾಳತೆ, ನೆಮ್ಮದಿಗಳ ಜೊತೆಯಲ್ಲಿಯೆ ಮುಗಿಯಿತಲ್ಲ ಎಂಬ ಖಿನ್ನತೆಯೂ ಅನುಭವಕ್ಕೆ ಬರುವುದರಿಂದ ಹೆಚ್ಚಿನ ವಿವರಗಳು ಮನಸ್ಸಿನಲ್ಲಿ ದಾಖಲಾಗುವುದಿಲ್ಲ. ನೋಡಿದ ಸ್ಥಳಗಳಿಗೆ ಮತ್ತೆ ಹೋದಾಗ, ಪರಿಚಿತತೆಯೂ ಏಕತಾನತೆಯ ಬೇಸರವನ್ನು ಉಂಟುಮಾಡುತ್ತದೆ. ನಮ್ಮ ನಾಯಕರು ಬೆಳಿಗ್ಗೆ ಬೇಗ ಹೊರಡದಿದ್ದರೆ ವಿಮಾನ ಸಿಕ್ಕುವುದಿಲ್ಲ. ಆರೂವರೆಗೇ ಹೊರಟುಬಿಡುತ್ತೇವೆ. ಉಳಿದವರು ತಾವೇ ವಾಹನ ಮಾಡಿಕೊಂಡು ಬರಬೇಕಾಗುತ್ತದೆ ಎಂದು ಎಚ್ಚರಿಸಿದ್ದರು. ಮುಂಜಾಗರೂಕತಾ ಕ್ರಮವಾಗಿ ಎಲ್ಲರಿಗೂ ವೈಯಕ್ತಿಕ ಒಂಟಿ ಟಿಕೇಟುಗಳನ್ನು ನೀಡಿದ್ದರು. ಜುಲೈ ೩೧ ರ ಬೆಳಿಗ್ಗೆ ಆರೂಮುಕ್ಕಾಲಿಗೇ ಬ್ಯಾಗ್ಡೋಗ್ರಾಕ್ಕೆಂದು ಹೊರಟೆವು. ದಾರಿಯಲ್ಲಿ ರ್‍ಯಾಂಚೋ(Ranka)ನ ಮಾಮೂಲಿ ಸಿಂಡೆರೆಲ್ಲಾ ಹೋಟೆಲಿನಲ್ಲಿ ತಿಂಡಿ. ಈ ಬಾರಿ ನಮ್ಮ ಸ್ವಾಗತಕ್ಕಾಗಿ ನಾವಿರುವಷ್ಟು ಹೊತ್ತೂ ವೃದ್ಧನೊಬ್ಬ ಸಂತೂರ್ ವಾದ್ಯ ನುಡಿಸಿ, ಆಹ್ಲಾದಕರ ವಾತಾವರಣ ನಿರ್ಮಿಸಿದ. ಬ್ಯಾಗ್ಡೋಗ್ರಾಕ್ಕೆ ಹನ್ನೊಂದೂವರೆಗೆ ತಲುಪಿದೆವು. ಸಿಕ್ಕಿಂ ಟೂರಿಸಂನವರು ನಮಗಾಗಿ ಏರ್‌ಪೋರ್ಟ್ ರೆಸ್ಟೋರೆಂಟಿನಲ್ಲಿ ಒಳ್ಳೆಯ ಊಟಕ್ಕೆ ಏರ್ಪಾಡು ಮಾಡಿದ್ದರು. ಸಂತೋಷದಿಂದ ಕೊನೆಯ ಭೋಜನವನ್ನು ಸ್ವೀಕರಿಸಿದೆವು. ದಿಲ್ಲಿಗೆ ಹೋಗುವವರ ವಿಮಾನ ಮಧ್ಯಾಹ್ನ ೩ ಗಂಟೆಗೆ ಹೊರಟಿತು. ನಮ್ಮ ಕೊಲ್ಕತಾ ವಿಮಾನ ಸಂಜೆ ೬ಕ್ಕೆ. ಅಲ್ಲಿಯವರೆಗೆ ಉಳಿದ ಪ್ರಯಾಣಿಕರ ಜೊತೆಗೆ ಬಂದು ಹೋಗುವ ವಿಮಾನಗಳನ್ನು ನೋಡುತ್ತಾ ಕುಳಿತೆವು. ನಮ್ಮ ಸರದಿ ಬಂದಾಗ, ವಿಮಾನವೇರಿ, ಕೊಲ್ಕತ್ತೆಗೆ ಏಳು ಗಂಟೆಗೆ ತಲುಪಿದೆವು. ಅಲ್ಲಿ ಮತ್ತೆ ಕಾಯುವಿಕೆ. ೧೩೦ ರೂ. ಕೊಟ್ಟು ಕಾಫಿ ಕುಡಿದೆವು. ಊಟ ಮಾಡದೆ, ಜೊತೆಗಾರ ಶ್ರೀನಿವಾಸ್ ಅವರ ಬುತ್ತಿಯ ಅವಲಕ್ಕಿಯನ್ನು ನಿಧಾನವಾಗಿ ತಿಂದು ಮುಗಿಸಿದೆವು. ರಾತ್ರಿ ೯.೩೦ ಗಂಟೆಗೆ ವಿಮಾನ ಹತ್ತಿ ಬೆಂಗಳೂರು ತಲುಪಿದಾಗ ೧೧ ಗಂಟೆ. ಶ್ರೀನಿವಾಸ್ ಮಕ್ಕಳು ಕಾದಿದ್ದರು. ಅವರು ಹೊರಟ ಮೇಲೆ, ಮೈಸೂರಿಗೆ ಹೊರಡುವ ೧೨ ಗಂಟೆಯ ಏರ್‌ಪೋರ್ಟ್ ಬಸ್ಸು ಹತ್ತಿ, ಲಗೇಜ್ ಇಟ್ಟು, ಹತ್ತಿರವಿದ್ದ ಹೋಟೆಲಿಗೆ ಹೋಗಿ ಕಾಫಿ ಕುಡಿದು, ಮತ್ತೆ ಬಸ್ಸಿಗೆ ಹತ್ತಿ, ತೂಕಡಿಸಲಾರಂಭಿಸಿದೆ. ಬಸ್ಸು ಹನ್ನೆರಡೂವರೆಗೆ ಬೆಂಗಳೂರು ಬಿಟ್ಟಿತು. ನಿದ್ದೆಯಿಂದ ಎದ್ದಾಗ ಮೂರೂಕಾಲು. ಆ ರಾತ್ರಿಯಲ್ಲಿ ಎಲ್ಲರೂ ಇಳಿದಮೇಲೆ ನಾನು ಇಳಿದು ಟಾಯ್ಲೆಟ್ಟಿಗೆ ಹೋಗಿ ಬಂದಾಗ, ಕಂಡಕ್ಟರ್ ಲಗೇಜು ಕ್ಯಾಬಿನ್ ಬಾಗಿಲು ತೆಗೆದು ನನಗಾಗಿ ಕಾಯುತ್ತಿದ್ದ. ಮನೆ ತಲುಪಿದಾಗ ಮೂರೂವರೆ. ಯಾತ್ರೆಯ ನೆನಪಿನ ಕಾಣಿಕೆ ಬೆತ್ತದ ವಾಕಿಂಗ್ ಸ್ಟಿಕ್ ಜೊತೆಯಲ್ಲಿತ್ತು.

ಈ ಸೊಗಸಾದ ಯಾತ್ರೆ, ನನ್ನ ಜೀವನದ ಸಿಹಿನೆನಪಾಗಿದೆ. ಯಶಸ್ವಿಯಾಗಿ, ಸುಸಂಘಟಿತವಾಗಿ, ಯೋಜನಾಬದ್ಧವಾಗಿ ಯಾತ್ರೆ ಮಾಡಿಸಿದ ಭಾರತ ಸರಕಾರಕ್ಕೆ ನಾನು ಋಣಿ. ನನಗಾದ ಸುಮಾರು ಎರಡು ಲಕ್ಷ ರೂ. ಖರ್ಚಿನಲ್ಲಿ ೩೦,೦೦೦ ರೂ. ಕೊಟ್ಟ ಕರ್ನಾಟಕ ಸರಕಾರಕ್ಕೂ, ೪,೦೦೦ ರೂ. ಕೊಟ್ಟ ದೆಹಲಿ ಸರಕಾರಕ್ಕೂ ಋಣಿ.

ವೈಯಕ್ತಿಕ ಅನುಭವಗಳು

ಮಾನಸದಲ್ಲಾಗಲಿ, ಕೈಲಾಸದಲ್ಲಾಗಲಿ ದೇವರ ಬಗೆಗೆ ನನಗೆ ಯಾವ ಅನುಭವಗಳೂ ಆಗದ್ದು ನಿರಾಸೆ ತಂದರೂ, ಕೆಲವು ಆಶ್ಚರ್ಯಕರ ಅನುಭವಗಳು ನನಗಾಗಿವೆ. ಮೊದಲನೆಯದು

ನಾನು ಹೊರಟ ಬಗೆ. ಕೊನೆಯವರೆಗೂ ನಾನು ಹೊರಡುತ್ತೇನೆಂದು ಅನಿಸಿಯೇ ಇರಲಿಲ್ಲ. ಒಂದು ದಿನದ ರಜೆ ಉಳಿಸಲು ಹೊರಡುವ ದಿನವೂ ಆಫೀಸಿಗೆ ಹೋದೆ. ರೈಲು ೧೧.೨೦ಕ್ಕೆ. ನೋಡನೋಡುತ್ತಿದ್ದಂತೆಯೇ ಹತ್ತೂಮುಕ್ಕಾಲು ಆಯಿತು. ಸಹೋದ್ಯೋಗಿ ಶ್ರೀವತ್ಸ ರೈಲ್ವೆ ಸ್ಟೇಶನ್‌ಗೆ ಬಿಡುವುದು ಎಂದಿತ್ತು. ಆತ ವ್ಯಾನ್ ತಂದಿದ್ದ. ೧೧ಕ್ಕೆ ಆಫೀಸಿನಿಂದ ಹೊರಟು ಬ್ಯಾಗುಗಳನ್ನು ತರಲು ಮನೆಗೆ ಹೋದೆ. ಶ್ರೀವತ್ಸ , ''ನಿಮ್ಮ ಮನೆಯವರೂ ಬರಲಿ'' ಎಂದಾಗ ಅವಸರದಿಂದ ಆಕೆಯೂ ಹೊರಟದ್ದು ಒಳ್ಳೆಯದಾಯಿತು. ಮಧ್ಯೆ ಟ್ರಾಫಿಕ್ ಗೊಂದಲ, ಸ್ಟೇಷನ್ನಿನಲ್ಲಿ ವ್ಯಾನ್ ನಿಲ್ಲಿಸಿ ಬರುವಷ್ಟು ಸಮಯವಿಲ್ಲ. ಬ್ಯಾಗ್ ಹೊರಲು ಯಾರನ್ನು ಕರೆಯುವಷ್ಟೂ ಸಮಯವಿಲ್ಲ. ವ್ಯಾನಿನಿಂದ ಇಳಿದೊಡನೆ ಶ್ರೀಮತಿ ಮತ್ತು ನಾನು ಮೂರು ತೂಕದ ಬ್ಯಾಗ್‌ಗಳನ್ನು ಹೇಗೋ ಹೊತ್ತು ಪ್ಲಾಟ್‌ಫಾರಂ ತಲುಪಿ ಇನ್ನೇನು ಹೊರಡಲಿದ್ದ ಟ್ರೇನ್ ಹತ್ತಿದೆವು. ವಿದಾಯ ಹೇಳಿದೊಡನೆ ಟ್ರೇನ್ ಹೊರಟಿತು. ಮನೆಯಲ್ಲಿ ಕಟ್ಟಿಕೊಟ್ಟಿದ್ದ ಬುತ್ತಿಯನ್ನು ಬೆಂಗಳೂರು ಸ್ಟೇಷನ್‌ನಲ್ಲಿ ತಿನ್ನಲು ಹೊರಟರೆ ಚಟ್ನಿಪುಡಿ ಗಾಳಿಗೆ ಹಾರಬೇಕೆ? ತಲೆ ಎತ್ತಿ ನೋಡುವಾಗ ಅಶಕ್ತರಿಗಾಗಿರುವ ಇಲೆಕ್ಟ್ರಿಕ್ ಕಾರಿನ ಡ್ರೈವರ್, 'ಮುಂದುಗಡೆ ಪ್ರವೇಶಕ್ಕೆ ಹೋಗಲು ಆಗುವುದಿಲ್ಲ, ಬೇಕಿದ್ದರೆ ಆರನೆ ಪ್ಲಾಟ್‌ಫಾರಂ ಪ್ರವೇಶಕ್ಕೆ ಬಿಡುತ್ತೇನೆ, ಅಲ್ಲೂ ರಿಕ್ಷಾ ಸಿಗುತ್ತದೆ' ಎಂದು ಯಾರೋ ಕರೆದಿದ್ದವರಿಗೆ ಹೇಳುತ್ತಿದ್ದ. ಅವರು ಹತ್ತಲು ನಿರಾಕರಿಸಿದರು. ಕೂಲಿಯವರು ಸಿಗದೆ ಒದ್ದಾಡುತ್ತಿದ್ದ ನನಗೆ ಈ ಅವಕಾಶ ಸಿಕ್ಕಿತು. ನನ್ನ ಬ್ಯಾಗುಗಳೊಡನೆ ಹತ್ತಿದೆ. ಆ ಪ್ಲಾಟ್‌ಫಾರಂ ಪ್ರವೇಶಕ್ಕೆ ಹೋಗಿ, ರಿಕ್ಷಾ ಹಿಡಿದು ವಿಮಾನ ನಿಲ್ದಾಣಕ್ಕೆ ಹೋಗುವ ಸಿಟಿಬಸ್ ನಿಲ್ಲುವ ತಾಣಕ್ಕೆ ಹೋದೆ. ತಕ್ಷಣವೇ ಬಸ್ ಸಿಕ್ಕಿತು! ಇಲ್ಲವಾದಲ್ಲಿ ಸಂಜೆ ಆರರ ದಿಲ್ಲಿ ವಿಮಾನ ತಪ್ಪಿಹೋಗುತ್ತಿತ್ತು.

ಇದೇ ರೀತಿ, ನನಗೆ ದಿಲ್ಲಿಯಲ್ಲಿ ಬಿ.ಎಸ್.ಎನ್.ಎಲ್.ಸಿಗ್ನಲ್ ಸಿಗದೆ, ಮೊಬೈಲ್ ಕೆಲಸ ಮಾಡದೆ ಇದ್ದಾಗ ಸಹ ಪ್ರಯಾಣಿಕನ ಸಲಹೆ (ಮರುದಿನ ನನ್ನ ಪಕ್ಕ ಕುಳಿತ ವ್ಯಾಪಾರಿಯೊಬ್ಬ ಸರ್ವೀಸ್ ಪ್ರೊವೈಡರ್ ಆಯ್ಕೆಗೆ ಡಾಲ್ಫಿನ್ ಎಂದು ಹಾಕಲು ತಿಳಿಸಿದ), ರಾತ್ರಿ ಹತ್ತು ಗಂಟೆಗೆ ಮೆಟ್ರೋ ಹಿಡಿದು ಹೋಗಲು ಸಹಾಯ ಸಿಕ್ಕಿದ್ದು, ರಾತ್ರಿ ಹನ್ನೊಂದಕ್ಕೆ ಗುಜರಾತಿ ಸಮಾಜದಲ್ಲಿ ಸಿಕ್ಕ ಕೊನೆಯ ಊಟ (ಊಟ ಹೊರಗೆ ಟೇಬಲ್‌ನಲ್ಲಿ ತಿನ್ನಿ ಎಂದು ಹೇಳಿ ಕ್ಯಾಂಟೀನಿನವ ಬಾಗಿಲು ಹಾಕಿಕೊಂಡ) , ಇತರ ಯಾತ್ರಿಗಳ ಜೊತೆ ಅವಕಾಶ ಸಿಕ್ಕದೆ ಒಬ್ಬನಿಗೇ ಸಿಕ್ಕ ಖಾಲಿ ಡಾರ್ಮಿಟರಿಯಲ್ಲಿ ಮೂರು ರಾತ್ರಿ ಗಲಾಟೆ ಇಲ್ಲದೆ ನಿದ್ದೆ, ಸ್ನಾನ ಇತ್ಯಾದಿಗಳು ಆಗಿ ವಿಶ್ರಾಂತಿ ಸಿಕ್ಕಿದ್ದು, ಮೆಡಿಕಲ್ ಟೆಸ್ಟುಗಳಲ್ಲಿ ಸುಲಭವಾಗಿ ಪಾರಾದದ್ದು, ಯಮದ್ವಾರದಲ್ಲಿ ಲಾಟರಿಯಲ್ಲಿ ಒಳ್ಳೆಯ ಕುದುರೆ ಮತ್ತು ಪೋರ್ಟರ್ ಸಿಕ್ಕಿದ್ದು ಇವೆಲ್ಲ ಕಾಕತಾಳೀಯವೇ. ದಾರಿಯುದ್ದಕ್ಕೂ ಕುದುರೆಯ ತೊಂದರೆಯಿಂದ ನಮ್ಮಲ್ಲಿ ಕೆಲವರು ಕಷ್ಟಪಟ್ಟಿದ್ದು ಕಂಡೆ. ದಿಲ್ಲಿಯಲ್ಲಿ ತುಂಬಾ ಉತ್ಸಾಹದಿಂದ ಮಾತನಾಡುತ್ತಿದ್ದ ದೀಪಕ್ ಕುಮಾರ್ ಜೋಷಿ ಯಮದ್ವಾರದಲ್ಲೇ ಕುದುರೆಯಿಂದ ಬಿದ್ದರು. ಅನಂತರವೂ ದೇರಾಪುಕ್ ತಲಪುವಾಗ, ಮುಂದೆ ಇನ್ನೂ ಒಮ್ಮೆ, ಒಟ್ಟು ಮೂರು ಬಾರಿ ಬಿದ್ದು, ಜ್ವರದಿಂದ ಬಳಲಿದರು. ಅವರ ದುಬಾರಿ ಕ್ಯಾಮರಾ ಕೆಲಸ ಮಾಡಲೇ ಇಲ್ಲ. ಸದಾ ಒಳ್ಳೆಯ ಸೀಟು ಆಕ್ರಮಿಸುತ್ತಿದ್ದ ವಘೇಲಾ ದಂಪತಿಗಳು ಎಲ್ಲರಿಗೂ ಕಿರಿಕಿರಿ ಮಾಡುತ್ತಿದ್ದರೂ, ನನ್ನ ಜೊತೆ ಗ್ಯಾಂಗ್‌ಟೋಕ್‌ನಲ್ಲಿ ತುಂಬ ಆತ್ಮೀಯವಾಗಿ ಹರಟಿ, ಡಿಸ್ಕೌಂಟಿನಲ್ಲಿ ದಾರ್ಜಿಲಿಂಗ್ ಚಹಾಪುಡಿ ಕೊಡಿಸಿದರು! ನಮ್ಮ ಕುದುರೆಯವ ಮತ್ತು ಪೋರ್ಟರ್ ನನ್ನನ್ನೇ ಹುಡುಕಿಕೊಂಡು ಬಂದು ಸೇವೆ ಸಲ್ಲಿಸುತ್ತಿದ್ದರು. ಅವರು ಹಾಗೆ ಮಾಡದಿದ್ದರೆ, ನನಗೆ ಅವರಾರು ಎಂದೇ ತಿಳಿಯುತ್ತಿರಲಿಲ್ಲ. ಎಲ್ಲ ಚೀನೀ ಮುಖಗಳೂ ಒಂದೇ ಆಗಿ ಕಾಣುತ್ತವೆ. ಆದರೆ ಅವರು ಕೈಲಾಸದ ವಿವಿಧ ಮುಖಗಳನ್ನು ನೋಡಲು ಹೇಳಲಿಲ್ಲ. ನಾನು ಹಿಂದೆ ನೋಡಿದ್ದ ಫೋಟೋಗಳನ್ನು ನೆನಪು ಮಾಡಿಕೊಂಡು, ಯಮದ್ವಾರ ಸಮೀಪದ ದಕ್ಷಿಣದ, ಅನಂತರ ಪೂರ್ವದ ಮುಖಗಳನ್ನು ಗುರುತಿಸಿದೆ. ಡೋಲ್ಮಾ ಪಾಸ್‌ನಿಂದ ಇಳಿಯುವಾಗ ಬಂದ ಭಾರೀ ಮಳೆಯಲ್ಲಿ ಹೆಚ್ಚಿನವರು ನೆನೆದರೆ, ನಾನು, ನನ್ನ ಜೊತೆಯ ಮೂರು ನಾಲ್ಕು ಜನ ಮಾತ್ರ ಮಳೆ ಹನಿಯುವ ಮುನ್ನ ರಸ್ತೆ ಬದಿಯ ಹೊಟೇಲಿನಲ್ಲಿ ಆಶ್ರಯ ಪಡೆದಿದ್ದೆವು. ಗುಂಪಿನ ಎಲ್ಲರೂ ತಮ್ಮ ಆರೋಗ್ಯ ಸರಿಯಿದ್ದಾಗ ತುಂಬ ಹರಟುತ್ತಿದ್ದು, ಕಾಯಿಲೆಯಾದೊಡನೆ ಮೌನಿಗಳಾಗುತ್ತಿದ್ದರು. ನಾನು ಮಾತ್ರ ಮೊದಲಿನಿಂದಲೂ ಮಾತನಾಡಲು ಉತ್ಸಾಹ ತೋರಲಿಲ್ಲ. ಸಹ ವಸತಿಗರಲ್ಲಿ ಮಾತ್ರ ಅವಶ್ಯವಿದ್ದಷ್ಟು ಮಾತು. ಆರೋಗ್ಯ ಕೊನೆಯವರೆಗೂ ಚೆನ್ನಾಗಿಯೇ ಇತ್ತು. ಸೆರಾತಾಂಗ್‌ನಲ್ಲಿ ಡಯೇರಿಯ ಆದದ್ದು ಎರಡೇ ಮಾತ್ರೆಗಳಲ್ಲಿ ಸರಿಹೋಯಿತು. ಆ್ಯಸಿಡಿಟಿಯಾಗಲಿ, ತಲೆನೋವಾಗಲಿ ನನ್ನನ್ನು ಕಾಡಲೇ ಇಲ್ಲ. ನಾನು ಉದ್ವೇಗಗೊಂಡದ್ದು ಎರಡೇ ಬಾರಿ. ಮಾನಸ ಸರೋವರದಲ್ಲಿ ಅಣ್ಣನಿಗೆ ತರ್ಪಣ ಬಿಡುವಾಗ ಇನ್ನು ಅಣ್ಣ ನನ್ನ ಪಾಲಿಗೆ ಇಲ್ಲ ಎನ್ನಿಸಿದ ದುಃಖ ಒಮ್ಮೆ, ಹಾಗೂ, ಪರಿಕ್ರಮ ಮುಗಿದು, ಕುದುರೆ, ಪೋರ್ಟರುಗಳಿಗೆ ವಿದಾಯ ಹೇಳುವಾಗ, ಸ್ವಲ್ಪವೂ ತೊಂದರೆ ಕೊಡದೆ ಸಾಧುವಾಗಿ ನನ್ನನ್ನು ಹೊತ್ತ ಆ ಬಿಳಿ ಕುದುರೆಯ ಬಗೆಗೆ ಕೃತಜ್ಞತೆಯ ಸಂತೋಷ ಒಮ್ಮೆ. ಮಾನಸ ಸರೋವರದಲ್ಲಿ ದೇವರುಗಳು ಸ್ನಾನ ಮಾಡುವುದು ಕಾಣದಿದ್ದರೂ, ಕುಗು ದೇವಾಲಯದ ವಿಚಿತ್ರ ವರ್ಣ ವೈಭವದ ದೇವರುಗಳ ಫೋಟೋಗಳನ್ನು ತೆಗೆಯಲು ಸಾಧ್ಯವಾಯಿತು. ಗ್ಯಾಂಗ್‌ಟೋಕ್‌ನ ಕರ್ಮಪಾ ಮಠದಲ್ಲೂ ಹೀಗೇ ಫೋಟೋ ತೆಗೆದೆ. ಮೈಸೂರಿಗೆ ಅಪರಾತ್ರಿ ಬಂದಾಗಲೂ ಒಬ್ಬ ರಿಕ್ಷಾವಾಲಾ ರಿಕ್ಷಾತನಕ ನನ್ನ ಲಗೇಜು ಹೊತ್ತು, ಸುಖವಾಗಿ ನನ್ನನ್ನು ರಾತ್ರಿ ಮೂರೂವರೆಗೆ ತಲುಪಿಸಿದ! ಎಲ್ಲ ಸುಮುಖವಾಗಿ ನಡೆದದ್ದು ದೇವರ ಕೃಪೆ.

(ನಾನು ತೆಗೆದ ಫೋಟೋಗಳನ್ನು ಇಂಟರ್‌ನೆಟ್‌ನಲ್ಲಿ ಡೌನ್‌ಲೋಡ್ ಮಾಡಿ ನೋಡಬಹುದು. ಲಿಂಕ್: https://flic.kr/s/aHskFSSbgV)

(ಸಮಾಪ್ತಿ)

ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಭಾಗ ೧೧



ಶ್ರೀಮಾತೆಯವರ ತಮ್ಮಂದಿರು, ಅವರ ಹೆಣ್ಣುಮಕ್ಕಳು ಇವರ ತಿಳಿಗೇಡಿತನ ಎಷ್ಟೊಂದು ವೃದ್ಧಿಯಾಗುತ್ತಿತ್ತೆಂದರೆ, ಶ್ರೀಮಾತೆ ಪೃಥಿವಿಯಂತೆ ಕ್ಷಮಾಗುಣವನ್ನು ಹೊಂದಿದ್ದರೂ, ಕೆಲವೊಮ್ಮೆ ಅದು ಎಲ್ಲೆ ಮೀರಿ ಹೋಗುತ್ತಿತ್ತು. ಅವರು ಅತ್ಯಂತ ವಿರಕ್ತಿಯಿಂದ ಹಲವು ಬಾರಿ ಹೇಳುತ್ತಿದ್ದರು: ''ಅಯ್ಯೋ, ನಾನು ಕೊಳೆಯಲ್ಲಿ ಹುಟ್ಟಿದ ಕಮಲದಂತೆ ಅರಳಿದ್ದೇನೆ. ಠಾಕೂರ್ ಕೂಡ ಹಾಗೆ, ಸೆಗಣಿ ಗೊಬ್ಬರದಲ್ಲಿ ಹುಟ್ಟಿದ ತಾವರೆ!''

ಅಜ್ಜಿ ತೀರಿಕೊಂಡ ಮರುದಿನ ಬೆಳಿಗ್ಗೆ ಶ್ರೀಮಾತೆ ತಮ್ಮಂದಿರನ್ನು ಹಾಗೂ ನನ್ನನ್ನು ಕರೆದು ಶ್ರಾದ್ಧಕ್ಕೆ ವ್ಯವಸ್ಥೆ ಮಾಡಲು ಹೇಳಿದರು. ಶ್ರಾದ್ಧಕಾರ್ಯದಲ್ಲಿ ಯಾವುದಕ್ಕೂ ಕಡಿಮೆಯಾಗಬಾರದು ಎಂದು ಅವರು ತಮ್ಮ ಬಯಕೆಯನ್ನು ಪ್ರಕಟಪಡಿಸಿದರು. ಬೇಕಾದ ಸಾಮಾನುಗಳ ಪಟ್ಟಿ ತಯಾರಿಸಲಾಯಿತು. ಮಧ್ಯಾಹ್ನ ಊಟವಾದ ಬಳಿಕ ನಾನು ಕಲ್ಕತ್ತೆಗೆ ಹೊರಟೆ.

ಕಲ್ಕತ್ತೆಯಲ್ಲಿ ಮೂರು ದಿನವಿದ್ದು, ಬೇಕಾದ ವಸ್ತುಗಳನ್ನೆಲ್ಲ ಸಂಗ್ರಹಿಸಿ, ಮೂರು ಎತ್ತಿನಗಾಡಿಗಳಲ್ಲಿ ಅವನ್ನೆಲ್ಲ ಜೋಡಿಸಿ, ನಾಲ್ಕನೇ ದಿನ ಜಯರಾಮಬಾಟಿ ತಲುಪಿದೆ. ಶ್ರಾದ್ಧ ನಡೆಯಿತು. ಐವತ್ತು ಹಿತ್ತಾಳೆಯ ಕೊಡ, ಛತ್ರಿ, ಆಸನ ಹಾಗೂ ಮರದ ಪಾದುಕೆಗಳನ್ನು ದಾನ ನೀಡಲಾಯಿತು. ಅಜ್ಜಿಯ ಕೊನೆಯ ಆಸೆಯಂತೆ, ಶ್ರಾದ್ಧದ ಭೋಜನಕ್ಕೆ ಕುಂಬಳಕಾಯಿ ಪಲ್ಯವನ್ನು ಹೇರಳವಾಗಿ ಮಾಡಿಸಿ ಬ್ರಾಹ್ಮಣರಿಗೂ, ಇತರರಿಗೂ ಬಡಿಸಲಾಯಿತು.

ಶ್ರಾದ್ಧದಲ್ಲಿ ತುಂಬಾ ಶ್ರಮ ವಹಿಸಿದ್ದರಿಂದ ಶ್ರೀಮಾತೆಯವರ ದೇಹಾರೋಗ್ಯ ವಿಪರೀತ ಕೆಟ್ಟಿತು. ಅದನ್ನು ಮತ್ತೆ ಪಡೆಯಲು ಅವರಿಗೆ ಒಂದು ತಿಂಗಳಿಗಿಂತಲೂ ಹೆಚ್ಚು ಸಮಯ ಬೇಕಾಯಿತು.

ಶ್ರೀಮಾತೆಯವರ ಕೋಣೆಯ ಪಡಸಾಲೆಯಲ್ಲಿ ಒಂದು ಹಕ್ಕಿ ಗೂಡು ತೂಗಾಡುತ್ತಿತ್ತು. ಅದರಲ್ಲಿ 'ಗಂಗಾರಾಮ' ಎಂಬ ಹೆಸರಿನ ಗಿಳಿಯೊಂದಿತ್ತು. ಅದನ್ನು ಮನೆಯವರೆಲ್ಲ ''ಓದಪ್ಪಾ, ಗಂಗಾರಾಮ'' ಎನ್ನುತ್ತ ಪೀಡಿಸುತ್ತಿದ್ದರು. ಆದರೆ ನನಗೆ ತಿಳಿದಿರುವಂತೆ, ಅಷ್ಟು ದೀರ್ಘಕಾಲದಲ್ಲಿ ಒಂದು ಸಲವೂ ಗಂಗಾರಾಮ ಒಂದಕ್ಷರ ಓದಿದ್ದನ್ನು ನಾನು ನೋಡಿಲ್ಲ. ಆದರೂ, ಅದು ಗೂಡಿನೊಳಗೇ ಅತ್ತಿಂದಿತ್ತ ಓಡಾಡುತ್ತ, ಸಹಜವಾಗಿ 'ಕ್ಯಾಂವ್, ಕ್ಯಾಂವ್' ಎಂದು ಕೂಗುತ್ತಿದ್ದುದನ್ನೇ ಹಲವಾರು ಬಾರಿ ನೋಡಿದ್ದೆ. ಅದಕ್ಕೆ ಚೆನ್ನಾಗಿ ತಿನ್ನುವುದರಲ್ಲಿ ಆಸಕ್ತಿ. ಇದಕ್ಕೆ ನಿದರ್ಶನವಾಗಿ ಹಲವು ಘಟನೆಗಳಿವೆ. ವರದ ಮಾವ ಎಲ್ಲಿಂದಲೋ ಅದನ್ನು ತಂದಿದ್ದ. ಅದಕ್ಕೆ ತಿನ್ನುವ ವಿಷಯದಲ್ಲಿ ಇರುವ ನಾಜೂಕಿಗಾಗಿ ಇರಬೇಕು, ಅದನ್ನು ಶ್ರೀಮಾತೆಯವರ ಮನೆಯ ಬಳಿ ತಂದು ಬಿಟ್ಟಿದ್ದರು.

ವರದ ಮಾವನ ಬಳಿ ಒಂದು ನಾಯಿ ಇತ್ತು. ಒಂದು ದಿನ ಅದು ಇದ್ದಕ್ಕಿದಂತೆ ಮಾಯವಾಗಿಬಿಟ್ಟಿತು. ತುಂಬಾ ಹುಡುಕಿದ ಮೇಲೆ, ಶಿಹೋರ್ ಗ್ರಾಮದ ತುದಿಯಲ್ಲಿ ಒಬ್ಬ ಗೃಹಸ್ಥನ ಮನೆಯಲ್ಲಿತ್ತು . ಮಾವ ಅದನ್ನು ಹುಡುಕಿ ಹಿಡಿದ. ಆದರೆ ಆ ಗೃಹಸ್ಥನಿಂದ ಅದನ್ನು ಪಡೆಯಲಾಗಲಿಲ್ಲ. ಅದೃಷ್ಟವಶಾತ್ ಸ್ನೇಹಿತ ಲಲಿತನು ಸಾಹೇಬನಂತೆ ವೇಷ ಧರಿಸಿಕೊಂಡು, ಪಲ್ಲಕ್ಕಿಯಲ್ಲಿ ಜಯರಾಮಬಾಟಿಗೆ ಬಂದ. ವರದಮಾವ ನಾಯಿಯನ್ನು ಕರೆತರಲು ಲಲಿತನನ್ನು ಕಳುಹಿಸಬೇಕೆಂದು ಶ್ರೀಮಾತೆಯವರನ್ನು ಅನೇಕ ಬಗೆಯಲ್ಲಿ ಅನುನಯದೊಂದಿಗೆ ಒತ್ತಾಯಪಡಿಸಿದ. ಶ್ರೀಮಾತೆ ವಿರಕ್ತಿಯಿಂದ ನನಗೆ ಹೇಳಿದರು. ಅಷ್ಟರಲ್ಲಿ ನಾಯಿ ಮರಳಿ ಬಂತು. ಆ ಗೃಹಸ್ಥ ಲಲಿತನ ವೇಷವನ್ನು ನೋಡಿ, ಇನ್ಸಪೆಕ್ಟರ್ ಎಲ್ಲವನ್ನೂ ವಿಚಾರಿಸಲು ಬಂದಿದ್ದಾನೆ ಎಂದು ಕೊಂಡಿರಬೇಕು.

ಶ್ರೀರಾಮಕೃಷ್ಣರ ಆದೇಶದಂತೆ ಯೋಗಿನ್ ಮಹಾರಾಜ್ ಬಡೋಬಜಾರಿನಿಂದ ಒಂದು ಪಾತ್ರೆಯನ್ನು ಖರೀದಿಸಿ ತಂದಿದ್ದರು. ಅವರನ್ನು ವಿಚಾರಿಸಿದಾಗ ಠಾಕೂರ್‌ಗೆ ತಿಳಿಯಿತು, ನಾಲ್ಕೈದು ಅಂಗಡಿಗಳಲ್ಲಿ ಅದರ ದರ ಕೇಳಿ ತಿಳಿಯದೆ, ಕೇವಲ ಒಂದು ಅಂಗಡಿಯಲ್ಲಿ ಅವರು ಹೇಳಿದ ಬೆಲೆಯನ್ನು ತೆತ್ತು ಕೊಂಡುಕೊಂಡು ಬಂದಿದ್ದಾರೆ ಅಂತ. ಠಾಕೂರರು ಅದನ್ನು ಕೇಳಿ ಅವರಿಗೆ ಬೈದು ಹೇಳಿದರು, ''ಭಕ್ತನಾಗುವುದಿದ್ದರೆ ಹೆಡ್ಡನಾಗಬೇಕೆಂದಿದೆಯೆ? ಹೋಗು, ನಹಬತ್‌ಗೆ ಹೋಗಿ ಮಂತ್ರ ತೆಗೆದುಕೋ.'' ಹೀಗೆ ಅವರು ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದರು.೧

ಶ್ರೀರಾಮಕೃಷ್ಣರ ಶಿಷ್ಯರೆಲ್ಲ ಶ್ರೀಮಾತೆಯವರನ್ನು ದೇಹಪೂರ್ತಿ (ಪಾದಗಳನ್ನು ಹೊರತುಪಡಿಸಿ) ಉತ್ತರೀಯದಿಂದ ಆವರಿಸಿಕೊಂಡಿದ್ದಾಗಲೇ ನೋಡಬಹುದಾಗಿತ್ತು, ಈ ವಿಷಯವನ್ನು ಈಗಾಗಲೇ ಹೇಳಲಾಗಿದೆ. ಇದಕ್ಕೆ ವಿರುದ್ಧವಾಗಿ ಅವರು ನಡೆದುಕೊಂಡದ್ದನ್ನೂ ಬೇರೆ ಕಡೆ ಹೇಳಿದೆ. ಶಾರದಾ ಮಹಾರಾಜರು (ತ್ರಿಗುಣಾತೀತಾನಂದರು) ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆಯುವಾಗ ಅವರಿಂದ ಬೀಜಮಂತ್ರ ಸಹಿತವಾಗಿ ಮಂತ್ರೋಚ್ಚಾರಣೆಯನ್ನು ಕೇಳಿಸಿಕೊಂಡಿದ್ದರು; ಕರಜಪ ವಿಧಿಯನ್ನು ತೋರಿಸಿ ಕೊಡುವಾಗ ಅವರ ಬಲಗೈಯನ್ನು ನೋಡಿದ್ದರು. ಯೋಗಿನ್ ಮಹಾರಾಜರ ದೀಕ್ಷೆಯ ಸಮಯದಲ್ಲೂ ಇದೇ ರೀತಿ ಆಗಿತ್ತು.

ಶ್ರೀಮಾತೆಯವರ ಒಬ್ಬರು ಶಿಷ್ಯರ ಮನೆ ಕಲ್ಕತ್ತೆಯಲ್ಲಿ ಸರ್ಪಂಟೇನ್ ಲೇನ್‌ನಲ್ಲಿತ್ತು; ಅವರು ನನಗಿಂತ ಹಿರಿಯರು. ಮಂತ್ರದೀಕ್ಷೆ ಪಡೆಯುವ ತನಕವೂ ಅವರು ಭಗವಂತನ ಒಂದು ಮೂರ್ತಿಯನ್ನು ಉಪಾಸನೆ ಮಾಡುತ್ತಿದ್ದರು. ಮಂತ್ರದೀಕ್ಷೆ ಪಡೆದುದು ಪೂರ್ತಿ ಬೇರೆಯೇ ಆದ ಮೂರ್ತಿಯನ್ನು ಕುರಿತು. ಇದರ ಪರಿಣಾಮವಾಗಿ ಅವರ ಹೃದಯದಲ್ಲಿ ತಾಕಲಾಟ ಆರಂಭವಾಯಿತು. ಜೀವನವೆಲ್ಲ ಶೂನ್ಯವೆನಿಸತೊಡಗಿತು. ಹೀಗೆ ಹತಾಶೆಗೊಳಗಾದ ಅವರು ಕೆಲವು ದಿನಗಳ ನಂತರ ಇನ್ನೊಬ್ಬರು ಸಹೋದರರ ಸಹಾಯದಿಂದ ಶ್ರೀಮಾತೆಯವರ ಬಳಿಗೆ ಬಂದು, ಎಲ್ಲವನ್ನೂ ನಿವೇದಿಸಿಕೊಂಡರು. ಶ್ರೀಮಾತೆ, ''ಮಂತ್ರ ಸರಿಯಾಗಿದೆ'' ಎಂದರು. ಶ್ರೀಮಾತೆಯವರ ಈ ಮಾತಿನ ಪ್ರಭಾವದಿಂದ ನಿಧಾನವಾಗಿ ಅವರ ಮನಸ್ಸು ಏಕಾಗ್ರಗೊಂಡು, ಅವರ ಹೃದಯದಲ್ಲಿದ್ದ ಅಶಾಂತಿಯೆಲ್ಲ ಮಾಯವಾಗಿ, ಅವರ ಹೃದಯದಲ್ಲಿ ಮಹಾಶಾಂತಿ ನಲಿದಾಡಿತು!

ಭಕ್ತರು ಬರೆದ ಪತ್ರಗಳನ್ನು ಶ್ರೀಮಾತೆಯವರಿಗೆ ಓದಿ ಹೇಳುವ, ಅವರಿಗೆ ಉತ್ತರ ಬರೆಯುವ ಜವಾಬ್ದಾರಿ ಕೆಲವು ವರ್ಷಗಳ ಕಾಲ ನನ್ನ ಮೇಲಿತ್ತು. ಈ ಕೆಲಸಗಳ ನಡುವೆ ಒಂದು ಸಲ ಹೊಸ ಒಂದು ಅನುಭವವುಂಟಾಯಿತು, ಅದನ್ನು ಇಂದಿಗೂ ನನಗೆ ಮರೆಯಲಾಗುತ್ತಿಲ್ಲ. ಶ್ರೀಮಾತೆಯವರ ಹೆಸರಿನಲ್ಲಿ ಬಂದ ಪತ್ರಗಳನ್ನು ಒಡೆಯುವುದಾಗಲೀ, ಓದುವುದಾಗಲೀ ನಾನು ಮಾಡುತ್ತಿರಲಿಲ್ಲ. ಪ್ರತಿದಿನವೂ ನಿರ್ದಿಷ್ಟ ಸಮಯದಲ್ಲಿ ಶ್ರೀಮಾತೆಯವರ ಮುಂದೆ ಅದನ್ನು ಒಡೆದು ಓದುತ್ತಿದ್ದೆ. ಅಂದು ಐದು ಪತ್ರಗಳು ಬಂದಿದ್ದವು. ಅವುಗಳಲ್ಲಿ ಮೂರು ಪೋಸ್ಟ್‌ಕಾರ್ಡ್‌ಗಳು; ಎರಡು ಕವರ್‌ಗಳು. ನಾನು ಮೊದಲು ಒಂದು ಕವರನ್ನು ಒಡೆದು ಓದತೊಡಗಿದೆ. ಆ ಪತ್ರದಿಂದ ತಿಳಿದು ಬಂತು, ಅದು ಶ್ರೀ ಶ— ನ ಪತ್ರವೆಂದು. ಅವನು ಬರೆದಿದ್ದ, ''ಅಮ್ಮಾ, ನಿಮ್ಮ ಪಾದಕಮಲಗಳಲ್ಲಿ ನನ್ನ ಕೋಟಿ ಕೋಟಿ ಪ್ರಣಾಮಗಳೊಂದಿಗೆ ನನ್ನ ನಿವೇದನೆಯೇನೆಂದರೆ, ನಿಮ್ಮ ಈ ದಾಸ..'' ಮುಂದೆ ಓದಲಾಗಲಿಲ್ಲ. ಆರು ಪುಟಗಳ ಪತ್ರ; ಮನಸ್ಸಿನಲ್ಲೇ ಅದನ್ನು ಓದಲು ಸ್ವಲ್ಪ ಹೊತ್ತು ಹಿಡಿಯಿತು. ಆ ಕ್ಷಣದಲ್ಲಿ ಶ್ರೀಮಾತೆ ನನ್ನತ್ತ ನೆಟ್ಟ ನೋಟದಿಂದ ನೋಡುತ್ತಿದ್ದರು. ಅವರ ಕಡೆಗೆ ನೋಡಿದಾಗ ನನ್ನೆದೆ ಢವಢವ ಹೊಡೆದುಕೊಳ್ಳತೊಡಗಿತು. ಅವರು ಏನಾದರೂ ಕೇಳಿದರೆ ಏನೆಂದು ಉತ್ತರ ಕೊಡಲಿ? ಎಂದು ನಾನು ಭಾವಿಸಿದೆ. ಸರಿಯಾಗಿ ಉತ್ತರ ನೀಡಲಾಗದೆ, ಪತ್ರಗಳನ್ನು ಪ್ರತ್ಯೇಕವಾಗಿ ಇಟ್ಟು, ಇನ್ನೊಂದು ಪತ್ರವನ್ನು ಓದತೊಡಗಿದೆ. ಶ್ರೀಮಾತೆ ಮೌನವಾಗಿ ಎಲ್ಲವನ್ನೂ ಕೇಳಿದರು. ಏನೇನು ಉತ್ತರ ಬರೆಯಬೇಕೆಂದು ಅವರು ಹೇಳಿಕೊಟ್ಟರು. ಎಲ್ಲ ಮುಗಿದ ನಂತರ ಶ್ರೀಮಾತೆ, ''ಆ ಪತ್ರವನ್ನೇಕೆ ಓದಲಿಲ್ಲ?'' ಎಂದು ಕೇಳಿದರು. ನನ್ನ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು. ಏನೆಂದು ಉತ್ತರ ಕೊಡಲಿ? ಅವರು ನನ್ನ ಗುರು— ಅದೇ ಮಾತೃರೂಪಿಣಿ, ಆ ತಾಯಿಯೆಂದರೆ ನಿಜವಾದ ತಾಯಿಯೇ; ಸ್ವಯಂ ಜಗನ್ಮಾತೆಯೇ! ಎಂದಿಗೂ ಆ ತಾಯಿಗೆ ಇಲ್ಲವೆನ್ನಲು ನನಗೆ ಸಾಧ್ಯವಾಗದು. ಆದರೂ ಆ ಪತ್ರವನ್ನೀಗ ಹೇಗೆ ಓದಲಿ? ಪತ್ರ ಬರೆದವನ ಹಿಂದಿನ ಬದುಕಿನ ದುಷ್ಕಾರ್ಯಗಳ ವರ್ಣನೆಗಳಿಂದ ತುಂಬಿರುವ ಆ ಸಂಗತಿಗಳನ್ನು ಮನುಷ್ಯ ಮಾತ್ರರಿಂದ ಚಿಂತಿಸಲೂ ಸಾಧ್ಯವಾಗದು. ಅದಲ್ಲದೆ, ಎಷ್ಟೊಂದು ಭಯರಹಿತವಾದ ಕಪಟತೆಯಿಲ್ಲದ ರೀತಿ ಅವನು ತನ್ನ ಪಾಪಗಳನ್ನು ವ್ಯಕ್ತಗೊಳಿಸಿದ್ದಾನೆ! ಅದನ್ನು ಹೊಗಳದೆ ಇರಲೂ ಸಾಧ್ಯವಿಲ್ಲ.

ಇರಲಿ, ನನ್ನ ತುಟಿಗಳು ಒಣಗಿ, ನಡುಗುವ ಸ್ವರದಿಂದ ಹೇಳಿದೆ. ''ಹೇಗೆ ಓದಲಮ್ಮಾ? ನನ್ನಿಂದಾಗದು'' ಎಂದೆ. ಅದಕ್ಕೆ ಶ್ರೀಮಾತೆ ಹೇಳಿದರು: ''ತಿಳಿಯಿತು, ಓದಬೇಕಾಗಿಲ್ಲ. ಇಂಥ ಪತ್ರ ಬರೆಯಬಾರದೆಂದು ನಿಷೇಧಿಸಿ ಅವನಿಗೆ ಬರೆ. ನನಗೆ ಬರುವ ಪತ್ರಗಳನ್ನು ಶಿಷ್ಯಂದಿರು, ಹೆಣ್ಣು ಮಕ್ಕಳು ಕೂಡ ಓದುತ್ತಾರೆ. ಹಳ್ಳಿಯಲ್ಲಿ (ಜಯರಾಮಬಾಟಿ) ಯಾರೂ ಇಲ್ಲದಿದ್ದಾಗ ನನ್ನ ತಮ್ಮಂದಿರೂ ಓದುತ್ತಾರೆ. ಆಮೇಲೆ ಹೀಗೆ ಬರೆ, 'ಮೊದಲು ರಾಹುಗ್ರಸ್ತ ಚಂದ್ರನಾಗಿದ್ದೆ, ಈಗ ಠಾಕೂರರ ಆಶ್ರಯವನ್ನು ಪಡೆದುಕೊಂಡು, ಷೋಡಶ ಕಲೆಗಳಿಂದ ಪೂರ್ಣವಾಗಿದ್ದೀಯಾ. ಇನ್ನು ಚಿಂತೆಯೇಕೆ? ಠಾಕೂರರೇ ಎಲ್ಲವನ್ನೂ ಸರಿಪಡಿಸುವರು' ಅಂತ.''

ಓದುಗರೆ! ಶ್ರೀಮಾತೆಯವರ ಈ ಮಾತಿನಲ್ಲಿ ಏನಾದರೂ ಸಾಹಿತ್ಯದ ಗುಣವನ್ನು ಕಂಡಿರಾ? ಎಲ್ಲಾದರೂ ನಿಮಗೆ ಗೋಚರವಾದರೆ, ಖಂಡಿತ ಮರೆಯಬೇಡಿ — ನಿಮ್ಮ ಶ್ರೀಮಾತೆ ಠಾಕೂರರಂತೆಯೇ ನಿರಕ್ಷರಸ್ಥರು ಎಂಬುದಾಗಿ.

---

೧ ಯೋಗಿನ್ ಮಹಾರಾಜರ (ಸ್ವಾಮಿ ಯೋಗಾನಂದರ) ಮಂತ್ರದೀಕ್ಷೆ ಆಗಲೇ ನಡೆದಿತ್ತೆ? ಅಥವಾ ಬಹಳ ದಿನಗಳ ನಂತರ – ಅಂದರೆ ಶ್ರೀರಾಮಕೃಷ್ಣರ ದೇಹತ್ಯಾಗವಾದ ನಂತರ ವೃಂದಾವನದಲ್ಲಿ ಶ್ರೀಮಾತೆ ಇದ್ದಾಗ ನಡೆಯಿತೆ? *(–ಸಂ.)*

ಶ್ರೀಮಾತೆ ಒಂದು ಸಲ ಎರಡನೇ ಅತ್ತೆಗೆ ಬಯ್ಯುತ್ತಿದ್ದರು: ''ನೀವೆಲ್ಲ ಒಂದೆರಡು ಮಕ್ಕಳನ್ನು ಕಟ್ಟಿಕೊಂಡು, ಅದೇ ಚಿಂದಿ ಒದ್ದೆ ಬಟ್ಟೆಯಲ್ಲೇ ಇದ್ದು ಬಿಡಿ; ನಿಮಗೆ ಬೆಳೆಸಲು ಬರುವುದಿಲ್ಲ. ನಾನು ಯಾರೂ ಇಲ್ಲದ ಅನಾಥರ ತಾಯಿ. ಸಾವಿರಾರು ಮಕ್ಕಳನ್ನು ಬೆಳೆಸುತ್ತಿದ್ದೇನೆ. ಕೆಲವರು ಸಾಧುಗಳು, ಕೆಲವರು ಅಸಾಧುಗಳು — ತಲೆ ಕೆಟ್ಟು ಹೋದಾಗ ಬಂದು ಹೋಗುತ್ತಾರೆ, 'ಅಮ್ಮಾ ನನ್ನನ್ನು ದಡ ಸೇರಿಸು!' ಅಂತ. ಇದೆಲ್ಲ ನಿನಗೆ ಅರ್ಥವಾಗುತ್ತಿದೆಯೆ? ಅವರಿಗಂತೂ ಬೇರೆ ಯಾವ ಆಧಾರವೂ ಇಲ್ಲ. ನಮಗೆ ಗೊತ್ತಿರುವುದು ಹಣ, ಧಾನ್ಯ, ಒಟ್ಟು, ಮನೆ, ಕೋಣೆ, ಬಾಗಿಲು ಅಂತ ಮಾತ್ರ. ನೀವು ಹೇಗೆ ಬಂದಿದ್ದೀರೋ ಹಾಗೇ ಹೋಗುತ್ತೀರಿ. ಬಹಳ ಭಾಗ್ಯದಿಂದ ಮನುಷ್ಯ ಜನ್ಮ ದೊರಕುತ್ತದೆ ಅಂತ ಹೇಳುತ್ತಾರೆ. ಅಂಥ ಮನುಷ್ಯ ಜನ್ಮ ದೊರಕಿಯೂ ನೀವು ಏನು ಮಾಡಿದಿರಿ?''

ಜಯರಾಮಬಾಟಿಯಲ್ಲಿ ನನಗೆ ಒಂದು ಸಲ ಜ್ವರ ಬಂತು. ಕೆಲವು ದಿನ ನಾನು ಮಲಗಿರಬೇಕಾಯಿತು. ಹಾಗೆ ಜ್ವರ ಬಂದಾಗ ಶ್ರೀಮಾತೆಗಾದ ಉದ್ವೇಗ, ಶ್ರಮ ಇವನ್ನು ನೆನೆದರೆ ಈಗಲೂ ನನ್ನ ಮನಸ್ಸಿಗೆ ವಿಪರೀತ ಸಂಕಟವಾಗುತ್ತಿದೆ. ನನ್ನ ವಿಶೇಷ ಭಾಗ್ಯದ ವಿಚಾರ ಆಗಾಗ ನೆನಪಾಗುತ್ತಿದೆ, ಅದು ಶ್ರೀಮಾತೆಯವರ ಕೈಯಿಂದ ಸೇವೆ ಮಾಡಿಸಿಕೊಂಡ ಸಂಗತಿ!

ಅವರು ಮಾಡಿದ ಶುಶ್ರೂಷೆಯನ್ನು ಜೀವನವಿಡೀ ಮರೆಯಲು ಸಾಧ್ಯವಿಲ್ಲ! ಅವರು ಯಾವ ರೀತಿ ಸೇವೆ ಮಾಡಿದರು, ಯಾವ ದೂರದೃಷ್ಟಿಯಿಂದ ಅದನ್ನು ತೋರಿಸಿಕೊಟ್ಟರು ಇವುಗಳನ್ನು ನೋಡಿದಾಗ ಅರ್ಥವಾದೀತು, ಅವರು ಯಾವುದೇ ಸುಶಿಕ್ಷಿತಳಾದ ನರ್ಸ್‌ಗಿಂತ ಯಾವ ರೀತಿಯಲ್ಲೂ ಕಡಿಮೆಯಿಲ್ಲವೆಂದು. ಅವರಿಂದ ಹೀಗೆ ಸೇವೆ ಮಾಡಿಸಿಕೊಂಡುದಕ್ಕೆ ನನ್ನ ಮನಸ್ಸಿನಲ್ಲಿ ನನ್ನ ಬಗ್ಗೆಯೇ ಆಗ ಧಿಕ್ಕಾರ ಮೂಡಿತ್ತು. ಮಗನಾದವನು ತಾಯಿಯ ಸೇವೆ ಮಾಡಬೇಕಾಗಿದ್ದಲ್ಲಿ, ತಾಯಿಯೇ ಮಗನ ಸೇವೆ ಮಾಡುತ್ತಿದ್ದಾಳೆ ಎಂಬುದನ್ನು ನೋಡಿ ಆ ಭಾವ ಮೂಡಿತ್ತು. ಅವರನ್ನು ತಡೆಯಲು ಪ್ರಯತ್ನಿಸಿದೆ; ಆದರೆ ಅದಕ್ಕೆ ಅವರಿಂದ ಬೈಗುಳ ತಿಂದು ಸುಮ್ಮನಾಗಬೇಕಾಯಿತು. ಅವರದು ಒಂದೇ ಉತ್ತರ: ''ತಾಯಿ ಇದನ್ನು ಮಾಡದಿದ್ದರೆ ಊರ ಜನ ಬಂದು ಮಾಡಬೇಕೆ?''

ಜ್ವರವಾಸಿಯಾಗಿ, ತಲೆಯ ಮೇಲೆ ಅವರು ಕೈಯಾಡಿಸುತ್ತಿದ್ದಾಗ ನಾನು ಅವರಿಗೆ ಕೇಳಿಸದಂತೆ ಮನಸ್ಸಿನಲ್ಲೇ ಹಾಡಿಕೊಳ್ಳುತ್ತಿದ್ದೆ:

> ಯೋಗೀಂದ್ರ, ಮುನಿಂದ್ರ, ಇಂದ್ರ, ಮೊದಲಾದವರು
> ಯಾವ ಪದವನು ಪಡೆಯದಾದರೋ ಧ್ಯಾನದಲಿ
> ಅಂಥ ಚರಣವ ಬಯಸಿ ಕಾದಿರುವೆ ನಾನು
> ನಿನ್ನ ಕಮಲಾಕಾಂತನು.

ಒಂದು ದಿನ ಹೀಗೆ ಜ್ವರ ಬಂದಾಗ ಅವರು ನನ್ನ ತಲೆಯಲ್ಲಿ ಕೈಯಾಡಿಸುತ್ತಿದ್ದರು. ಚೆನ್ನಾಗಿ ನೆನಪಿದೆ, ಜ್ವರದ ಹೊಡೆತಕ್ಕೆ ನಾನು ಅವರ ಎರಡು ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದೆ, - ''ಹೇಳಬೇಕು, ನೀವು ಯಾರು? ಇಂದು ನಿಮ್ಮನ್ನು ಬಿಡಲಾರೆ.'' ಕೂಡಲೇ ಉತ್ತರ ಲಭಿಸಿತು, ''ಇದೆಲ್ಲ ಏನು ನಿನ್ನದು? ನಿನ್ನ ಮುಂದೆ ನಾನು ತಾಯಿ!'' ಅಂತ. ನಾನು ಸುಮ್ಮನಾಗಿ ವರ ಬೇಡಿ ಪ್ರಾರ್ಥಿಸಿದೆ: ''ಈ ಪ್ರೀತಿಯನ್ನು ನಾನು ಚಿರಕಾಲವೂ ಪಡೆಯುವೆನೆ?'' ಉತ್ತರ ಬಂತು: ''ಹೌದು, ಇಲ್ಲಿ ಉಬ್ಬರ, ಇಳಿತಗಳಿಲ್ಲ.''

ಒಂದು ದಿನ ಶ್ರೀರಾಮಕೃಷ್ಣರು ದೇಹತ್ಯಾಗ ಮಾಡಿದ ದಿನದ ಬಗ್ಗೆ ಪ್ರಸ್ತಾಪವೆತ್ತಿ ಹೇಳತೊಡಗಿದರು: ''ಯಾವಾಗ ಹೀಗಾಯಿತೋ, ಲೋಕದ ಪದ್ಧತಿಯನ್ನು ಅನುಸರಿಸಬೇಕೆಂದುಕೊಂಡು ಕೈಯ ಬಳೆಯನ್ನು ತೆಗೆಯಲು ಹೊರಟೆ. ಅಷ್ಟರಲ್ಲಿ ಠಾಕೂರರು ಕಣ್ಣೆದುರಿಗೆ ನಿಂತುಕೊಂಡಿರುವಂತೆ ಕಾಣಿಸಿಕೊಂಡರು. ಅವರೆಂದರು, ''ನಾನು ಎಲ್ಲಿಗೆ ಹೋಗಿದ್ದೇನೆ ಅಂತ ಬಳೆ ತೆಗೆಯುತ್ತಿದ್ದೀಯಾ? ಈ ಕೋಣೆಯಿಂದ ಆ ಕೋಣೆಗೆ ಹೋದೆನಷ್ಟೆ.'' ಕೈಬಳೆ ಹಾಗೆ ಕೈಯಲ್ಲೇ ಉಳಿಯಿತು. ಮತ್ತೆ ತೆಗೆಯಲಾಗಲಿಲ್ಲ. ನಾನು ಭಾವಿಸಿದೆ, ಜನ ಏನು ಆಡಿಕೊಳ್ಳುತ್ತಾರೋ ಆಡಿಕೊಳ್ಳಲಿ, ಏನೇ ತಿಳಿದುಕೊಳ್ಳಲಿ, ನಾನು ಬಳೆ ಕಳಚಲಾರೆ ಅಂತ. ಇನ್ನೊಂದು ಸಲ ವೃಂದಾವನದಲ್ಲಿ ಹೀಗೆ ಜನರ ಮಾತಿಗೋಸ್ಕರ ಬಳೆ ಕಳಚಲು ಹೋದಾಗಲೂ ಅದೇ ರೀತಿ ಅವರನ್ನು ಕಂಡೆ.''

''ಈಗಲೂ ಕೂಡ ಠಾಕೂರ್ ಯಾವಾಗಲೂ ನಿಮಗೆ ಕಾಣಿಸಿಕೊಳ್ಳುತ್ತಾರೇನು?''

''ನಾವಿಬ್ಬರೂ ಬೇರೆಯೇನು?'' ಹೀಗೆ ಉತ್ತರಿಸುವಷ್ಟರಲ್ಲೇ ಅವರು ನಾಲಿಗೆ ಕಡಿದು, ''ಏನು ಹೇಳಿಬಿಟ್ಟೆ!'' ಎಂದರು.

ಸಣ್ಣತ್ತೆಯ ಬಳಿ ಕೆಲವು ಆಭರಣಗಳಿದ್ದವು. ಅವುಗಳನ್ನು ಸುರಕ್ಷಿತವಾಗಿ ತನ್ನ ಬಳಿ ಇಟ್ಟುಕೊಳ್ಳುತ್ತೇನೆಂದು ಹೇಳಿ ಅವಳ ತಂದೆ ಅವಳನ್ನು ಮರಳು ಮಾಡಿ ಆಭರಣಗಳನ್ನೆಲ್ಲ ತೆಗೆದುಕೊಂಡು ಹೋಗಿದ್ದ. ಆ ಬಳಿಕ ಆಕೆ ಅದನ್ನು ಕೇಳಿದರೂ ಆತ ಕೊಡಲಿಲ್ಲ. ಸ್ನೇಹಿತ ಲಲಿತನು ಜಯರಾಮಬಾಟಿಗೆ ಬಂದು ಆಭರಣಗಳನ್ನು ಬಿಡಿಸಿ ತರಬೇಕೆಂದು ಶ್ರೀಮಾತೆ ಅವನನ್ನು ಮಾಝೂಟಿಯಾ ಗ್ರಾಮಕ್ಕೆ ಕಳುಹಿಸಿದರು. ಬ್ರಾಹ್ಮಣ (ಸಣ್ಣತ್ತೆಯ ತಂದೆ) ಲಲಿತನನ್ನೂ ಇನ್ಸ್‌ಪೆಕ್ಟರ್ ಎಂದೇ ತಿಳಿದು ಭಯದಿಂದ ನಡುಗತೊಡಗಿದ. ಲಲಿತ ಅವನನ್ನು ಆಭರಣಗಳ ಸಮೇತ ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಬಂದು, ಮಗಳಿಗೆ ಪ್ರತಿಯೊಂದೂ ಆಭರಣವನ್ನು ಹಿಂದಿರುಗಿಸುವಂತೆ ಹೆದರಿಸಿ, ಎಲ್ಲವನ್ನೂ ಮರಳಿ ಕೊಡಿಸಿದ.

೧೯೦೩ರಲ್ಲಿ[೨] ನಾನು ಜಯರಾಮಬಾಟಿಯಲ್ಲಿದ್ದಾಗ, ಶರತ್ ಮಹಾರಾಜರಿಂದ ಒಂದು ಪತ್ರವನ್ನು ಪಡೆದೆ. 'ಗಿರೀಶಚಂದ್ರನಿಗೆ ದುರ್ಗಾಪೂಜೆ ಮಾಡುವ ಇಚ್ಛೆಯಿದೆ; ಪೂಜೆಯ ಸಮಯದಲ್ಲಿ ಶ್ರೀಮಾತೆ ಅಲ್ಲಿರಬೇಕೆಂಬುದೇ ಗಿರೀಶನ ಹಾಗೂ ಅವನ ಅಕ್ಕನ (ಅವಳ ಹೆಸರು ದಕ್ಷಿಣಾ) ಬಯಕೆ; ಒಂದು ವೇಳೆ ಶ್ರೀಮಾತೆ ಅಲ್ಲಿಗೆ ಬರದಿದ್ದರೆ ಅವರ ಪೂಜೆ ನಿರರ್ಥಕವಾಗುವುದು' ಎಂದು ಪತ್ರದಲ್ಲಿ ಬರೆದಿತ್ತು. ಅಲ್ಲದೆ ಶ್ರೀಮಾತೆಯವರನ್ನು ಕರೆದುಕೊಂಡು ಹೋಗಲು ಅವನು ಸಾಧ್ಯವಾದ ಎಲ್ಲ ಯತ್ನವನ್ನೂ ಮಾಡುವನು, ಹಾಗೂ ಶ್ರೀಮಾತೆ ಅಲ್ಲಿಗೆ ಹೋಗುವುದು ನಿಶ್ಚಯವೆಂದರೆ ಅವರ ಎಲ್ಲ

೨ ಸ್ವಾಮಿ ಗಂಭೀರಾನಂದರು ಬರೆದ **Holy Mother Sri Sarada Devi** ಗ್ರಂಥದ ಪ್ರಕಾರ ಇದು ೧೯೦೭ರಲ್ಲಿ. *(-ಅನು.)*

ಖರ್ಚಿನ ಹಣವನ್ನು ಅಲ್ಲಿಂದ ಕಳುಹಿಸುವರು ಎಂದೂ ತಿಳಿಸಲಾಗಿತ್ತು. ಆಗ ಶ್ರೀಮಾತೆಯವರ ಆರೋಗ್ಯ ಅತ್ಯಂತ ಕೆಟ್ಟು ಹೋಗಿತ್ತು; ಹಾಗಿದ್ದರೂ ಅಲ್ಲಿಗೆ ಹೋಗಲು ಅವರು ಒಪ್ಪಿಗೆ ನೀಡಿದರು. ಸಣ್ಣತ್ತೆ ಹಾಗೂ ರಾಧು ಅವರೊಂದಿಗೆ ಹೊರಟರು.

ಸರಿಯಾದ ಸಮಯಕ್ಕೆ ವಿಷ್ಣುಪುರ ತಲುಪಿದಾಗ ಅಲ್ಲಿ ಒಂದು ಹೋಟೇಲಿನಲ್ಲಿ ಮಾಸ್ಟರ್ ಮಹಾಶಯ ಹಾಗೂ ಲಲಿತನನ್ನು ಅನಿರೀಕ್ಷಿತವಾಗಿ ಭೇಟಿಯಾದೆವು. ಅವರು ಎಲ್ಲರಿಗಾಗಿ ಅಲ್ಲಿ ಆಹಾರ ಮೊದಲಾದ ವ್ಯವಸ್ಥೆ ಮಾಡಿದ್ದರು. ಕಲ್ಕತ್ತೆಯಲ್ಲಿ ದಂಗೆಯೆದ್ದಿದೆ ಹಾಗೂ ರಾತ್ರಿ ಹೊತ್ತು ಕತ್ತಲೆಯಾಗಿರುತ್ತದೆ - ಎಂದು ಅವರು ತಿಳಿಸಿದರು. ಆದ್ದರಿಂದ ಅವರು ಮೊದಲೇ ಹೊರಟು ಬಂದಿದ್ದರು.

ಸಾಯಂಕಾಲ ನಾವು ಹೌರಾ ಸ್ಟೇಶನ್ ತಲುಪಿದೆವು. ಗಣೇಂದ್ರನಾಥ ಹಾಗೂ ಲಲಿತನ ಕುದುರೆಗಾಡಿಗಳು ಕಂಡುಬಂದವು. ಶರತ್ ಮಹಾರಾಜ್ ಹಾಗೂ ಗಿರೀಶಚಂದ್ರನ ಅಭಿಪ್ರಾಯವೇನೆಂದರೆ, ಹೌರಾದಿಂದ ಶ್ರೀಮಾತೆಯವರನ್ನು ದೋಣಿಯ ಮೂಲಕ ನೇರ ಬಾಗ್‌ಬಜಾರಿನ ಘಾಟ್‌ಗೆ ಕರೆದುಕೊಂಡು ಹೋಗುವುದು. ಇದರಿಂದ ಯಾವುದೇ ಭಯ, ಆತಂಕಗಳಿಲ್ಲ ಎಂದು ಗಣೇಂದ್ರನಾಥ ಹೇಳಿದ. ಆದರೆ ಶ್ರೀಮಾತೆಯವರಿಗೆ ದೋಣಿಯನ್ನೇರಲು ಭಯವಾಗುತ್ತಿತ್ತು. ಆದ ಕಾರಣ ಲಲಿತನ ಕಂಪಾಸ್ ಗಾಡಿಯಲ್ಲಿ ಒಳಗೆ ಶ್ರೀಮಾತೆ ಮೊದಲಾದವರನ್ನು ಕುಳ್ಳಿರಿಸಿ, ಒಂದು ಕಡೆಯ ಮೆಟ್ಟಿಲಲ್ಲಿ ನಾನು, ಇನ್ನೊಂದರಲ್ಲಿ ಲಲಿತ ಕುಳಿತೆವು. ಕೋಚ್‌ಬಾಕ್ಸಿನಲ್ಲಿ ಗಣೇಂದ್ರನಾಥ ಹಾಗೂ ಸಾಮಾನುಗಳೊಂದಿಗೆ ಮಾಸ್ಟರ್ ಮಹಾಶಯ ಕುಳಿತರು. ಗಂಗಾತೀರದ ಮೂಲಕ ಕುಮಾರಟುಲಿ ಘಾಟಿನ ಕಡೆಗೆ ಗಾಡಿ ಹೊರಟಿತು. ನಂತರ ಕುಮಾರಟುಲಿಯ ಮಧ್ಯಭಾಗವನ್ನು ಹಾದು, ರಾಜವಲ್ಲಭಪಾರಾ ಮೂಲಕ ಬಲರಾಮ ಬಾಬುವಿನ ಮನೆಗೆ ಹೋದೆವು. ಅಲ್ಲಿ ಶ್ರೀಮಾತೆಯವರಿಗೆ ತಂಗಲು ವ್ಯವಸ್ಥೆಯಾಗಿತ್ತು. ದಾರಿಯ ನಡುವೆ ಎಲ್ಲೂ ಗದ್ದಲ ಉಂಟಾಗಲಿಲ್ಲ. ಒಂದು ಬಾರಿ ಮಾತ್ರ ಹುಡುಗರ ಗುಂಪು ಬಂದು, ಸ್ತ್ರೀಯರನ್ನು ನೋಡಿ ಬಿಟ್ಟುಬಿಟ್ಟರು.

ಮರುದಿನ ಬೆಳಗಿನ ಹೊತ್ತು ಗಿರೀಶಚಂದ್ರ ಹಾಗೂ ಅವನ ಅಕ್ಕ ಬಂದು ಶ್ರೀಮಾತೆಗೆ ಪ್ರಣಾಮ ಮಾಡಿ, ಆಮಂತ್ರಣ ನೀಡಿದರು. ಅವನ ಅಕ್ಕ ಹೇಳಿದಳು, ''ಗಿರೀಶನಂತೂ ಸುಮ್ಮನೆ ಕುಳಿತು ಬಿಟ್ಟಿದ್ದನಮ್ಮಾ. 'ಶ್ರೀಮಾತೆ ಬಾರದಿದ್ದರೆ ಯಾರನ್ನು ಕರೆದು ಪೂಜೆ ಮಾಡಲಿ? ಪೂಜೆ ಮಾಡಲಾರೆ' ಎನ್ನುತ್ತಿದ್ದ.''

ಇನ್ನೂ ಪೂಜೆಗೆ ಸಾಕಷ್ಟು ಸಮಯವಿತ್ತು. ಶ್ರೀಮಾತೆಯವರನ್ನು ಕರೆದುಕೊಂಡು ಬಂದ ಮೇಲೆ ಮತ್ತೆ ನಾನು ಜ್ವರ ಹಿಡಿದು ಮಲಗಿದೆ. ಸುಪ್ರಸಿದ್ಧ ಡಾಕ್ಟರ್ ವಿಪಿನವಿಹಾರಿ ಘೋಷ್ ಬಂದು ಪರೀಕ್ಷೆ ಮಾಡಿ ಔಷಧಿ ಹಾಗೂ ಸಬ್ಬಕ್ಕಿ ಗಂಜಿ ತೆಗೆದುಕೊಳ್ಳಲು ವ್ಯವಸ್ಥೆ ಮಾಡಿದರು. ಶರತ್ ಮಹಾರಾಜರು ಡಾಕ್ಟರರ ಆದೇಶದಂತೆ ಎಲ್ಲವನ್ನೂ ಅಕ್ಷರಶಃ ಪಾಲಿಸಲು ಹೊರಟಿದ್ದರು. ಆದರೆ ನನಗೆ ಸಬ್ಬಕ್ಕಿ ಗಂಜಿ ಸೇವಿಸುವುದು ಸಾಧ್ಯವಾಗಲಿಲ್ಲ, ಅದು ಶ್ರೀಮಾತೆಗೆ ಮಾತ್ರ ಗೊತ್ತಿತ್ತು. ಆದರೆ ಅವರು ಮನೆಯೊಳಗೇ ಇರುತ್ತಿದ್ದರು– ಬೇರೆಯವರ ಮನೆಯಲ್ಲವೆ? ಯಾವಾಗ ಬೇಕೆಂದಾಗ ತಾವೇ ಬಂದು ನೋಡುವುದು ಸಾಧ್ಯವಿರಲಿಲ್ಲ. ಹಜಾರದ ಒಂದು ಮೂಲೆಯಲ್ಲಿ ನಾನು ಸುಮ್ಮನೆ ಮಲಗಿದ್ದೆ. ಇನ್ನೊಂದು ಬದಿಯಲ್ಲಿ ಶರತ್ ಮಹಾರಾಜರಿದ್ದರು.

ಸುಮಾರು ಒಂಬತ್ತು ಗಂಟೆಯ ಹೊತ್ತಿಗೆ ಶರತ್ ಮಹಾರಾಜರು ಅನ್ಯಮನಸ್ಕರಾಗಿದ್ದಾಗ, ಹೊರಗಿನಿಂದ ರಾಧು ಸನ್ನೆ ಮಾಡಿ ಕರೆದು, ಒಂದಿಷ್ಟು ಹಣ್ಣುಹಂಪಲು, ಸಿಹಿತಿಂಡಿ ಇವನ್ನು ನನ್ನ ಕೈಗೆ ಕೊಟ್ಟು, ''ಶ್ರೀಮಾತೆ ಕೊಟ್ಟರು'' ಎಂದಳು. ನಾನು ಸದ್ದಿಲ್ಲದೆ ಅವುಗಳನ್ನು ತಿಂದು ಮಲಗಿದೆ. ಇದೇ ರೀತಿ ಶ್ರೀಮಾತೆ ಮಧ್ಯಾಹ್ನ ಚಪಾತಿ, ಸಿಹಿತಿಂಡಿ; ಸಂಜೆ ಚಪಾತಿ ಹಾಗೂ ತರಕಾರಿ ಇವನ್ನು ಕಳುಹಿಸಿಕೊಟ್ಟರು. ಇತ್ತ ಮನೆಯಿಂದ ಸಬ್ಬಕ್ಕಿ ಗಂಜಿ ಬರುತ್ತಿತ್ತು. ಅದನ್ನು ಚೆಲ್ಲಿ, ತರಕಾರಿ ತುಂಬಿದ್ದ ತಟ್ಟೆಯ ಮೇಲೆ ಗಂಜಿಯ ಪಾತ್ರೆಯನ್ನು ಇಟ್ಟು ಬಿಡುತ್ತಿದ್ದೆ — ಶರತ್ ಮಹಾರಾಜರಿಗೆ ಹೆದರಿ. ಹೀಗೆ ಶ್ರೀಮಾತೆ ನನಗೆ ಗುಟ್ಟಾಗಿ ತಿನ್ನಿಸಿ ಆರೋಗ್ಯ ಉತ್ತಮವಾಗುವಂತೆ ಮಾಡಿದರು.

ಗಿರೀಶಚಂದ್ರನ ದುರ್ಗಾಪೂಜೆ ವಿಜೃಂಭಣೆಯಿಂದ ಆರಂಭವಾಯಿತು. ಶ್ರೀಮಾತೆಯವರ ಸಾನ್ನಿಧ್ಯದೊಂದಿಗೆ 'ಕಲ್ಪಾರಂಭ' [೩] ನಡೆಯಿತು. ಗಿರೀಶಚಂದ್ರ ಹಾಗೂ ಅವನ ಅಕ್ಕನಿಗೆ ಹಿಡಿಸಲಾರದ ಆನಂದ. ಗಿರೀಶಚಂದ್ರ, ''ನೀನು ಶ್ರೀಮಾತೆಯವರನ್ನು ಕರೆದುಕೊಂಡು ಬಂದು, ನಮ್ಮನ್ನು ಖರೀದಿ ಮಾಡಿಬಿಟ್ಟೆ'' ಎಂದು ನನಗೆ ಹೇಳಿದ. ಅವನ ಅಕ್ಕ ಹಿಂದಿನ ವರ್ಷಗಳಂತೆ ಈ ವರ್ಷವೂ ನನಗೆ ಹೊಸ ಬಟ್ಟೆ ನೀಡಿದಳು.

ಮಹಾಸಪ್ತಮಿಯ ದಿನ ಪ್ರಾತಃಕಾಲದಿಂದಲೇ ಬಲರಾಮ ಬಾಬುವಿನ ಮನೆಯಲ್ಲಿ ಭಕ್ತ ಜನರು ಬಂದು ಸೇರಿದರು. ಶ್ರೀಮಾತೆಯವರ ಬಳಿಗೆ ಇಷ್ಟೊಂದು ಸಂಖ್ಯೆಯಲ್ಲಿ ಭಕ್ತರು ಬಂದು ಸೇರಿದ್ದನ್ನು ನಾನು ಹಿಂದೆಂದೂ ಕಂಡಿರಲಿಲ್ಲ. ಜನರಾದ ಮೇಲೆ ಜನರು, ಗುಂಪಾದ ಮೇಲೆ ಗುಂಪು ಬರುತ್ತಿತ್ತು; ಕೆಲವರು ಶ್ರೀಮಾತೆಗೆ ಪ್ರಣಾಮ ಮಾಡುವರು, ಕೆಲವರು ಪುಷ್ಪಾಂಜಲಿ ಅರ್ಪಿಸುವರು. ಶ್ರೀಮಾತೆ ಗಂಟೆಗಟ್ಟಲೆ ನಿಂತಲ್ಲೇ ನಿಂತು ಭಕ್ತರ ಪ್ರಣಾಮ, ಪೂಜೆ ಇವನ್ನೆಲ್ಲ ಸ್ವೀಕರಿಸುತ್ತಿದ್ದರು. ಇದೊಂದು ಅಭೂತಪೂರ್ವ ದೃಶ್ಯ. ಸಪ್ತಮೀ ಪೂಜೆ ನಡೆಯುವುದಾಗಿ ಸುದ್ದಿ ಬಂದಾಗ ಶ್ರೀಮಾತೆ ಗಿರೀಶನ ಮನೆಗೆ ತೆರಳಿ, ಪೂಜೆ ಮುಕ್ತಾಯವಾಗುವವರೆಗೂ ಅಲ್ಲಿಯೇ ಉಳಿದರು. ಅಲ್ಲೂ ಅವರಿಗೆ ವಿಶ್ರಾಂತಿಯಿಲ್ಲ. ಭಕ್ತರು ಪೂಜೆಯ ನಂತರ ಪೂಜೆ ಮಾಡಿದರು. ಒಂದೇ ಪೂಜೆಯ ವೇದಿಕೆಯಲ್ಲಿ – ಒಂದೆಡೆ ಪ್ರತಿಮೆಯ ಪಾದಗಳಲ್ಲಿ ಪತ್ರಪುಷ್ಪಗಳ ರಾಶಿ; ಇನ್ನೊಂದೆಡೆ ಜೀವಂತಮೂರ್ತಿಯಾದ ಶ್ರೀಮಾತೆಯವರ ಚರಣತಲದಲ್ಲಿ ಭಕ್ತರ ಭಕ್ತಿ–ಅರ್ಘ್ಯ–ಚಿಹ್ನೆಯ ಸ್ವರೂಪದಲ್ಲಿ ಬಿಲ್ವದಳ, ತುಳಸೀದಳ, ಚಂದನ ಚರ್ಚಿತವಾದ ತಾವರೆ, ದಾಸವಾಳವೇ ಮೊದಲಾದ ನಾನಾ ಬಗೆಯ ಪುಷ್ಪರಾಶಿ! ಅದೊಂದು ಊಹಿಸಲಾಗದ ಅಪೂರ್ವ ಶೋಭೆ! *(ಮುಂದುವರಿಯುವುದು)*

---

[೩] ಪಶ್ಚಿಮ ಬಂಗಾಳದಲ್ಲಿ ದುರ್ಗಾಪೂಜೆಯ ಆರಂಭವಾಗುವ ಆಚರಣೆಗೆ 'ಕಲ್ಪಾರಂಭ' ಎನ್ನುತ್ತಾರೆ. ಒಂದು ಯುಗದ ಆರಂಭ ಎಂದು ಅಕ್ಷರಾರ್ಥ. *(–ಅನು.)*



ಸೋಲುಗಳೇ ಜೀವನದ ಸೊಬಗು

ವಿರಾಜ, ಮಂಗಲಗಿ

ಜೀವನದಲ್ಲಿ ಎಲ್ಲರೂ ಗೆಲುವನ್ನೇ ಬಯಸುತ್ತಾರೆ, ಆದರೆ ಸೋಲುಗಳೇ ಪ್ರತಿಯೊಂದು ಗೆಲುವನ್ನು ತಂದುಕೊಡುವಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ ಎಂಬ ಸತ್ಯವನ್ನು ಎಲ್ಲರೂ ಮರೆಯುತ್ತಾರೆ. ಈ ಪ್ರೇರಣಾತ್ಮಕ ಅಂಶದ ಕಡೆಗೆ ಬೆಳಕು ಚೆಲ್ಲುವ ಲೇಖಕರು ಗುಲ್ಬರ್ಗಾ ನಿವಾಸಿಗಳು. ರಾಮಕೃಷ್ಣ ಆಶ್ರಮದ ಭಕ್ತರೂ ಆಗಿರುವ ಅವರು ಹಲವು ಬಗೆಯ ಸೇವಾಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

‘‘**ಸೋ**ಲುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ: ಜೀವನದಲ್ಲಿ ಸೋಲು ಸಂಭವಿಸುವುದು ತೀರ ಸಹಜ. ಅಷ್ಟೇ ಅಲ್ಲ, ಸೋಲುಗಳೇ ಜೀವನದ ಸೊಬಗು! ಸೋಲೇ ಇಲ್ಲದ ಜೀವನ ಅದೆಂಥ ಜೀವನ! ಹೋರಾಟವೇ ಇಲ್ಲದೆ ಸಾಗುವ ಬದುಕಿನಲ್ಲಿ ಸ್ವಾರಸ್ಯವೇನಿದೆ? ಹೋರಾಟವಿಲ್ಲದಿದ್ದರೆ ಜೀವನದಲ್ಲಿ ಕಾವ್ಯರಸವೇ ಇರಲಾರದು. ಆದ್ದರಿಂದ ಹೋರಾಟದ ವೇಳೆಯಲ್ಲಿ ಆಗುವ ತಪ್ಪುಗಳನ್ನು ಮನಸ್ಸಿಗೆ ಹಚ್ಚಿಕೊಂಡು ಕೊರಗುತ್ತ ಕುಳಿತಿರಬೇಡಿ’’ — ಇವು ಸ್ವಾಮಿ ವಿವೇಕಾನಂದರ ಧೀರೋದಾತ್ತ ನುಡಿಗಳು.

ಪ್ರತಿಯೊಬ್ಬ ವ್ಯಕ್ತಿಯು ಜೀವನದಲ್ಲಿ ಆದರ್ಶ ಸಾಧನೆಗೆ ಹೊರಟಾಗ ಸೋಲು ಸಂಭವಿಸುವುದು ತೀರ ಸಹಜ. ಆದರೆ ಪ್ರತಿ ಸಲ ಸೋತಾಗಲೂ ದೃಢವಾದ ಮನಸ್ಸಿನಿಂದ ಪ್ರಯತ್ನದಲ್ಲಿ ತೊಡಗಿದಾಗ ಮಾತ್ರ ಗೆಲವು ಖಚಿತ. ಪ್ರತಿಯೊಬ್ಬ ವ್ಯಕ್ತಿಯೂ ಹಲವು ಸೋಲುಗಳನ್ನು ದಾಟಿಯೇ ಯಶಸ್ಸಿನ ಶಿಖರವನ್ನು ಏರುತ್ತಾನೆ. ಜೀವನದಲ್ಲಿ ಯಾವತ್ತೂ ಸೋತೇ ಇಲ್ಲ ಎನ್ನುವ ವ್ಯಕ್ತಿಯೇ ಇಲ್ಲ. ವ್ಯಕ್ತಿ ಸೋತಿಲ್ಲ ಎಂದರೆ ಅವನು ಮುಂದುವರಿಯುತ್ತಿಲ್ಲ ಎಂದರ್ಥ. ‘ನಡೆಯುವವನು ಎಡುವುತ್ತಾನೆಯೇ ಹೊರತು ಕುಳಿತಿರುವವನಲ್ಲ.’ ನೆಲದ ಮೇಲೆ ಬಿದ್ದಾಗ ನೆಲವನ್ನೇ ಆಧರಿಸಿ ಮೇಲೇರಿ ನಿಂತಂತೆ, ಪ್ರತಿಬಾರಿ ಸೋತಾಗಲೂ ಆ ಸೋಲಿನಿಂದಲೇ ಪಾಠವನ್ನು ಕಲಿತು ಗೆಲುವಿನೆಡೆಗೆ ಸಾಗಬೇಕು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ‘‘Hold the Ideal thousand times, if you fail try it once more.’’ ಅಂದರೆ ನಿಮ್ಮ ಆದರ್ಶ ಸದಾ ಕಣ್ಮುಂದಿರಲಿ. ಪ್ರಯತ್ನ ಸಾಗುತ್ತಿರಲಿ! ನಡುನಡುವೆ ಎಡವಿ ದರೂ ಪಟ್ಟುಬಿಡದೆ ಸಾವಿರ ಸಲ ಯತ್ನಿಸಿ. ಆ ಸಾವಿರ ಸಲ ಸೋತರೆ ಮತ್ತೊಮ್ಮೆ ಪ್ರಯತ್ನಿಸಿ. ಆದ್ದರಿಂದಲೇ ‘ಸೋಲು ಗೆಲುವಿನ ಮೆಟ್ಟಿಲು’ ಎನ್ನುತ್ತಾರೆ.

ಸೋಲು ಸಂಭವಿಸಿದಾಗ ಸೋಲನ್ನು ಒಪ್ಪಿಕೊಳ್ಳದೆ ಮತ್ತೆ ಪ್ರಯತ್ನಪಡುವುದೊಂದು ಶ್ರೇಷ್ಠವಾದ ಗುಣ. ಸೋಲಿಗೆ ತಲೆಬಾಗದ ಗುಣ ಪ್ರತಿಯೊಬ್ಬರಲ್ಲೂ ಇದೆ. ಸೋಲು, ವೈಫಲ್ಯ, ನೋವುಗಳನ್ನು ವ್ಯಕ್ತಿ ಎಷ್ಟೆಂದರೂ ಹೃತ್ಪೂರ್ವಕವಾಗಿ ಸ್ವೀಕರಿಸಲಾರ. ಅಂತಹ ಸಂದರ್ಭಗಳಲ್ಲಿ ಅವನ ಮನಸ್ಸು ದಂಗೆಯೇಳುತ್ತದೆ. ಸಕಾರಾತ್ಮಕ ದೃಷ್ಟಿಯಿಂದ ಕೂಡಿದ ವ್ಯಕ್ತಿ ಆ ಸಂದರ್ಭವನ್ನು ಒಂದು ಸವಾಲಾಗಿ ಸ್ವೀಕರಿಸಿ, ಮತ್ತೊಮ್ಮೆ ಪ್ರಯತ್ನಪಡುತ್ತಾನೆ. ಆದರೆ ನಕಾರಾತ್ಮಕ ವ್ಯಕ್ತಿ ಸೋಲಿನಿಂದ ಹಿಂಜರಿದು, ಪ್ರಯತ್ನವನ್ನು ಮುಂದುವರೆಸದೆ ನಿಂತ ನೀರಾಗುತ್ತಾನೆ.

ಸೋಲಿಗೆ ಕಾರಣ ನಮ್ಮ ಲೋಪದೋಷಗಳೇ ಹೊರತು ಯಾವ ಬಾಹ್ಯ ವ್ಯಕ್ತಿ-ಸನ್ನಿವೇಶಗಳಲ್ಲ. ಸೋಲು ಎಂದು ಹೇಳಿ

ದಾಗ ನಮ್ಮೊಳಗಿರುವ ಅನಂತ ಶಕ್ತಿ, ಅನಂತ ಜ್ಞಾನವನ್ನು ವ್ಯಕ್ತಪಡಿಸಲು ನಾವು ಸರಿಯಾದ ಪ್ರಯತ್ನವನ್ನು ಮಾಡಿಲ್ಲ ಎಂದರ್ಥ. ಆದ್ದರಿಂದ ಸೋಲಿನಿಂದ ಧೃತಿಗೆಡದೆ, ಸೋಲಿನ ಕಾರಣವನ್ನು ಕಂಡುಹಿಡಿದು ಪ್ರಾಮಾಣಿಕ ಪ್ರಯತ್ನವನ್ನು ಮುಂದುವರಿಸಬೇಕು. ನಾವು ಯಾವುದೇ ಕಾರ್ಯಸಾಧನೆಯಲ್ಲಿ ವಿಫಲರಾದಾಗ, ಹತಾಶರಾಗದೆ ವಾಸ್ತವ ದೃಷ್ಟಿಯಿಂದ ಆ ವಿಫಲತೆಗೆ ಕಾರಣವೇನು ಎಂಬುದನ್ನು ತಿಳಿಯಲು ಪ್ರಯತ್ನಿಸಬೇಕು. ಆಗ ನಾವು ಸೋಲಿನಿಂದಲೇ ಅನೇಕ ಪಾಠಗಳನ್ನು ಕಲಿಯುತ್ತೇವೆ.

''ಜಗತ್ತಿನ ಇತಿಹಾಸವನ್ನು ಅವಲೋಕಿಸಿದಾಗ ಮಹಾನ್ ವ್ಯಕ್ತಿಗಳ ಜೀವನವನ್ನು ರೂಪಿಸುವಲ್ಲಿ ಗೆಲುವಿಗಿಂತ ಸೋಲುಗಳು, ಸುಖಕ್ಕಿಂತ ದುಃಖವೇ ಹೆಚ್ಚಾದ ಶಿಕ್ಷಣವನ್ನು ಕೊಟ್ಟು ಬುದ್ಧಿ ಕಲಿಸಿತೆಂದೂ, ಐಶ್ವರ್ಯಕ್ಕಿಂತ ದಾರಿದ್ರ್ಯವೇ ಅಧಿಕವಾಗಿ ಹಾಗೂ ಮನುಷ್ಯನಲ್ಲಿ ಅಡಗಿರುವ ಅಪಾರವಾದ ಶಕ್ತಿಯನ್ನು ಹೊರಗೆಡಹಿದುದು ಹೊಗಳಿಕೆ ಅಲ್ಲ, ಪೆಟ್ಟುಗಳು ಎಂದು ನಾನು ಧೈರ್ಯವಾಗಿ ಹೇಳುತ್ತೇನೆ'' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ಹೀಗೆ ಸೋಲು ಗೆಲುವಿನ ಮೆಟ್ಟಿಲಾಗುತ್ತದೆ. ನಾವು ನೆನಪಿಡಬೇಕು, ಯಾವ ಸೋಲೂ ಶಾಶ್ವತವಾದುದಲ್ಲ. ಪ್ರತಿಯೊಂದು ಸೋಲೂ ನಮಗೊಂದು ಪಾಠವನ್ನು ಕಲಿಸಿಕೊಟ್ಟು ಉನ್ನತಿಯೆಡೆಗೆ ಕರೆದೊಯ್ಯುತ್ತದೆ. ಅದೇ ರೀತಿ ಯಾವ ಗೆಲುವೂ ಶಾಶ್ವತವಲ್ಲ, ನಮ್ಮೊಬ್ಬರಿಗೆ ಮೀಸಲೂ ಅಲ್ಲ. ಆದ್ದರಿಂದ ನಾವು ಒಂದು ಸನ್ನಿವೇಶವನ್ನು ಸೋಲು-ಗೆಲುವಿನ ದೃಷ್ಟಿಯಿಂದ ನೋಡದೆ ಯಥಾರ್ಥ ದೃಷ್ಟಿಯಿಂದ ನೋಡುವುದನ್ನು ಕಲಿಯುವುದಾದರೆ ಚಾರಿತ್ರ್ಯನಿರ್ಮಾಣದ ಹಾದಿಯಲ್ಲಿ ಬಹುದೊಡ್ಡ ಹೆಜ್ಜೆಯನ್ನು ಇಟ್ಟಂತಾಗುತ್ತದೆ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''ಒಂದು ಹಸು ಎಂದಿಗೂ ಸುಳ್ಳು ಹೇಳುವುದಿಲ್ಲ. ಒಂದು ಗೋಡೆ ಎಂದಿಗೂ ಸುಳ್ಳು ಹೇಳುವುದಿಲ್ಲ. ಆದರೆ ಅದು ಯಾವಾಗಲೂ ಒಂದು ಹಸು, ಒಂದು ಗೋಡೆಯಾಗಿಯೇ ಉಳಿಯುತ್ತದೆ. ಆದರೆ ಮನುಷ್ಯ ಸುಳ್ಳು ಹೇಳಬಹುದು, ಮೋಸಮಾಡಬಹುದು. ತನ್ನನ್ನು ತಾನು ತಿದ್ದಿಕೊಳ್ಳುವುದರ ಮೂಲಕ ಮಹಾಮಹಿಮನಾಗುತ್ತಾನೆ.'' ಆದ್ದರಿಂದ ಮಾನವ ಸಾಧಿಸಬಹುದಾದ್ದನ್ನು ಬೇರಾವ ಜೀವಿಯೂ ಸಾಧಿಸಲಾರದು. ಇಂತಹ ಅಮೂಲ್ಯ ಸಾಧ್ಯತೆಯನ್ನು ಹೊಂದಿದ ಮನುಷ್ಯ ಸೋಲಿನಿಂದ ಎದೆಗೆಟ್ಟು ಮುಂದುವರಿಯುವುದನ್ನು ನಿಲ್ಲಿಸಿದರೆ ಅದೆಂತಹ ದೊಡ್ಡ ಹಾನಿಯಾಗುತ್ತದೆ!


ಸೋಲಿನ ಹಾದಿಯನ್ನೇ ನಡೆದು ಗೆಲುವನ್ನು ಕಂಡವರ ಉದಾಹರಣೆ ಅಸಂಖ್ಯ. ೧೮೩೧ ರಿಂದ ೧೮೬೦ರ ವರೆಗೆ ನಿರಂತರವಾಗಿ ೧೬ ಬಾರಿ ಸೋತು ಅಮೇರಿಕಾದ ಅಧ್ಯಕ್ಷರಾಗಿದ್ದ ಮಹಾನ್ ವ್ಯಕ್ತಿ ಅಬ್ರಾಹಂ ಲಿಂಕನ್; ಸೋಲುಗಳನ್ನೇ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಹಬೆಯಂತ್ರವನ್ನು (Steam Engine) ಕಂಡುಹಿಡಿದ ಜೇಮ್ಸ್ ವ್ಯಾಟ್; ಅನೇಕ ಬಾರಿ ಮೌಂಟ್ ಎವರೆಸ್ಟ್ ಶಿಖರವನ್ನು ಹತ್ತುವಾಗ ವಿಫಲವಾಗಿ, ಕೊನೆಗೆ ಯಶಸ್ಸನ್ನು ಕಂಡ ತೇನ್‌ಸಿಂಗ್; ಸೋಲಿನಿಂದ ಧೃತಿಗೆಡದೆ ಅತಿ ಕಿರಿಯ ವಯಸ್ಸಿನಲ್ಲಿ ಜಗತ್ತಿನ ಆರೂ ಖಂಡಗಳಲ್ಲಿನ ಅತಿ ಎತ್ತರದ ಶಿಖರಗಳನ್ನು ಏರಿದ ಕೆನ್ ನೊಗುಚಿ; ಅಂಗವಿಕಲರಾದರೂ ಸೋಲಿನ ಅಂಗಳದಿಂದ ಯಶಸ್ಸಿನ ಬಾನಿಗೆ ಜಿಗಿದ ಬೀಥೋವನ್; ಸಾವಿರ ಬಾರಿ ಸೋತು ವಿದ್ಯುತ್ ದೀಪವನ್ನು ಕಂಡುಹಿಡಿದ ಥಾಮಸ್ ಅಲ್ವಾ ಎಡಿಸನ್ – ಹೀಗೆ ಜಗತ್ತಿನಲ್ಲಿ ಸೋಲಿಗೆ ಹೆದರಿದ್ದರೆ ಇವರು ಮತ್ತು ಇವರಂತೆ ನೂರಾರು ಜನರು ಹೊಸದನ್ನು ಕೊಡಲು ಮತ್ತು ಅಸಾಮಾನ್ಯರಾಗಲು ಸಾಧ್ಯವಾಗುತ್ತಿರಲಿಲ್ಲ. ಮಹತ್ತರವಾದುದನ್ನು ಸಾಧಿಸಲು ಹೊರಟಾಗ ಸೋಲು ಸಂಭವಿಸುವುದು ತೀರ ಸಹಜ. ಆದರೆ ಅದು ಶಾಶ್ವತವಾದ ಸೋಲಲ್ಲ. ಆ ಪ್ರತಿಯೊಂದು ಸೋಲಿನ ಮೂಲಕವೇ ನಾವು ಒಂದೊಂದು ಗೆಲುವಿನ ಮೆಟ್ಟಿಲನ್ನು ಹತ್ತುತ್ತೇವೆ. ಥಾಮಸ್ ಅಲ್ವಾ ಎಡಿಸನ್ ಸುಮಾರು ಎರಡು ಸಾವಿರ ಸಾಮಗ್ರಿಗಳನ್ನು ಇಟ್ಟುಕೊಂಡು ವಿದ್ಯುತ್ ಬಲ್ಬ್‌ಗಳಿಗಾಗಿ ಸಂಶೋಧನೆ ನಡೆಸುತ್ತಿದ್ದರು. ಏನೇ ಮಾಡಿದರೂ ಕೆಲಸ ತೃಪ್ತಿಕರವಾಗಿ ಸಾಗುತ್ತಿರಲಿಲ್ಲ. ಅವರ ಸಹಾಯಕ ಸಹನೆ ಕಳೆದುಕೊಂಡು ಹೇಳಿದ: ''ನಮ್ಮ ಎಲ್ಲಾ ಕೆಲಸಗಳೂ ನಿಷ್ಪ್ರಯೋಜಕವಾದವು. ಇದರಿಂದ ನಾವೇನೂ ಕಲಿಯಲಿಲ್ಲ. ಎಲ್ಲವೂ ವ್ಯರ್ಥವಾಯಿತು.'' ಆಗ ಎಡಿಸನ್ ತುಂಬ ಆತ್ಮವಿಶ್ವಾಸದಿಂದ ನುಡಿದರು, ''ಓಹ್! ನಾವು ತುಂಬಾ ದೂರ ಸಾಗಿದ್ದೇವೆ. ಇದರಿಂದ ನಾವು ಸಾಕಷ್ಟು ಕಲಿತಿದ್ದೇವೆ. ಒಳ್ಳೆಯ ಬಲ್ಬ್ ತಯಾರಿಕೆಗೆ ಈ ಎರಡು ಸಾವಿರ ಸಾಮಗ್ರಿಗಳೂ ಪ್ರಯೋಜನಕ್ಕೆ ಬರಲಾರವು ಎಂಬುದನ್ನು ಕಂಡುಕೊಂಡೆವು'' ಎಂಥ ಅದ್ಭುತ ವಾದ ಮಾತು! ಯಾವ ಶ್ರೇಷ್ಠ ವ್ಯಕ್ತಿಯೂ ಸೋಲನ್ನು ಎದುರಿಸದೆ ಮಹತ್ತರವಾದದ್ದೇನನ್ನೂ ಸಾಧಿಸಿಲ್ಲ ಎಂಬುದು ನಮ್ಮ ಆತ್ಮವಿಶ್ವಾಸ ವನ್ನು ಕೆರಳಿಸಬೇಕು. ''ನಮ್ಮ ಶ್ರೇಷ್ಠ ವೈಭವವೆಂದರೆ ವಿಫಲವಾಗದೆ ಇರುವುದಲ್ಲ, ಆದರೆ ಪ್ರತಿಬಾರಿ ವಿಫಲವಾದಾಗಲೂ ಎದ್ದು ಮುನ್ನಡೆಯುವುದು'' ಎಂಬುದು ಒಬ್ಬ ಚಿಂತಕರ ಅಭಿಪ್ರಾಯ. ಕೆಲವರು ವಿಫಲರಾದಾಗ, ಯಾವುದನ್ನೇ ಸಾಧಿಸಲು ತಮಗೆ ಸಾಧ್ಯವಾಗದೆ ಹೋದಾಗ ಅವರಿಗೆ ತಮ್ಮ ಬಗ್ಗೆಯೇ ಕೀಳರಿಮೆ ಉಂಟಾಗಿ ತಮ್ಮನ್ನು ತಾವೇ ದ್ವೇಷಿಸಲು ಪ್ರಾರಂಭಿಸುತ್ತಾರೆ. ಅದು ನಕರಾತ್ಮಕ ಅಹಂಕಾರ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''ಯಾವ ವ್ಯಕ್ತಿಯು ತನ್ನನ್ನು ತಾನೇ ದ್ವೇಷಿಸಲು ಪ್ರಾರಂಭಿಸುತ್ತಾನೋ ಅವನ ಅವನತಿಯ ಬಾಗಿಲು ಆಗಲೇ ತೆರೆದಂತೆ... ನಮ್ಮ ಪ್ರಥಮ ಕರ್ತವ್ಯವೇ ನಮ್ಮನ್ನು ನಾವು ದ್ವೇಷಿಸದಿರುವುದು.''

ನಿಜ, ಸೋಲು ಬರಲಿ ಎಂದು ನಾವು ಕಾಯುವುದು ಬೇಡ. ಉದ್ದೇಶಪೂರ್ವಕ ಎಚ್ಚರಗೇಡಿಗಳಾಗಿ ಪ್ರಯತ್ನವನ್ನು ಬಿಡುವುದು ಬೇಡ. ಗೆಲುವಿನ ಯತ್ನದಲ್ಲಿಯೇ ಸಾಗುವಾಗ ಅನಿವಾರ್ಯವಾಗಿ ಇದಿರಾಗುವ ಸೋಲುಗಳನ್ನು ಸ್ವೀಕರಿಸೋಣ. ಸೋಲು ಗೆಲುವುಗಳು ಜೀವನಚಕ್ರದ ಅನಿವಾರ್ಯ ಮುಖಗಳೆಂದು ಬಗೆದು ನಿರಾಶರಾಗದಿರೋಣ. ನಮಗೆ ಸೋಲು

ಬರಲೇಬಾರದೆಂಬ ಧಾರ್ಷ್ಟ್ಯ ಬೇಡ. ಸೋಲು ಬಂದಾಗ ಕುಸಿದು ಹೋಗುವುದು ಬೇಡ. ಸೋಲುಗಳೇ ಧೀರನಿಗೆ ಭೂಷಣ. ಜೀವನದಲ್ಲಿ ಗೆಲುವನ್ನು ಸಾಧಿಸುವ ಪಾಠವನ್ನು ಕಲಿಯುವ ಹಾಗೆಯೇ, ಸೋಲನ್ನು ದಿಟ್ಟತನ, ನಿರ್ಲಿಪ್ತತೆಯಿಂದ ಎದುರಿಸುವ ಪಾಠವನ್ನು ಕಲಿಯೋಣ. ಸಾಧಕನಿಗೆ ಸೋಲುಗಳು ಅವನ ದುರಹಂಕಾರವನ್ನು ಮುರಿದು ಹಾಕಿ, ಭಗವಂತನಲ್ಲಿ ಶರಣಾಗತಿಯ ಪಾಠವನ್ನು ಕಲಿಸುತ್ತವೆ. ನಮ್ಮ ಸೋಲಿನಿಂದ ನಾವು ಭಗವಂತನಿಗೆ ಹತ್ತಿರವಾಗುವುದಾದರೆ ಸೋಲುಗಳೇ ನಮ್ಮ ಪಾಲಿಗೆ ಬರಲಿ. ನಮ್ಮ ಗೆಲುವಿನಿಂದ ಭಗವದಿಚ್ಛೆ ಈಡೇರುವುದಾದರೆ ಗೆಲುವು ನಮ್ಮದಾಗಲಿ. ಕೊನೆಗೂ ಸೋಲು-ಗೆಲುವುಗಳು ಜಗತ್ತಿನ ದೃಷ್ಟಿಯಿಂದ ಮಾತ್ರ. ಆ ಎರಡರ ಮೂಲಕ ನಾವು ಗಳಿಸಿದ ಚಾರಿತ್ರ್ಯ ಪರಿಪಾಕವೇ ಮುಖ್ಯವಾದದ್ದು. ಐನ್‌ಸ್ಟೈನ್ ಹೇಳುತ್ತಾರೆ: ''ಜೀವನದಲ್ಲಿ ಕೇವಲ ಯಶಸ್ವಿಯಾಗಬೇಕೆಂದು ಬಯಸಬೇಡಿ. ಚಾರಿತ್ರ್ಯವಂತರಾಗಲು ಪ್ರಯತ್ನಿಸಿ.'' ಡಿ.ವಿ.ಜಿ. ಹೇಳುತ್ತಾರೆ:


ಏಸು ಸಲ ತಪವಗೈದೇಸು ಬನ್ನವನಾಂತ ।
ಕೌಶಿಕಂ ಬ್ರಹ್ಮರ್ಷಿಪದಕರ್ಹನಾದನ್ ॥
ಘಾಸಿಪಡುತಿನ್ನೊಮ್ಮೆ ಮತ್ತೊಮ್ಮೆ ಮರಮರಳಿ।
ಲೇಸಾಗಿಸಾತ್ಮವನು — ಮಂಕುತಿಮ್ಮ ॥

ಬಾಬಾ ಆಮ್ಟೆಯವರ ತಾಯಿ ಹೆಚ್ಚು ಓದದಿದ್ದರೂ ಬಹಳ ಬುದ್ಧಿಶಾಲಿಯಾಗಿದ್ದರು. ಯಾವ ವಿಷಯವನ್ನಾದರೂ ಬಹಳ ಪ್ರಭಾವಶಾಲಿ ಕಥೆಗಳ ಮೂಲಕ ಮನಸ್ಸಿಗೆ ನಾಟುವಂತೆ ಬೋಧಿಸುವ ಕಲೆ ಅವರಿಗೆ ಸಿದ್ಧಿಸಿತ್ತು. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಅವರ ಪಾತ್ರ ಪ್ರಮುಖವಾದದ್ದು. ಒಮ್ಮೆ ಅವರು ಬಾಬಾ ಆಮ್ಟೆಗೆ ಒಂದು ಜಪಾನೀ ಬೊಂಬೆಯನ್ನು ಖರೀದಿಸಿ ತಂದುಕೊಟ್ಟರು. ಅದು ಎಷ್ಟು ಸಲ ಬೀಳುತ್ತಿತ್ತೋ ಅಷ್ಟೇ ಸಲ ಎದ್ದು ನಿಲ್ಲುತ್ತಿತ್ತು. ಆ ಬೊಂಬೆಯನ್ನು ಮಗನಿಗೆ ಕೊಡುತ್ತಾ, ''ಮಗು, ಈ ಬೊಂಬೆಯನ್ನು ಬೀಳಿಸುತ್ತಾ ಬೀಳಿಸುತ್ತಾ ನೀನು ಸುಸ್ತಾಗುವೆಯಷ್ಟೆ. ಆದರೆ ಅದು ಪ್ರತಿ ಸಲ ಬಿದ್ದಾಗಲೂ ಎದ್ದು ನಿಲ್ಲುತ್ತದೆ'' ಎಂದರು. ''ಇದೇ ರೀತಿ ನೀನೂ ಸಹ ಜೀವನದಲ್ಲಿ ಅನೇಕ ಸಲ ಬೀಳಬಹುದು. ಯಾವಾಗಲೂ ಸಫಲತೆ ದೊರೆಯದು. ಆದರೆ ನಿಜವಾದ ಘನತೆ ಇರುವುದು ಬಿದ್ದನಂತರ ತಕ್ಷಣ ಏಳುವುದರಲ್ಲಿದೆ. ಸೋತರೂ ಸಹ ಸೋಲಿನಿಂದ ಕುಗ್ಗದಿರುವುದು — ಇದೇ ಬದುಕಿನ ಇನ್ನೊಂದು ಹೆಸರು'' ಎಂದು ಆಮ್ಟೆಯವರ ತಾಯಿ ನುಡಿದರು. ತಾಯಿಯ ಈ ಅಮೂಲ್ಯವಾದ ಸಲಹೆಯನ್ನು ಬಾಬಾ ಆಮ್ಟೆ ಚೆನ್ನಾಗಿ ಗ್ರಹಿಸಿದರು. ಇದನ್ನೇ ಆದರ್ಶವಾಗಿಟ್ಟುಕೊಂಡು ಅನೇಕ ಕಷ್ಟ ವಿಪತ್ತು ಗಳು ಬಂದರೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ, ತಲೆಯೆತ್ತಿ ಭಾರತದಾದ್ಯಂತ ಓಡಾಡಿದರು. ಅಸಂಖ್ಯ ಕುಷ್ಠರೋಗಿಗಳಿಗೆ ಸೇವೆಯನ್ನು ಸಲ್ಲಿಸಿ, ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಮಹಾನ್ ಚೇತನವಾದರು.



ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)



ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೧೨

೧೮೯೭ರ ಕೊನೆಯ ಭಾಗದಲ್ಲಿ ಸ್ವಾಮೀಜಿಯವರು ಸ್ವಾಮಿ ವಿರಜಾನಂದರನ್ನೂ ದುರ್ಭಿಕ್ಷದ ಸೇವಾಕಾರ್ಯಕ್ಕಾಗಿ ದೇವಘರ್‌ಗೆ ಕಳುಹಿಸಿದರು. ದೇವಘರ್‌ನಲ್ಲಿ ಆಗ ಶ್ರೀರಾಮಕೃಷ್ಣರ ಭಕ್ತರಾದ ಪ್ರಿಯನಾಥ ಮುಖ್ಯೋಪಾಧ್ಯಾಯ ವಾಸವಾಗಿದ್ದರು. ಸ್ವಾಮಿ ವಿರಜಾನಂದರು ಅವರ ಮನೆಯಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸಿ, ದುರ್ಭಿಕ್ಷದಿಂದ ಪೀಡಿತರಾದವರಿಗೆ ಜೋಳದ ಹಿಟ್ಟು ಮತ್ತು ಉಪ್ಪನ್ನು ವಿತರಿಸುವ ವ್ಯವಸ್ಥೆಯನ್ನು ಮಾಡಿದರು. ಹಳ್ಳಿ ಹಳ್ಳಿಗಳಲ್ಲಿ ತಿರುಗಾಡಿ ಬರಪೀಡಿತರಿಗೆ ವಿತರಣಾ ಚೀಟಿಯನ್ನು ಕೊಡುತ್ತಿದ್ದರು. ಖ್ಯಾತ ವಿದ್ವಾಂಸರಾದ ರಾಜನಾರಾಯಣ ಬಸು ಆಗ ಆಂಶಿಕ ಪಾರ್ಶ್ವವಾಯು ಪೀಡಿತರಾಗಿ ದೇವಘರ್‌ನಲ್ಲಿದ್ದರು. ಅವರ ಕೊನೆಯ ಮಗ ಮಣೀಂದ್ರನಾಥರು ಸ್ವಾಮಿ ವಿರಜಾನಂದರಿಗೆ ಈ ಸೇವಾಕಾರ್ಯದಲ್ಲಿ ತುಂಬ ಸಹಾಯ ಮಾಡಿದ್ದರು. ಮಣೀಂದ್ರನಾಥರೊಂದಿಗೆ ಒಂದು ದಿನ ಸ್ವಾಮಿ ವಿರಜಾನಂದರು ರಾಜನಾರಾಯಣ ಬಸುವನ್ನು ನೋಡಲು ಹೋದರು. ಸ್ವಾಮಿ ವಿರಜಾನಂದರು ಸ್ವಾಮೀಜಿಯವರ ಶಿಷ್ಯರೆಂದೂ, ಈಗ ನಿರ್ಗತಿಕರ ಸೇವಾರ್ಥವಾಗಿ ಬಂದಿದ್ದಾರೆಂದೂ ತಿಳಿದು ಬಸು ಮಹಾಶಯರು ತುಂಬ ಆತ್ಮೀಯತೆಯಿಂದ ಬಹಳ ಹೊತ್ತಿನವರೆಗೆ ಅವರೊಂದಿಗೆ ಮಾತನಾಡಿದ್ದರು. ಸ್ವಾಮಿ ವಿರಜಾನಂದರು ದೇವಘರದ ಸೇವಾಕಾರ್ಯವನ್ನು ತುಂಬ ವ್ಯವಸ್ಥಿತವಾದ ರೀತಿಯಲ್ಲಿ ೨-೩ ತಿಂಗಳ ಕಾಲ ನಡೆಸಿದರು; ಜನಸಾಮಾನ್ಯರ ಹಾಗೂ ಸರ್ಕಾರದ ಪ್ರಶಂಸೆಗೆ ಪಾತ್ರರಾದರು. ಅವರು ದೇವಘರದಿಂದ ಹಿಂತಿರುಗಿದಾಗ ಅವರಿಗೆ ಧನ್ಯವಾದಗಳನ್ನು ಸಮರ್ಪಿಸಲು ಡೆಪ್ಯುಟಿ ಕಮಿಷನ್ನರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಕರೆಯಲಾಗಿತ್ತು. ದೇವಘರದಲ್ಲಿ ಪ್ರಿಯನಾಥ ಮುಖ್ಯೋಪಾಧ್ಯಾಯರು ತಮ್ಮ ಮನೆಯಲ್ಲಿ ಸ್ವಾಮಿ ವಿರಜಾನಂದರನ್ನು ತುಂಬ ಆದರದಿಂದ ನೋಡಿಕೊಂಡಿದ್ದರು. ಅಲ್ಲಿದ್ದಾಗ ಕಠಿಣ ಪರಿಶ್ರಮವಿದ್ದರೂ, ೨-೩ ತಿಂಗಳಲ್ಲಿ ಸ್ವಾಮಿ ವಿರಜಾನಂದರ ಆರೋಗ್ಯ ಬಹಳಷ್ಟು ಸುಧಾರಿಸಿತ್ತು. ಮಠಕ್ಕೆ ಹಿಂತಿರುಗಿದಾಗ, 'ಅಬ್ಬಬ್ಬಾ! ಹೇಗಾಗಿದೆ ನಮ್ಮ famine relief (ಬರ ಪರಿಹಾರ) ಕಾರ್ಯಕರ್ತನ ಚಹರೆ!' ಎಂದು ಎಲ್ಲರೂ ಛೇಡಿಸುತ್ತಿದ್ದರು.

ಆಲಂಬಜಾರ್ ಮಠದಲ್ಲಿ ಹರಿ ಮಹಾರಾಜರು ಹೊಸ ಸಾಧು-ಬ್ರಹ್ಮಚಾರಿಗಳಿಗೆ ಶಾಸ್ತ್ರಾದಿಗಳನ್ನು ಅರ್ಥೈಸುತ್ತಿದ್ದರು. ಬೆಳಗ್ಗೆ-ಸಂಜೆ ಒಟ್ಟಾಗಿ ಕುಳಿತು ಧ್ಯಾನ ಮಾಡುತ್ತಿದ್ದರು; ಸ್ತೋತ್ರಗಳನ್ನು ಕಂಠಪಾಠ ಮಾಡುವುದು, ಅದನ್ನು ಛಂದಸ್ಸಿಗನುಗುಣವಾಗಿ ಪುನರಾವೃತ್ತಿ ಮಾಡುವುದು ಮುಂತಾದವುಗಳನ್ನು ಕಲಿಸಿ ಕೊಡುತ್ತಿದ್ದರು. 'ಭಾಷಾಪರಿಚ್ಛೇದ' (ಒಂದು ನ್ಯಾಯ- ವೈಶೇಷಿಕ ಗ್ರಂಥ) ಪಾಠ ಮಾಡುವಾಗ, ಕಾಳೀಕೃಷ್ಣರಿಗೆ ಅದು ಸ್ವಲ್ಪವೂ ತಲೆಗೆ ಹತ್ತು ತ್ತಿರಲಿಲ್ಲ; ನೆನಪಿನಲ್ಲೂ ಉಳಿಯುತ್ತಿರಲಿಲ್ಲ. ಮಠದ ಒಳಭಾಗದಲ್ಲಿ ಕೆಳ ಅಂತಸ್ತಿಗೆ ಹೋಗುವ ಮೆಟ್ಟಿಲ ಪಕ್ಕ ದಲ್ಲಿ ಸ್ವಲ್ಪ ಸ್ಥಳವಿತ್ತು. ಕಾಳೀ ಕೃಷ್ಣರು ಮಧ್ಯಾಹ್ನ ಊಟದ ನಂತರ ಅಲ್ಲಿ ಕುಳಿತು ಕ್ಲಾಸಿನಲ್ಲಾದ ಟೀಕೆಯ ವ್ಯಾಖ್ಯೆಯನ್ನು ತಿಳಿದುಕೊಳ್ಳಲು ಪುನರಾವೃತ್ತಿ ಮಾಡುತ್ತಿದ್ದರು. ಹರಿ ಮಹಾರಾಜರು ಅದನ್ನು ಕಂಡು ಮೆಟ್ಟಿಲನ್ನು ಹತ್ತಿ ಇಳಿಯುವಾಗಲೆಲ್ಲ ಅವರ ಹತ್ತಿರ ಬಂದು, ಅವರಿಗೆ ತಿಳಿಯುವಂತೆ ಪ್ರತ್ಯೇಕವಾಗಿ ಹೇಳಿಕೊಡುತ್ತಿದ್ದರು.[೧]

೧೮೯೭ರ ಜೂನ್ ತಿಂಗಳಲ್ಲಿ ಭೂಕಂಪದಿಂದಾಗಿ ಆಲಂಬಜಾರಿನ ಮಠಕ್ಕೆ ಬಹಳ ಹಾನಿಯಾಯಿತು. ಆದ್ದರಿಂದ ಆಲಂಬಜಾರಿನಿಂದ ಮಠವನ್ನು ಬೇಲೂರಿನ ನೀಲಾಂಬರ್ ಮುಖ್ಯೋಪಾಧ್ಯಾಯರ ತೋಟದ ಮನೆಗೆ ವರ್ಗಾಯಿಸಲಾಯಿತು (೧೩ ಫೆಬ್ರುವರಿ, ೧೮೯೮). ಆಲಂಬಜಾರಿನಲ್ಲಿ ಮತ್ತು ಇಲ್ಲಿ ಪ್ರತಿ ಭಾನುವಾರ ಸರದಿ ಯಂತೆ ಒಬ್ಬೊಬ್ಬರು, ಮಠದ ಸಾಧುಗಳ ಮುಂದೆ, ತಾನೇ ಒಂದು ವಿಷಯವನ್ನು ಆರಿಸಿಕೊಂಡು ಭಾಷಣ ನೀಡಬೇಕಾಗುತ್ತಿತ್ತು; ಇಲ್ಲವೇ ಪ್ರಬಂಧವನ್ನು ಓದಬೇಕಾಗುತ್ತಿತ್ತು. ಹರಿ ಮಹಾರಾಜರು ಸ್ವಾಮಿ ವಿರಜಾನಂದರ ಮಾತಿನ ಶೈಲಿಯನ್ನು ಪ್ರಶಂಸಿಸುತ್ತಿದ್ದರು. ಒಮ್ಮೆ ಬಲರಾಮ ಬಾಬುವಿನ ಮನೆಯಲ್ಲಿ ಸ್ವಾಮೀಜಿಯವರೊಂದಿಗೆ ಎಲ್ಲರೂ ಕುಳಿತಿದ್ದಾಗ, ಸ್ವಾಮೀಜಿಯವರು ಹಠಾತ್ತಾಗಿ ಒಬ್ಬೊಬ್ಬರನ್ನೇ ಹೆಸರು ಹಿಡಿದು ಕರೆದು, ತಕ್ಷಣಕ್ಕೆ

---

೧ ಆಲಂಬಜಾರ್ ಮಠಕ್ಕೆ ಬಂದ ಮೇಲೆ ಹರಿ ಮಹಾರಾಜರು ಬಹಳ ಅಂತರ್ಮುಖರಾಗಿರುತ್ತಿದ್ದರು. ಅವರು ಪರಿವ್ರಾಜಕ ದಿನಗಳನ್ನು ಮುಗಿಸಿದ ನಂತರ ಮಠಕ್ಕೆ ಮರಳುವ ವಿಷಯವಾಗಿ ಮಾತುಕತೆ ನಡೆಯುತ್ತಿದ್ದಾಗ ಒಮ್ಮೆ ಶಶಿ ಮಹಾರಾಜರು ನನಗೆ ಹೇಳಿದರು: ''ಅವರು ಎಂಥ ಸಿದ್ಧ ಮಹಾಪುರುಷರಾಗಿದ್ದಾರೆ ಅಂತ ನೀನೇ ನೋಡು.'' ಮೊದಮೊದಲು ಹರಿ ಮಹಾರಾಜರ ಬಳಿಗೆ ಹೋಗಲು ನಾನು ಹಿಂಜರಿಯುತ್ತಿದ್ದೆ. ಆದರೆ ಕ್ರಮೇಣ ಅವರು ಎಷ್ಟೊಂದು ಆತ್ಮೀಯತೆ, ಸ್ನೇಹಭಾವಗಳಿಂದ ನನ್ನನ್ನು ಕಂಡರು ಎಂದರೆ, ಬಿಡುವಾದಾಗಲೆಲ್ಲ ಅವರೊಂದಿಗೆ ಒಡನಾಡುತ್ತಿದ್ದೆ, ಅವರೊಂದಿಗೆ ಮಾತನಾಡುತ್ತಿದ್ದೆ, ಅವರ ಸೇವೆ ಮಾಡುತ್ತಿದ್ದೆ. *('ವಿರಜಾನಂದರ ಸ್ಮೃತಿ'ಯಿಂದ)*

ಅವರ ಮನಸ್ಸಿಗೆ ಯಾವ ವಿಚಾರ ಬರುವುದೋ ಅದನ್ನು ಕುರಿತು ಅಲ್ಲೇ ನಿಂತು ಮಾತನಾಡಲು ಆದೇಶಿಸಿದರು. ಏನೂ ತಯಾರಿಲ್ಲದೆ, ಅದೂ ಸ್ವಾಮೀಜಿಯವರ ಸಮ್ಮುಖದಲ್ಲಿ ಏನು ಮಾತಾಡುವುದು ಎಂದು ಕಾಳೀಕೃಷ್ಣರ ಎದೆಯು ಡಬಡಬ ಹೊಡೆದುಕೊಳ್ಳಲಾರಂಭಿಸಿತು. ಅವರ ಸರದಿ ಬಂದಾಗ ಹೇಗೋ ಎದ್ದು ನಿಂತು ೪-೫ ನಿಮಿಷ ಮಾತಾಡಿದರು. ಏನು ಮಾತಾಡುತ್ತಿರುವೆ ಎಂಬುದರ ಬಗ್ಗೆ ಅವರಿಗೆ ಅರಿವೇ ಇರಲಿಲ್ಲ. ಆದರೆ ಮುಗಿಸಿದಾಗ ಸ್ವಾಮೀಜಿಯವರು 'ಭೇಷ್' ಎಂದು ಶ್ಲಾಘಿಸಿದರು.

ಪ್ರಾಸಂಗಿಕ ಸ್ಮೃತಿ

''ಒಮ್ಮೆ ಆಲಂಬಜಾರಿನ ಮಠದಲ್ಲಿ ಈ ತರಹದ ಒಂದು ಸಂದರ್ಭದಲ್ಲಿ (೧೨ ಜೂನ್, ೧೮೯೭) ಸ್ವಾಮಿ ಸುಬೋಧಾನಂದರು (ಖೋಕಾ ಮಹಾರಾಜ್) ಮಾತಾಡಲು ಪ್ರಾರಂಭಿಸುತ್ತಿದ್ದಂತೆಯೇ ಭೀಕರ ಭೂಕಂಪವಾಯಿತು. ಅದೇ ೧೮೯೭ರ ಬಂಗಾಳ-ಅಸ್ಸಾಮಿನ ಭೀಷಣ, ಲೋಕಕ್ಷಯಕಾರಿ ಭೂಕಂಪ! ಯಾರಾರು ಎಲ್ಲೆಲ್ಲಿ ದ್ದೆವೋ ಎಲ್ಲರೂ ಉಸಿರು ಬಿಗಿಹಿಡಿದು, ಓಡಿ ಹೋಗಿ ರಸ್ತೆಯಲ್ಲಿ ನಿಂತೆವು. ಪೂಜನೀಯ ರಾಖಾಲ್ ಮಹಾರಾಜರಂತೂ ಥರ ಥರ ನಡುಗುತ್ತಿದ್ದರು. ಈ ಅವಸ್ಥೆಯಲ್ಲಿದ್ದ ಅವರನ್ನು ಕೆಲವರು ಹಿಡಿದುಕೊಂಡು ಮಠದ ಹೊರಕ್ಕೆ ಕರೆತಂದು ನಿಲ್ಲಿಸಿದರು. ನಾಲ್ಕು ದಿಕ್ಕೂ ರೊಯ್ಯನೆ ತೂಗುತ್ತಿರುವಂತಿತ್ತು, ಭೂಮಿ ಕಾಲ ಕೆಳಗಿನಿಂದ ಸರಿದು ಹೋಗುವಂತಿತ್ತು, ಮುಂದಿನ ಮನೆಯ ಬೃಹತ್ ಕಂಬಗಳ ಮೇಲ್ಭಾಗವು ಮುರಿದು ಬೀಳಲಾರಂಭಿಸಿತು. ಎಲ್ಲರೂ ಹೊರಗಿದ್ದಾಗ ತುಳಸಿ ಮಹಾರಾಜರೊಬ್ಬರು ಮಾತ್ರ ಶ್ರೀರಾಮಕೃಷ್ಣರ ನಿತ್ಯಪೂಜೆಯ ಫೋಟೋ ಮತ್ತು ಅವರ ಅಸ್ಥಿ ಸಂಪುಟವನ್ನು ಎದೆಗೆ ಒತ್ತಿಕೊಂಡು, ವಸ್ತ್ರವೊಂದರಿಂದ ಮುಚ್ಚಿಕೊಂಡು ಮಠದ ಮಧ್ಯದ ಒಳ ಅಂಗಳದಲ್ಲಿ 'ಜೈ ರಾಮಕೃಷ್ಣ' ಎಂದು ಹೇಳುತ್ತ ಅತ್ತಿಂದಿತ್ತ ತಿರುಗುತ್ತಿದ್ದರು. ಕೆಲವು ನಿಮಿಷಗಳ ನಂತರ ನಾವೆಲ್ಲ ಒಳಗೆ ಬಂದೆವು. ಸುಬೋಧ ಮಹಾರಾಜರೊಂದಿಗೆ ಹಾಸ್ಯ ಮಾಡುತ್ತ ನಾವೆಲ್ಲ ಹೇಳಿದೆವು, 'ಮಹಾರಾಜ್ ನಿಮ್ಮ ಭಾಷಣ ಅದೆಷ್ಟು ಶಕ್ತಿಯುತವಾಗಿತ್ತೆಂದರೆ, ನೀವು ಮಾತನಾಡಲು ಎದ್ದು ನಿಲ್ಲುತ್ತಿದ್ದಂತೆಯೇ ಭೂಮಿಯು ಸಾಗರ ಸಮೇತವಾಗಿ ನಡುಗಿಬಿಟ್ಟಿತು!' ಅವರು ನಕ್ಕುಬಿಟ್ಟರು.''

ನೀಲಾಂಬರ ಬಾಬುವಿನ ಮನೆಗೆ ಮಠವು ಸ್ಥಳಾಂತರವಾದ ಕೆಲವು ತಿಂಗಳ ನಂತರ ಸ್ವಾಮೀಜಿಯವರ ಭಾವಧಾರೆಯಿಂದ ಆಕರ್ಷಿತನಾದ ಅನೇಕ ಗುಣಸಂಪನ್ನನಾದ ಬ್ರಾಹ್ಮಣ ಯುವಕನೊಬ್ಬನು ಮಠವನ್ನು ಸೇರಿದ. ಹೆಸರು ಅಜಯಹರಿ ಬಂದ್ಯೋಪಾಧ್ಯಾಯ. ಸ್ವಾಮೀಜಿಯವರು ಆ ಯುವಕನೊಂದಿಗೆ ಮಾತನಾಡಿ ಆತನ ಸಚ್ಚಾರಿತ್ರ್ಯ, ಪ್ರಬಲ ವೈರಾಗ್ಯ, ಮೇಧಾಶಕ್ತಿ, ವಿನಯ ಮತ್ತು ಪಾಂಡಿತ್ಯವನ್ನು ಬಹಳ ಮೆಚ್ಚಿದರು. ಸಂತೋಷದಿಂದ ೧೮೯೮ರ ಮಾರ್ಚ್ ೨೯ರಂದು ಆತನಿಗೆ ಸಂನ್ಯಾಸದೀಕ್ಷೆಯನ್ನು ಕೊಟ್ಟು, 'ಸ್ವರೂಪಾನಂದ' ಎಂಬ ಹೆಸರನ್ನಿತ್ತರು. ಇಷ್ಟರಲ್ಲಿ ಲಂಡನ್ನಿನಿಂದ ಮಾರ್ಗರೆಟ್ ನೋಬಲ್ (ಸೋದರಿ ನಿವೇದಿತಾ) ಮತ್ತು ಅಮೇರಿಕಾದಿಂದ ಮಿಸೆಸ್ ಓಲೆ ಬುಲ್ (ಧೀರ ಮಾತಾ), ಮಿಸ್ ಜೋಸೆಫಿನ್ ಮ್ಯಾಕ್‌ಲಿಯಾಡ್ (ಜಯಾ) ಎಂಬ ಸ್ವಾಮೀಜಿಯವರ ಪಾಶ್ಚಾತ್ಯ ಶಿಷ್ಯೆಯರು ಸ್ವಾಮೀಜಿಯವರ ಕೆಲಸದಲ್ಲಿ ನೆರವಾಗಲು ಭಾರತಕ್ಕೆ ಬಂದುಬಿಟ್ಟಿದ್ದರು. ಈಗಾಗಲೇ ಬೇಲೂರು ಮಠದ ಭೂಮಿಯನ್ನು ಕೊಂಡುಕೊಳ್ಳಲಾಗಿತ್ತು. ಶೀಘ್ರವೇ ಅಲ್ಲಿ ಮಠದ ಕಟ್ಟಡ ನಿರ್ಮಾಣಕಾರ್ಯವು ಆರಂಭವಾಗಲಿತ್ತು. ಅಲ್ಲೊಂದು ಹಳೆಯ ಮನೆಯಿತ್ತು. ಆ ಮೂವರು ಶಿಷ್ಯೆಯರ ನಿವಾಸದ ವ್ಯವಸ್ಥೆಯನ್ನು ಅಲ್ಲಿಯೇ ಮಾಡಲಾಗಿತ್ತು. ಅಜಯಹರಿಗೆ ಸಂನ್ಯಾಸದೀಕ್ಷೆ ಕೊಟ್ಟಂದು ಮಧ್ಯಾಹ್ನ ಧೀರಾಮಾತಾ ಮುಂತಾದವರೊಂದಿಗೆ ಮಾತನಾಡುತ್ತಾ ಸ್ವಾಮೀಜಿಯವರು— ''we have made an acquisition today'' (ನಾವಿಂದು ಒಂದು ಅನರ್ಘ್ಯರತ್ನವನ್ನು ಸಂಪಾದಿಸಿದ್ದೇವೆ) ಎಂದಿದ್ದರು. ಸೋದರಿ ನಿವೇದಿತೆಗೆ ಬಂಗಾಳಿ ಭಾಷೆಯನ್ನು ಕಲಿಸುವ ಜವಾಬ್ದಾರಿಯನ್ನು ಸ್ವಾಮೀಜಿಯವರು ಸ್ವಾಮಿ ಸ್ವರೂಪಾನಂದರಿಗೆ ವಹಿಸಿದ್ದರು. ಸ್ವಾಮಿ ಸ್ವರೂಪಾನಂದರು ನಿಜಕ್ಕೂ ಸಂನ್ಯಾಸಿರತ್ನ. ೨೬ ವರ್ಷಕ್ಕೆ ಮಠಕ್ಕೆ ಸೇರಿ, ಕೇವಲ ೮ ವರ್ಷ ಮಾತ್ರ ಬದುಕಿದ್ದರು. ಆ ಎಂಟು ವರ್ಷಗಳಲ್ಲಿ ಅವರ ಆಧ್ಯಾತ್ಮಿಕ ಕ್ಷೇತ್ರ ಮತ್ತು ಕರ್ಮಕ್ಷೇತ್ರಗಳಲ್ಲಿ ನಡೆದ ವಿಸ್ಮಯಕರವಾದ ವಿಕಾಸವು ಶ್ರೀರಾಮಕೃಷ್ಣ ಮಠ ಮತ್ತು ಮಿಷನ್ನಿನ ಇತಿಹಾಸದಲ್ಲೇ ಒಂದು ಗೌರವಚಿಹ್ನೆಯನ್ನು ಮೂಡಿಸಿತ್ತು. ಸ್ವಾಮಿ ವಿರಜಾನಂದರ ಕಾರ್ಯಕ್ಷೇತ್ರವು ಸ್ವಾಮಿ ಸ್ವರೂಪಾನಂದರೊಂದಿಗೆ ಗಾಢವಾಗಿ ಹೆಣೆದಿತ್ತು ಎಂಬುದನ್ನು ಮುಂದೆ ನೋಡಬಹುದು.

ಸ್ವಾಮಿ ಸ್ವರೂಪಾನಂದರಿಗೆ ಸಂನ್ಯಾಸ ಕೊಡುವ ನಾಲ್ಕು ದಿನಗಳ ಮೊದಲೇ ಸ್ವಾಮೀಜಿಯವರು ಮಾರ್ಗರೆಟ್ ನೋಬಲ್‌ಗೆ ಬ್ರಹ್ಮಚರ್ಯ ದೀಕ್ಷೆಯನ್ನು ಕೊಟ್ಟಿದ್ದರು. (ಮಾರ್ಚ್ ೨೫, ೧೮೯೮). ಈ ವ್ರತಧಾರಿಣಿಯ ಹೆಸರನ್ನು 'ನಿವೇದಿತಾ' ಎಂದಿಟ್ಟರು. ಇದಾದ ಕೆಲವು ದಿನಗಳ ನಂತರ ಕಠಿಣ ಪರಿಶ್ರಮದಿಂದ ಬಳಲಿದ್ದ ಸ್ವಾಮೀಜಿ ವೈದ್ಯರ ಸಲಹೆಯ ಮೇರೆಗೆ ಹವಾ ಬದಲಾವಣೆಗಾಗಿ ದಾರ್ಜಿಲಿಂಗಿಗೆ ಹೋದರು. ಆದರೆ ಅಲ್ಲೂ ಸಹ ಹೆಚ್ಚು ದಿನ ಉಳಿದುಕೊಳ್ಳಲಾಗಲಿಲ್ಲ. ಕೊಲ್ಕತ್ತೆಯಲ್ಲಿ ಹರಡುತ್ತಿದ್ದ ದಾರುಣವಾದ ಪ್ಲೇಗಿನ ಸುದ್ದಿ ಕೇಳಿ ರೋಗಪೀಡಿತರಿಗೆ ಪರಿಹಾರ ಕಾರ್ಯವನ್ನು ಕೈಗೊಳ್ಳಲು ಬೇಗನೆ ಮಠಕ್ಕೆ ಹಿಂತಿರುಗಿದರು. ಈ ಸಂದರ್ಭದಲ್ಲಿ ಸ್ವಾಮೀಜಿಯವರ ಅಗಾಧ ಅನುಕಂಪೆಯನ್ನು ವಿಶಾಲ ಹೃದಯವನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಳ್ಳುವ ಸೌಭಾಗ್ಯ ಸ್ವಾಮಿ ವಿರಜಾನಂದರದಾಗಿತ್ತು. ಈ ದೊಡ್ಡ ಸೇವಾಕಾರ್ಯಕ್ಕೆ ಹಣ ಎಲ್ಲಿಂದ ಬರುವುದು ಎಂದು ಗುರುಭಾಯಿಗಳೊಬ್ಬರು ಕೇಳಿದಾಗ ಸ್ವಾಮೀಜಿ, ''ಏಕೆ? ಅಗತ್ಯಬಿದ್ದರೆ ಹೊಸ ಮಠಕ್ಕೆಂದು ಕೊಂಡುಕೊಂಡಿರುವ ಜಮೀನನ್ನು ಮಾರಿಬಿಡುವೆ'' ಎಂದಿದ್ದರು. ಇದಲ್ಲದೆ ಸ್ವಾಮಿ ವಿರಜಾನಂದರು ಗಮನಿಸಿದ್ದೇನೆಂದರೆ,

ಸ್ವಾಮೀಜಿಯವರ ಮಾನಸಪುತ್ರಿ, ವ್ರತಧಾರಿಣಿ ಸೋದರಿ ನಿವೇದಿತೆಯ ಅದ್ಭುತ ಸೇವಾಮನೋಭಾವವನ್ನು. ಅಪೂರ್ವ ದೃಢತೆ, ಅಚಲನಿಷ್ಠೆಗಳೊಂದಿಗೆ ಈ ವಿದೇಶಿ ನಾರಿಯು ಮಠದ ಸಂನ್ಯಾಸಿಗಳೊಂದಿಗೆ ಬಾಘ್‌ಬಜಾರಿನ ಗಲ್ಲಿಗಲ್ಲಿಗಳಲ್ಲಿ ಮಹಾಮಾರಿ ಪ್ಲೇಗ್‌ನಿಂದ ಪೀಡಿತರಾದ ಜನರ ಸೇವೆಯಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡದ್ದನ್ನು ಅವರು ನೋಡಿದರು.

ಸ್ವಾಮೀಜಿಯವರು ದಾರ್ಜಿಲಿಂಗಿನಲ್ಲಿದ್ದಾಗ ಸ್ವಾಮಿ ವಿರಜಾನಂದರು ಮಠದ ಚರ್ಚಾಸಭೆಯಲ್ಲಿ ಒಂದು ದಿನ renunciation (ತ್ಯಾಗ) ಬಗ್ಗೆ ತಮ್ಮ ಪ್ರಬಂಧವನ್ನು ಓದಿದ್ದರು. ಅದರ ಭಾವ ಮತ್ತು ಭಾಷೆಗಳೆರಡೂ ಉತ್ಕೃಷ್ಟವಾಗಿದ್ದವು. ಕೊಲ್ಕತ್ತೆಯಲ್ಲಿ ಪ್ಲೇಗಿನ ಪ್ರಕೋಪವು ಕಡಿಮೆಯಾದ ಮೇಲೆ ಸ್ವಾಮೀಜಿಯವರು ಸ್ವಾಮಿ ತುರೀಯಾನಂದ, ನಿರಂಜನಾನಂದ, ಸದಾನಂದ, ಸ್ವರೂಪಾನಂದ ಮತ್ತು ತಮ್ಮ ಪಾಶ್ಚಾತ್ಯ ಶಿಷ್ಯೆಯರೊಡಗೂಡಿ (ಧೀರಾಮಾತಾ, ಜಯಾ ಮತ್ತು ನಿವೇದಿತಾ) ೧೮೯೮ರ ಮೇ ೧೧ರಂದು ಆಲ್ಮೋರಕ್ಕೆ ಹೊರಟರು. ಕೊಲ್ಕತ್ತದಲ್ಲಿದ್ದ ಅಮೆರಿಕಾದವರಾದ ಕೌನ್ಸಿಲ್ ಜನರಲ್‌ನ ಪತ್ನಿ ಮಿಸೆಸ್ ಪ್ಯಾಟರ್‌ಸನ್ ಸಹ ಇವರೊಂದಿಗೆ ಪ್ರಯಾಣಿಸಿದರು. ಅಮೇರಿಕೆಯಲ್ಲೊಮ್ಮೆ ಸ್ವಾಮೀಜಿಯವರು 'ಬಿಳಿಯರಲ್ಲ' ಎಂಬ ಕಾರಣದಿಂದ ಹೋಟೆಲೊಂದರಲ್ಲಿ ಪ್ರವೇಶ ಪಡೆಯದಿದ್ದಾಗ ಈ ಮಹಿಳೆಯು ಅವರನ್ನು ತುಂಬ ಆದರಪೂರ್ವಕವಾಗಿ ತಮ್ಮ ಮನೆಗೆ ಕರೆತಂದು ಆತಿಥ್ಯ ನೀಡಿದ್ದರು. ಆಗಿನಿಂದಲೂ ಈಕೆಗೆ ಸ್ವಾಮೀಜಿಯೆಂದರೆ ತುಂಬ ಶ್ರದ್ಧೆ ಹಾಗೂ ಪೂಜ್ಯಭಾವವಿತ್ತು.

ಸ್ವಾಮೀಜಿಯವರು ಆಲ್ಮೋರಕ್ಕೆ ಹೋದ ನಂತರ ಸ್ವಾಮಿ ವಿರಜಾನಂದರು ಸ್ವಾಮಿ ಶಿವಾನಂದರೊಂದಿಗೆ ದಾರ್ಜಿಲಿಂಗ್‌ಗೆ ಹೋಗಿ (೨೨ ಮೇ, ೧೮೯೮) ಸುಮಾರು ಒಂದೂವರೆ ತಿಂಗಳು ಅಲ್ಲಿದ್ದರು. ಜುಲೈ ೧೧ರಂದು ಮಠಕ್ಕೆ ಹಿಂತಿರುಗಿದರು. ಮಹಾಪುರುಷ್ ಮಹಾರಾಜರು (ಸ್ವಾಮಿ ಶಿವಾನಂದರು) ನಾಲ್ಕು ತಿಂಗಳ ನಂತರ ಹಿಂತಿರುಗಿದರು. ಆಲ್ಮೋರ ಮತ್ತು ಕಾಶ್ಮೀರ ಪರ್ಯಟನೆ ಮುಗಿಸಿ ಸ್ವಾಮೀಜಿಯವರು ಒಂದು ದಿನ ಅನಿರೀಕ್ಷಿತವಾಗಿ ಮಠಕ್ಕೆ ಆಗಮಿಸಿದರು (೧೮ ಅಕ್ಟೋಬರ್ ೧೮೯೮). ಅವರ ಶರೀರ ಬಹಳ ಅಸ್ವಸ್ಥಗೊಂಡಿತ್ತು. ಅದಲ್ಲದೆ, ಕಾಶ್ಮೀರದಲ್ಲಿ ಅಮರನಾಥ ಮತ್ತು ಕ್ಷೀರಭವಾನಿಯ ದರ್ಶನದ ನಂತರ ಒಂದು ರೀತಿ ಗಂಭೀರ ಸ್ತಬ್ಧಭಾವ ಅವರ ಮನಸ್ಸನ್ನು ಆವರಿಸಿತ್ತು—ಮಠಕ್ಕೆ ಬಂದ ನಂತರವೂ ಆ ಭಾವ ಮುಂದುವರಿದಿತ್ತು. ಮೂರು ನಾಲ್ಕು ದಿನಗಳ ನಂತರ ಅವರ ಗೃಹೀ ಶಿಷ್ಯರಾದ ಶರಚ್ಚಂದ್ರರು ಅವರ ದರ್ಶನಕ್ಕೆ ಬಂದಾಗ ನೋಡಿದ್ದೇನೆಂದರೆ: ''ಸ್ವಾಮೀಜಿ ಮುಕ್ತ ಪದ್ಮಾಸನದಲ್ಲಿ ಪೂರ್ವಾಭಿಮುಖವಾಗಿ ಕುಳಿತಿದ್ದಾರೆ, ಆಳವಾದ ಧ್ಯಾನದಲ್ಲಿ ಮಗ್ನರಾದಂತೆ. ಮುಖದಲ್ಲಿ ನಗುವಿಲ್ಲ, ಆ ಪ್ರದೀಪ್ತ ನಯನಗಳಲ್ಲಿ ಬಹಿರ್ದೃಷ್ಟಿ ಇಲ್ಲ, ತಮ್ಮೊಳಗೇ ಏನನ್ನೋ ನೋಡುವಂತಿದೆ.'' ಶರಚ್ಚಂದ್ರನನ್ನು ನೋಡಿದ ಸ್ವಾಮೀಜಿ, ''ಅಮರನಾಥನ ದರ್ಶನದಾರಭ್ಯ ನನ್ನ ತಲೆಯಲ್ಲಿ ಇಪ್ಪತ್ತನಾಲ್ಕು ಗಂಟೆಯೂ ಶಿವನೇ ತುಂಬಿಕೊಂಡಿರುವಂತಿದೆ. ಏನು ಮಾಡಿದರೂ ಇಳಿಯುತ್ತಿಲ್ಲ'' ಎಂದರು. *(Life of Swami Vivekananda, Vol. 2, p.390.)*



ಸ್ವಾಮಿ ಶಿವಾನಂದರು

ಈ ಸಮಯದಲ್ಲಿ ಸ್ವಾಮಿ ವಿರಜಾನಂದರಿಗೆ ಸ್ವಾಮೀಜಿಯವರ ವೈಯಕ್ತಿಕ ಸೇವೆ ಮಾಡುವ ಸೌಭಾಗ್ಯ ಲಭಿಸಿತು. ಚಿಕಿತ್ಸಾ ಸೌಲಭ್ಯಕ್ಕಾಗಿ ಸ್ವಾಮೀಜಿಯವರು ಕೊಲ್ಕತ್ತೆಯ ಬಾಘ್ ಬಜಾರಿನ ಬಲರಾಮ ಬಾಬುವಿನ ಮನೆಯಲ್ಲಿದ್ದರು. ಆಗಾಗ ಮಠಕ್ಕೆ ಬರುತ್ತಿದ್ದರು. ೧೮೯೮ರ ನವೆಂಬರ್ ೧೩ ಸ್ವಾಮಿ ವಿರಜಾನಂದರಿಗೆ ಅವಿಸ್ಮರಣೀಯ ದಿನ. ಅಂದು ಕಾಳೀಪೂಜೆ. ಶ್ರೀಮಾತೆ ತಾವು ದಿನನಿತ್ಯ ಪೂಜಿಸುತ್ತಿದ್ದ ಶ್ರೀರಾಮಕೃಷ್ಣರ ಫೋಟೋದೊಂದಿಗೆ ಆಗ ನಿರ್ಮಾಣವಾಗುತ್ತಿದ್ದ ಬೇಲೂರು ಮಠವನ್ನು ನೋಡಲು ಬಂದಿದ್ದರು. ತಾತ್ಕಾಲಿಕ ಮಠವಾಗಿದ್ದ ನೀಲಾಂಬರ ಬಾಬುವಿನ ಮನೆಯ ದೇವರ ಮನೆಯಿಂದ ಶ್ರೀರಾಮಕೃಷ್ಣರ ಪಟವನ್ನೂ ಹೊಸ ಕಟ್ಟಡಕ್ಕೆ ತರಲಾಯಿತು. ಶ್ರೀಮಾತೆಯವರೇ ಸ್ವತಃ ಪೂಜೆಗೆ ಕುಳಿತರು, ಅನಂತರ ಮಠಕ್ಕೆ ಹಿಂತಿರುಗಿ ಬಂದು ದೇವರ ಮನೆಯಲ್ಲಿ ನೈವೇದ್ಯ ಮಾಡಿದರು. ಮಠದಲ್ಲಿ ಪ್ರಸಾದ ಸ್ವೀಕರಿಸಿ ಸಂಜೆಯ ವೇಳೆಗೆ ಶ್ರೀಮಾತೆಯವರೂ ಅವರ ಸ್ತ್ರೀ ಸಂಗಡಿಗರೂ ಕೊಲ್ಕತ್ತದ ಬಾಘ್ ಬಜಾರಿನ ಸೋದರಿ ನಿವೇದಿತೆಯ 'ಬಾಲಿಕಾ ವಿದ್ಯಾಲಯ'ದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಹೋದರು. ಅಲ್ಲಿ ಸ್ವಾಮೀಜಿ, ಸ್ವಾಮಿ ಬ್ರಹ್ಮಾನಂದರು ಮತ್ತು ಸ್ವಾಮಿ ಶಾರದಾನಂದರು ಉಪಸ್ಥಿತರಿದ್ದರು.

ಇದಾದ ನಂತರ ೧೮೯೮ನೇ ಇಸವಿಯ ಡಿಸೆಂಬರ್ ೯ ರಂದು ಬರೆದ ಅವಿಸ್ಮರಣೀಯ ಸ್ಮೃತಿ ಹೀಗಿದೆ:

''ಅಂದು ಬೇಲೂರು ಮಠದ ಸ್ಥಾಪನೆ. ಸ್ವಾಮೀಜಿಯವರು ಪ್ರಾತಃಕಾಲದಲ್ಲಿ ಎದ್ದು, ಗಂಗಾಸ್ನಾನ ಮಾಡಿ, ಶ್ರೀರಾಮಕೃಷ್ಣರ ಪಾದುಕೆಗಳಿಗೆ ಬಿಲ್ವಪತ್ರೆ ಮತ್ತು ಪುಷ್ಪಾಂಜಲಿ ಸಮರ್ಪಿಸಿ, ಶ್ರೀರಾಮಕೃಷ್ಣರ ಭಸ್ಮಾಸ್ಥಿಗಳನ್ನಿಟ್ಟ ತಾಮ್ರಸಂಪುಟವನ್ನು (ಆತ್ಮಾರಾಮನ ಸ್ಥಾಲಿ) ತಮ್ಮ ಬಲಹೆಗಲಿನ ಮೇಲಿಟ್ಟುಕೊಂಡು, ಸಾಧು, ಬ್ರಹ್ಮಚಾರಿ ಹಾಗೂ ಭಕ್ತರೊಂದಿಗೆ ನೀಲಾಂಬರ ಬಾಬುವಿನ ಉದ್ಯಾನಮನೆಯಿಂದ ಹೊಸ ಮಠಕ್ಕೆ ಹೊತ್ತು ತಂದರು. ಶಂಖ-ಘಂಟೆಗಳ ನಿನಾದದಿಂದ ಗಂಗಾತಟವು ಅನುರಣಿತವಾಗುತ್ತಿತ್ತು.

''ದಾರಿಯಲ್ಲಿ ಶಿಷ್ಯನಾದ ಶರಚ್ಚಂದ್ರ ಚಕ್ರವರ್ತಿಗೆ ಸ್ವಾಮೀಜಿ ಹೇಳಿದರು: 'ಶ್ರೀರಾಮಕೃಷ್ಣರು ನನಗೆ ಹೇಳಿದ್ದರು, 'ನೀನು ಹೆಗಲ ಮೇಲಿಟ್ಟುಕೊಂಡು ನನ್ನನ್ನು ಎಲ್ಲೆಲ್ಲಿಗೆ ಕರೆದೊಯ್ಯುವೆಯೋ ನಾನು ಅಲ್ಲಿಗೆ ಬರುವೆ. ಅದು ಮರದ ಬುಡವಾದರೂ ಆಗಿರಲಿ, ಕುಟೀರವೇ ಆಗಿರಲಿ, ಅಲ್ಲೇ ನೆಲೆಸುವೆ' ಎಂದು. ಆದ್ದರಿಂದಲೇ ಇಂದು ನಾನೇ ಸ್ವತಃ ಅವರನ್ನು ಹೆಗಲ ಮೇಲಿಟ್ಟುಕೊಂಡು ಹೊಸ ಮಠಕ್ಕೆ ಕೊಂಡೊಯ್ಯುತ್ತಿರುವೆ. ಬಹುಕಾಲದವರೆಗೆ ಶ್ರೀರಾಮಕೃಷ್ಣರು 'ಬಹುಜನ ಹಿತಾಯ' ಇಲ್ಲಿಯೇ ಸ್ಥಿರವಾಗಿ ನೆಲೆಸುವರೆಂಬುದನ್ನು ಖಂಡಿತವಾಗಿಯೂ ತಿಳಿದುಕೋ.'

''ಅಂದು ಸ್ವಾಮೀಜಿಯವರೇ ಸ್ವತಃ ಪೂಜೆ-ಹೋಮಗಳನ್ನು ಮಾಡಿದ್ದರು. ಗುರುಭಾಯಿಗಳ ಸಹಾಯದಿಂದ ತಾವೇ ಪಾಯಸಾನ್ನವನ್ನು ತಯಾರಿಸಿ ಠಾಕೂರರಿಗೆ ನಿವೇದಿಸಿದ್ದರು.

''ಡಿಸೆಂಬರ್ ೯ರಂದು ಮಠವು ಹೊಸ ನಿವೇಶನದಲ್ಲಿ ಪ್ರತಿಷ್ಠಾಪನೆಯಾದ ಮೇಲೆ ಕೆಲವು ಸಂನ್ಯಾಸಿಗಳು ಅಲ್ಲಿ ವಾಸ ಮಾಡಲಾರಂಭಿಸಿದರು. ಆದರೆ ನೀಲಾಂಬರ ಬಾಬುವಿನ ತೋಟದಿಂದ ಮಠವು ಪೂರ್ತಿಯಾಗಿ ವರ್ಗಾವಣೆಯಾದದ್ದು ಇನ್ನೂ ಮೂರು ವಾರಗಳ ನಂತರವೇ; ೧೮೯೯ರ ಜನವರಿ ೧ರಂದು. ಬೇಲೂರು ಮಠದ ಸ್ಥಾಪನೆಯ ಹತ್ತು ದಿನಗಳ ನಂತರ (೧೮೯೮ರ ಡಿಸೆಂಬರ್ ೧೯ರಂದು) ಸ್ವಾಮೀಜಿಯವರು ಹವಾ ಬದಲಾವಣೆಗಾಗಿ ಕೆಲವು ದಿನಗಳ ಮಟ್ಟಿಗೆ ದೇವಘರಕ್ಕೆ ಹೋದರು. ಅವರ ಜೊತೆಯಲ್ಲಿ ಬ್ರಹ್ಮಚಾರಿ ಹರೇಂದ್ರನಾಥರೂ (ನಾದು) ಇದ್ದರು. ಅಲ್ಲಿ ಸ್ವಾಮೀಜಿ ಶ್ರೀರಾಮಕೃಷ್ಣರ ಭಕ್ತರಾದ ಪ್ರಿಯನಾಥ ಮುಖ್ಯೋಪಾಧ್ಯಾಯರ ಆತಿಥ್ಯವನ್ನು ಸ್ವೀಕರಿಸಿದರು. (ಒಂದು ವರ್ಷದ ಹಿಂದೆ ವಿರಜಾನಂದರೂ ಇವರ ಮನೆಯಲ್ಲಿಯೇ ಇದ್ದುಕೊಂಡು ದೇವಘರದ ದುರ್ಭಿಕ್ಷ ಪರಿಹಾರ ಕಾರ್ಯವನ್ನು ನೆರವೇರಿಸಿದ್ದರು.) ದೇವಘರದಲ್ಲಿ ಸ್ವಾಮೀಜಿಯವರು ಆಸ್ತಮಾದಿಂದ ತುಂಬ ಕಷ್ಟಪಟ್ಟರು. ಅನೇಕ ಬಾರಿ ಶ್ವಾಸವು ನಿಂತೇ ಹೋಗುತ್ತಿತ್ತು. ಅವರೇ ಮುಂದೊಮ್ಮೆ ಹೇಳಿದಂತೆ, ಆಗ ಅವರು ಎತ್ತರವಾದ ದಿಂಬಿಗೆ ಒರಗಿ ಮೃತ್ಯುವಿನ ನಿರೀಕ್ಷೆ ಮಾಡತೊಡಗಿದರು. ಒಳಗಿನಿಂದ 'ಸೋಽಹಂ ಸೋಽಹಂ' ಎಂಬ ನಾದವು ಅನವರತ ಏಳುತ್ತಿತ್ತು. ಅದರೊಂದಿಗೆ ಉಪನಿಷತ್ತಿನ ಮಂತ್ರವೊಂದು 'ಏಕಮೇವಾಽದ್ವಿತೀಯಂ ಬ್ರಹ್ಮ, ನೇಹ ನಾನಾಸ್ತಿ ಕಿಂಚನ' (ಕೇವಲ ಅದ್ವಿತೀಯ ಬ್ರಹ್ಮನೊಬ್ಬನೇ ಇರುವುದು, ಇಲ್ಲಿ ನಾನಾ ಪ್ರಕಾರದ್ದು ಯಾವುದೂ ಇಲ್ಲ) ಎಂದು ಧ್ವನಿಸುತ್ತಿರುವಂತೆಯೂ ಅನುಭವವಾಯಿತು.''


ಸ್ವಾಮೀಜಿಯವರು ದೇವಘರದಿಂದ ಹಿಂತಿರುಗಿದರು. ಅವರನ್ನು ಢಾಕಾದ ಭಕ್ತರು ಸಂನ್ಯಾಸಿ ಪ್ರಚಾರಕರನ್ನು ಕಳುಹಿಸಬೇಕೆಂದು ಕೇಳಿಕೊಂಡಿದ್ದರು. ಆದ್ದರಿಂದ ಸ್ವಾಮಿ ವಿರಜಾನಂದ ಹಾಗೂ ಸ್ವಾಮಿ ಪ್ರಕಾಶಾನಂದರಿಗೆ ಕರೆ ಹೋಯಿತು. ಸ್ವಾಮೀಜಿಯವರು ಆಗ ಬಲರಾಮ ಮಂದಿರದಲ್ಲಿದ್ದರು. ಸ್ವಾಮಿ ಪ್ರಕಾಶಾನಂದರೇನೋ ಉತ್ಸಾಹ ತೋರಿದರು. ಆದರೆ ಸ್ವಾಮಿ ವಿರಜಾನಂದರು ಹಿಂಜರಿದರು. ಅವರು, ''ಸಾಧನೆಯನ್ನೇನೂ ಮಾಡಲಿಲ್ಲ, ಭಗವಂತನನ್ನೂ ಪಡೆಯಲಿಲ್ಲ. ಏನೆಂದು ತಾನೇ ನಾನು ಭಾಷಣ ಮಾಡಲಿ?'' ಎಂದರು.


ಅದಕ್ಕೆ ಸ್ವಾಮೀಜಿ, ''ನೀನೇನೂ ಆಚಾರ್ಯನೆಂಬ ಗರ್ವದಿಂದ ಮಾತಾಡಬೇಡಪ್ಪ, ಸೇವೆಯ ಭಾವದಿಂದ ಬೇರೆ ಹತ್ತಾರು ಕೆಲಸಗಳನ್ನು ಮಾಡುವಂತೆ ಭಾಷಣವನ್ನು ಮಾಡು'' ಎಂದರು.


ಸ್ವಾಮಿ ವಿರಜಾನಂದರು ಆಗ, ''ನನಗೇನು ಗೊತ್ತಿದೆ ಅಂತ ಮಾತಾಡಲಿ?'' ಎಂದರು. ಸ್ವಾಮೀಜಿಯವರು ಸ್ವಲ್ಪ ತಮಾಷೆಯಾಗಿ ಹೇಳಿದರು, ''ಆಯ್ತಪ್ಪ, ಎದ್ದು ನಿಂತು ಹಾಗೆಂದೇ ಹೇಳು 'ನನ ಗೇನೂ ಗೊತ್ತಿಲ್ಲ' ಎಂದು.'' ನಂತರ ಸ್ವಲ್ಪ ಗಂಭೀರವಾಗಿ ಹೇಳಿದರು, ''ನನಗೇನೂ ಗೊತ್ತಿಲ್ಲ ಎಂದು ಹೇಳುವುದೇ ತಾನೇ ಒಂದು ದೊಡ್ಡ ಶಿಕ್ಷಣ. 'ನನಗೆಲ್ಲಾ ಗೊತ್ತು' ಈ ಭಾವವೇ ಅಜ್ಞಾನವಲ್ಲವೆ?'' ಆದರೂ ಸ್ವಾಮಿ ವಿರಜಾನಂದರಿಗೆ ಧೈರ್ಯ ಬರದಿರುವುದನ್ನು ಕಂಡು ಉದ್ವಿಗ್ನರಾಗಿ, ''ಇಲ್ಲಿ ನೋಡು, ಸ್ವಂತ ಮುಕ್ತಿಯನ್ನೇನಾದರೂ ಬಯಸುವೆಯೋ ನಿಶ್ಚಯವಾಗಿಯೂ ನರಕಕ್ಕೆ ಹೋಗುವೆ. ಆದರೆ ಪರರ ಮುಕ್ತಿಗಾಗಿ ದುಡಿಯುವೆಯೋ ಈ ಕ್ಷಣವೇ ಮುಕ್ತನಾಗುವೆ'' ಎಂದು ಹೇಳಿದರು.

ಈ ಮಾತುಗಳಿಂದ ಸ್ವಾಮಿ ವಿರಜಾನಂದರು ತುಂಬ ಪ್ರಭಾವಿತರಾದರು. ಸ್ವಾಮೀಜಿಯವರ ಆದೇಶವನ್ನು ಪಾಲಿಸುವೆ ಎಂದು ಸಂಕಲ್ಪಿಸಿ ಈ ಹೊಸ ಕೆಲಸಕ್ಕಾಗಿ ಸಿದ್ಧರಾಗತೊಡಗಿದರು. ಅವರಿಬ್ಬರೂ ಢಾಕಾಗೆ ಹೋಗುವ ಮುನ್ನ ಸ್ವಾಮೀಜಿಯವರೇ ಒಂದು ದಿನ ದೇವರಮನೆಗೆ ಹೋಗಿ ಪೂಜೆಯನ್ನು ಮಾಡಿದರು. ಇಬ್ಬರನ್ನೂ ಹತ್ತಿರ ಕುಳ್ಳಿರಿಸಿ, ಮನದುಂಬಿ ಆಶೀರ್ವದಿಸಿದರು. ತಲೆಯ ಮೇಲೆ ಕೈಯಿಟ್ಟು, ''ಆತನ ಶಕ್ತಿಯು ನಿಮ್ಮಲ್ಲಿ ಪ್ರವೇಶಿಸಿ ಹರಡುತ್ತಿದೆ ಎಂಬುದರಲ್ಲಿ ವಿಶ್ವಾಸವಿರಿಸಿ. ಸಂಘವೇ ಶ್ರೀರಾಮಕೃಷ್ಣರ ಸಮಷ್ಟಿ ಶರೀರವೆಂದು ತಿಳಿಯಿರಿ. ಸಂಘಕ್ಕೆ ಯಥೋಚಿತವಾದ ಶ್ರದ್ಧೆ-ನಿಷ್ಠೆ ತೋರಿ, ಸಂಘದ ಆಜ್ಞೆಯನ್ನು ಪರಿಪಾಲಿಸಿ'' ಎಂದರು.

(ಮುಂದುವರಿಯುವುದು)







ಪುಟಗಳು : **72** *ಬೆಲೆ* : **10/** | *ಪುಟಗಳು* : **68** *ಬೆಲೆ* : **10/** | *ಪುಟಗಳು* : **52** *ಬೆಲೆ* : **10/**

ಕೃತಿ : **ಶ್ರೀರಾಮಕೃಷ್ಣ ದರ್ಶನ, ಸ್ವಾಮಿ ವಿವೇಕಾನಂದ ವಿವೇಚನೆ, ಶ್ರೀಶಾರದಾ ಸೌರಭ** *ಲೇಖಕರು* : **ಡಾ. ಸಿ.ಪಿ.ಕೆ.**
ಪ್ರಕಾಶಕರು : **ಅಖಿಲ ಭಾರತ ದೇಜಗೌ ಸಾಂಸ್ಕೃತಿಕ ಟ್ರಸ್ಟ್ (ನೋಂ.), ವಿಜಯನಗರ 1ನೇ ಹಂತ, ಜಿಲ್ಲಾ ಕನ್ನಡ ಸಾಹಿತ್ಯ ಭವನ ರಸ್ತೆ, ಕುವೆಂಪು ಟ್ರಸ್ಟ್ ಹತ್ತಿರ, ಮೈಸೂರು - 570 012** *ವಿತರಕರು: ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು-4*



ಡಾ. ಸಿ.ಪಿ.ಕೆ.ಯವರ ಮೂರು ಕೃತಿಗಳು

ಶ್ರೀರಾಮಕೃಷ್ಣ ಪರಮಹಂಸರು, ಶ್ರೀಮಾತೆ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರು – ಇವರನ್ನು 'ದಿವ್ಯತ್ರಯರು' ಎಂದೇ ಕರೆಯುವುದು ವಾಡಿಕೆ. ಮೂವರೂ ಆಧುನಿಕ ಯುಗದಲ್ಲಿ ಅವತರಿಸಿ ಬಂದ ಅಸಾಧಾರಣ ದೈವೀ ವ್ಯಕ್ತಿತ್ವಗಳು. ಇವರನ್ನು ಕುರಿತು ಕನ್ನಡದಲ್ಲಿ ಈಗಾಗಲೇ ಪ್ರಕಟವಾಗಿರುವ ಜೀವನ ಚರಿತ್ರೆ, ಉಪದೇಶ ಸಂಕಲನ, ವಿಚಾರ-ವಿಮರ್ಶೆ ಹೀಗೆ ವಿಭಿನ್ನ ವಿಷಯಗಳಿರುವ ಸಾಹಿತ್ಯರಾಶಿಗೆ ಸೇರ್ಪಡೆಯಾಗಬಲ್ಲ ಮೂರು ಮೌಲಿಕ ಕೃತಿಗಳನ್ನು ಡಾ.ಸಿ.ಪಿ.ಕೆ.ಯವರು ಕನ್ನಡ ಜನತೆಗೆ ನೀಡಿದ್ದಾರೆ. 'ಶ್ರೀರಾಮಕೃಷ್ಣ ದರ್ಶನ', 'ಶ್ರೀಶಾರದಾ ಸೌರಭ', 'ಸ್ವಾಮಿ ವಿವೇಕಾನಂದ ವಿವೇಚನೆ' — ಈ ಮೂರು ಪುಸ್ತಕಗಳನ್ನು ಅಖಿಲ ಭಾರತ ದೇಜಗೌ ಸಾಂಸ್ಕೃತಿಕ ಟ್ರಸ್ಟ್ ಪ್ರಕಟಿಸಿದೆ. ದಿವ್ಯತ್ರಯರನ್ನು ಕುರಿತ ಲೇಖನಗಳು, ಅನುವಾದಿತ ಲೇಖನಗಳು, ಕವಿತೆಗಳು ಈ ಮೂರು ಪುಸ್ತಕಗಳಲ್ಲಿವೆ.

೧. 'ಶ್ರೀರಾಮಕೃಷ್ಣ ದರ್ಶನ'

ಶ್ರೀರಾಮಕೃಷ್ಣರನ್ನು ಕುರಿತ ಎಂಟು ಲೇಖನಗಳ ಸಂಕಲನವಿದು. ಲೇಖಕರೇ ಮುನ್ನುಡಿಯಲ್ಲಿ ಬರೆದಿರುವಂತೆ, ಇವುಗಳಲ್ಲಿ ನಾಲ್ಕು ಇಂಗ್ಲಿಷಿನ ಅನುವಾದ; ಉಳಿದವು ಲೇಖಕರ ಸ್ವಂತ ರಚನೆಗಳು. 'ಶ್ರೀರಾಮಕೃಷ್ಣರ ಜೀವನ ಸಂಕ್ಷೇಪ'ವೆಂಬ ಲೇಖನ ಹೆಚ್ಚು ದೀರ್ಘವಾಗಿದ್ದು, ೨೦ ಪುಟಗಳಷ್ಟು ವ್ಯಾಪಕವಾಗಿದೆ. ಸರಳತೆಯೇ ಮೂರ್ತಿವೆತ್ತ ಮಹಾಪುರುಷನ ಕಥೆಯನ್ನು ಹೇಳುವಾಗ ಲೇಖಕರ ಶೈಲಿಯೂ ಸರಳವಾಗಿದೆ. ಇದಕ್ಕೆ ಒಂದು ಉದಾಹರಣೆ: "ಶ್ರೀರಾಮಕೃಷ್ಣರು ಮಥುರನೊಡನೆ ವಾಯವ್ಯ ಭಾರತದ ಪವಿತ್ರ ಸ್ಥಳಗಳಿಗೆ ದೊಡ್ಡ ತಂಡದೊಡನೆ ಯಾತ್ರೆ ಹೋದರು. ದಿಯೋಗರ್‌ದಲ್ಲಿ ಅವರಿಗೆ ಬೈದ್ಯನಾಥ-ಶಿವನ ದರ್ಶನವಾಯಿತು. ಆಮೇಲೆ ಶ್ರೀರಾಮಕೃಷ್ಣರು ಸನಿಹದ ಜನರ ಬಡತನದಿಂದ ತೀವ್ರ ವಿಚಲಿತರಾಗಿ, ಅವರ ಹೊಟ್ಟೆ, ಬಟ್ಟೆಗಾಗಿ ಮಥುರ ಏನಾದರೂ ವ್ಯವಸ್ಥೆ ಮಾಡುವತನಕ ಆ ಜಾಗವನ್ನು ಬಿಡಲು ನಿರಾಕರಿಸಿದರು. ಮುಂದಿನ ಯಾತ್ರೆಗೆ ಹಣದ ಅಗತ್ಯವಿದ್ದುದರಿಂದ, ಮಥುರ ಪ್ರತಿಭಟಿಸಿದ; ಆದರೆ ಕಡೆಗೆ ಅವನು ಶ್ರೀರಾಮಕೃಷ್ಣರ ಒತ್ತಾಯಕ್ಕೆ ಮಣಿಯಬೇಕಾಯಿತು. ಸಮಸ್ತ ಮನುಕುಲದ ಬಗೆಗೆ ಶ್ರೀರಾಮಕೃಷ್ಣರಿಗಿದ್ದ ಅಸಾಧಾರಣ ಪ್ರೀತಿಯನ್ನು ಈ ಘಟನೆ ತೋರಿಸಿಕೊಡುತ್ತದೆ. ಅವರು ಹೇಳುತ್ತಿದ್ದರು: 'ಮನುಷ್ಯನನ್ನು ಶಿವನೆಂದೇ ತಿಳಿದು ಅವನಿಗೆ ಸೇವೆ ಸಲ್ಲಿಸಬೇಕು.' " (ಪು ೧೧- ೧೨) ಇಲ್ಲಿ 'ದಿಯೋಗರ್' ಎಂದು ಇಂಗ್ಲಿಷಿನ ರೂಪವನ್ನೇ

ಕನ್ನಡದಲ್ಲಿ ಬಳಸುವ ಬದಲು, ಆ ಸ್ಥಳದ ನಿಜವಾದ ಹೆಸರು 'ದೇವಘರ್' ಎಂದೇ ಇಟ್ಟಿದ್ದರೆ ಚೆನ್ನಾಗಿತ್ತು ಅನಿಸುತ್ತದೆ. 'ಅನನ್ಯ ಶ್ರೀರಾಮಕೃಷ್ಣ' ಎಂಬುದು ಸ್ವಾಮಿ ಸ್ವಾಹಾನಂದರ ಲೇಖನದ ಅನುವಾದ. ಇದರ ಶೈಲಿಯೂ ಸರಳ. ಆದರೆ ಮುಂದೆ ಬರುವ ಸ್ವಾಮಿ ಭಜನಾನಂದರ 'ಅವ್ಯಕ್ತ ಶ್ರೀರಾಮಕೃಷ್ಣ' ('Rama krishna, the Unknown') ಎಂಬ ಲೇಖನದ ಶೈಲಿ ಮಾತ್ರ ತದ್ವಿರುದ್ಧ. ಮೂಲ ಲೇಖನವೂ ಹಾಗೆಯೇ – ಅಲ್ಲಿನ ಚಿಂತನೆ, ಶೈಲಿ, ಭಾಷಾಭಿವ್ಯಕ್ತಿಗಳು ಗಂಭೀರ ಹಾಗೂ ಆಳವಾಗಿವೆ; ಅದಕ್ಕನು ಗುಣವಾಗಿ ಅನುವಾದ ಶೈಲಿಯೂ ದೀರ್ಘ ಪದ-ವಾಕ್ಯ ಪುಂಜ ಗಳಿಂದ ಕೂಡಿದ್ದು, ಸುಲಭಗ್ರಾಹ್ಯವಾಗಿಲ್ಲದೆ, ತುಸು ಪ್ರಯತ್ನ ಹಾಗೂ ಚಿಂತನೆಯನ್ನು ಬೇಡುತ್ತದೆ.

'ಶ್ರೀರಾಮಕೃಷ್ಣರ ಹಾಸ್ಯಪ್ರಜ್ಞೆ' ಎಂದು ಡಾ. ಸಿ.ಪಿ.ಕೆ. ಯವರ ಸ್ವಂತ ಬರಹ. ಲೇಖನದ ವಿಷಯವೇ ಕುತೂಹಲಕರ ವಾದುದು; ಶ್ರೀರಾಮಕೃಷ್ಣರ ಜೀವನ, ಸಂದೇಶಗಳಿಂದ ಆಯ್ದ ಹಲವು ಘಟನೆಗಳು ಹಾಗೂ ಪ್ರಸಂಗಗಳನ್ನು ವಿವರಿಸುತ್ತ, ಹಾಸ್ಯದ ಮೂಲಕವೂ ಆಧ್ಯಾತ್ಮಿಕ ವಿಚಾರಗಳನ್ನು ಮನಮುಟ್ಟು ವಂತೆ ತಿಳಿಸಿಕೊಡಬಹುದು ಎನ್ನುತ್ತಾರೆ ಲೇಖಕರು. 'ಕಥಾಮೃತ ವೇಕೆ ಅಷ್ಟು ಜನಪ್ರಿಯ?' ಎಂಬುದು ಸ್ವಾಮಿ ಸ್ವಾಹಾನಂದರ ಇನ್ನೊಂದು ಲೇಖನದ ಅನುವಾದ. 'ಶ್ರೀರಾಮಕೃಷ್ಣ ಸಂದೇಶ ಶ್ರೀ' ಲೇಖಕರ ಸ್ವಂತ ಲೇಖನ. 'ಶ್ರೀರಾಮಕೃಷ್ಣ ಚಳುವಳಿ' (ಅನುವಾದ) ಹಾಗೂ 'ಕವಿ-ಕಲಾವಿದ ಶ್ರೀರಾಮಕೃಷ್ಣ' – ಇವೆ ರಡೂ ಸಣ್ಣ ಲೇಖನಗಳು. ಕೃತಿಯ ಕೊನೆಯಲ್ಲಿ 'ಅವತಾರ ವರಿಷ್ಠ' ಎಂಬ ಕವಿತೆಯೂ ಇದೆ; ಈ ಸುನೀತವು ಪುಸ್ತಕದ ಹೂರಣವಾಗಿ, ಕೃತಿಯ ಆಭರಣವಾಗಿದೆ.

೨. 'ಶ್ರೀಶಾರದಾ ಸೌರಭ'

ಈ ಗ್ರಂಥವನ್ನೊಂದು ಸಂಕಲನ ಗ್ರಂಥವೆನ್ನಬಹುದು. ಲೇಖ ಕರು ಮುನ್ನುಡಿಯಲ್ಲಿ ಬರೆಯುತ್ತಾರೆ: 'ಇಲ್ಲಿ ಮೊದಲನೆಯದು ಮಾತ್ರ ನನ್ನದು; ಉಳಿದವು ಇತರ ಕೆಲವರು ಪೂಜ್ಯರ – ಮುಖ್ಯ ವಾಗಿ ಕುವೆಂಪು – ಬರಹಗಳು ಮತ್ತು ಕವನಗಳು.'' ಮೊದ ಲನೆಯದಾಗಿ ಬರುವ 'ಜೀವನ ವೃತ್ತ-ಸೂಕ್ತ' ವೆಂಬ ಲೇಖನವೇ ಪುಸ್ತಕದ ಅರ್ಧಭಾಗದಷ್ಟು ದೀರ್ಘವಾಗಿದೆ. ಶ್ರೀಮಾತೆ ಶಾರದಾ ದೇವಿಯವರ ಸಂಕ್ಷಿಪ್ತ ಜೀವನವನ್ನಿಲ್ಲಿ ನಿರೂಪಿಸಲಾಗಿದೆ. ಒಂದು ವಿಶೇಷವೇನೆಂದರೆ, ಲೇಖಕರು ಸಂಕ್ಷಿಪ್ತವಾಗಿ ಬರೆಯುವ ಬರಹ ಗಳೆಲ್ಲ ಅತ್ಯಂತ 'ಹಿತಮಿತಮೃದು ವಚನ'ವಾಗಿರುತ್ತವೆ; ಸರಳವೂ ಸುಲಭಗ್ರಾಹಿಯೂ ಆಗಿರುತ್ತವೆ! ಉದಾಹರಣೆಗೆ: ''ಶಾರದಾ ದೇವಿಯೆಂಬ ಮೊಗ್ಗು ಶ್ರೀರಾಮಕೃಷ್ಣರಿಂದ ಅರಳಿದ್ದು ನಿಜ; ಆದರೆ ಸೌರಭ ಅದರದೇ ಆಗಿತ್ತು, ಹುಟ್ಟಿನಿಂದ ಬಂದುದಾಗಿತ್ತು.'' (ಪು.೭). ಕೊನೆಯಲ್ಲಿ 'ಶಾರದಾಸೂಕ್ತ'ವಿದೆ. 'ಸೂಕ್ತ'ವೆಂದರೆ ವೈದಿಕ ಮಂತ್ರವಲ್ಲ, ಇಲ್ಲಿರುವುದು ಶ್ರೀಮಾತೆಯವರ ಉಪದೇಶ ಗಳ ಸಂಗ್ರಹ. ಮುಂದೆ ಕುವೆಂಪು ಅವರು ಶ್ರೀಮಾತೆಯವರನ್ನು ಕುರಿತು ಬರೆದ 'ಸುಮಧುರ, ಸುಪ್ರಶಾಂತ' ಎಂಬ ಲೇಖನ, 'ಕೃಪಾಮಯಿ' ಎಂಬ ಸ್ವಾಮಿ ಪುರುಷೋತ್ತಮಾನಂದರ ಲೇಖನ, 'ಸಂಜೀವಿನಿ' ಎಂಬ ಸ್ವಾಮಿ ಸೋಮನಾಥಾನಂದರ ಲೇಖನಗಳು ಸೇರ್ಪಡೆಯಾಗಿವೆ. ನಂತರ ಸ್ವಾಮಿ ವಿವೇಕಾನಂದರು ಹಾಗೂ ಸೋದರಿ ನಿವೇದಿತಾ ಇವರ ಎರಡು ಪತ್ರಗಳಿಂದ ಆಯ್ದ ಭಾಗ ಗಳನ್ನು ಕೊಡಲಾಗಿದೆ. ಇಲ್ಲಿ ಶ್ರೀಮಾತೆಯವರನ್ನು ಕುರಿತು ಅವರ ಭಾವನೆಗಳು ವ್ಯಕ್ತವಾಗಿವೆ. ಮುಂದೆ ಕುವೆಂಪು ಅವರ 'ಮಹಾ ಮಾತೆ' ಎಂಬ ಕವನ, ಡಾ. ಜಿ.ಎಸ್.ಶಿವರುದ್ರಪ್ಪ ಅವರ 'ಚಂದ್ರಿಕೆ' ಎಂಬ ಕವನ, ಲೇಖಕರೇ ಬರೆದ 'ತಂಬೆಳಕು' ಎಂಬ ಸುನೀತ ಕವನಗಳಿವೆ. ಇಂಥ ವೈವಿಧ್ಯಮಯವಾದ ರಚನೆಗಳು ಈ ಸಂಗ್ರ ಹದ ಶ್ರೀಮಾತೆಯವರ ಜೀವನ ಸಂದೇಶ ಹಾಗೂ ಅವರ ಮಹಿಮೆಯನ್ನು ಬಿಂಬಿಸುವಲ್ಲಿ ಅತ್ಯಂತ ಸಹಾಯಕವಾಗಿವೆ.

೩. 'ಸ್ವಾಮಿ ವಿವೇಕಾನಂದ ವಿವೇಚನೆ'

ಈ ಕೃತಿಯಲ್ಲಿ ಸ್ವಾಮಿ ವಿವೇಕಾನಂದರನ್ನು ಕುರಿತ ಆರು ಲೇಖನಗಳಿವೆ. ಮೊದಲಿಗೆ 'ಜೀವನ ಚರಿತ್ರೆ'. ಅದು ಲೇಖಕರ ಸ್ವಂತ ಬರಹ. ಕೇವಲ ಐದೇ ಪುಟಗಳ ಈ ಜೀವನ ಚರಿತ್ರೆ ಸ್ವಾಮೀಜಿ ಜೀವನದ ಒಂದು ಪಕ್ಷಿನೋಟ ಮಾತ್ರ. ಮುಂದಿನ ಲೇಖನಗಳೆಲ್ಲ ಸ್ವಾಮೀಜಿ ಜೀವನ, ಸಾಧನೆ, ಸಂದೇಶಗಳನ್ನು ಬಿತ್ತರಿಸುವ ವಿವಿಧ ಬರಹಗಳು. ಇವುಗಳಲ್ಲಿ ಎರಡು ಸ್ವಾಮಿ ಲೋಕೇಶ್ವರಾನಂದರ ಹಾಗೂ ಸ್ವಾಮಿ ತಥಾಗತಾನಂದರ ಲೇಖನ ಗಳ ಅನುವಾದ; 'ವಿವೇಕಾನಂದರನ್ನು ಕುರಿತು ಸುಭಾಷ್ ಚಂದ್ರ ಬೋಸ್' ಎಂಬ ಲೇಖನವೂ ಅನುವಾದ. ಉಳಿದಂತೆ 'ಸ್ವಾಮಿ ವಿವೇಕಾನಂದರು: ಹೊಸ ದೃಷ್ಟಿ-ಹೊಸ ಸೃಷ್ಟಿ', 'ಸಾಹಿತಿ, ಕಲಾ ವಿಮರ್ಶಕ ವಿವೇಕಾನಂದರು' ಲೇಖಕರ ಸ್ವಂತ ರಚನೆಗಳು. ಎರಡನೆಯ ಲೇಖನ ಸ್ವಾಮೀಜಿಯವರ ವ್ಯಕ್ತಿತ್ವದ ಕಲಾತ್ಮಕ ಮುಖವನ್ನು ಪರಿಚಯಿಸುತ್ತದೆ; ಜೊತೆಗೆ ಅವರ ಕಲೆ, ಸಾಹಿತ್ಯದ ಚಿಂತನೆ ನಡೆಸುತ್ತದೆ.

ಡಾ. ಸಿ.ಪಿ.ಕೆಯವರ ಈ ಮೂರೂ ಕೃತಿಗಳ ಸಾಮಾನ್ಯ ಲಕ್ಷಣವಿದು: ಸ್ವಂತ ಲೇಖನ ಹಾಗೂ ಅನುವಾದ ಇವೆರಡನ್ನೂ ಸೇರಿಸಿಕೊಂಡ ಸಂಕಲನಗಳಿವು. ಸ್ವತಂತ್ರ ಗ್ರಂಥವೊಂದರ ಕ್ರಮ ಬದ್ಧ ಜೋಡಣೆಯಾಗಲಿ, ಹಂತಹಂತವಾಗಿ ವಿವಿಧ ಅಧ್ಯಾಯ ಗಳೊಂದಿಗೆ ಬೆಳೆಯುತ್ತ ವಿಸ್ತರಿಸುತ್ತ ಹೋಗುವ ನಿರೂಪಣೆಯ ಕ್ರಮವಾಗಲೀ ಇಲ್ಲಿಲ್ಲ. ಈಗಾಗಲೆ ಸಿದ್ಧ ಮಾದರಿಯ ವ್ಯಕ್ತಿತ್ವಗಳಿಗೆ ಮೆರಗು ನೀಡುವ ಪ್ರಯತ್ನವೂ ಇಲ್ಲಿನದಲ್ಲ. ಏಕೆಂದರೆ ಮೂರೂ ಕೃತಿಗಳಲ್ಲಿ 'ಸಂಕ್ಷಿಪ್ತ ಜೀವನ'ವನ್ನು ನೀಡಲಾಗಿದೆ. ಆದ್ದರಿಂದ, ಹೊಸ ಓದುಗನೊಬ್ಬನಿಗೆ ನೆರವಾಗಬಲ್ಲ ರೀತಿಯಲ್ಲಿ ದಿವ್ಯ ತ್ರಯರ ಜೀವನ-ಉಪದೇಶ-ಆದರ್ಶಗಳನ್ನು ಈ ವೈವಿಧ್ಯ ಮಯ ಬರಹಗಳ ಮೂಲಕ ಬಿಂಬಿಸುವುದೇ ಲೇಖಕರ ಉದ್ದೇಶ ವೆನಿಸುತ್ತದೆ. ಒಟ್ಟಿನಲ್ಲಿ, ಹೊಸ ಓದುಗರಿಗೂ, ಈಗಾಗಲೇ ದಿವ್ಯ ತ್ರಯರ ಪರಿಚಯವಿರುವವರಿಗೂ ಉಪಯುಕ್ತ ಗ್ರಂಥಗಳಿವು.

ಕಾಶ್ಮೀರದ ಶೈವಭಕ್ತೆ ಲಲ್ಲೇಶ್ವರಿ

ಸ್ವಾಮಿ ವೀರೇಶಾನಂದ



ಕಾಶ್ಮೀರವು ಭಾರತದ ಕಿರೀಟಪ್ರಾಯವಾಗಿದೆ. ಪ್ರಕೃತಿದೇವಿ ಅಲ್ಲಿ ನಲಿದಾಡುತ್ತಿದ್ದಾಳೆ. ಸರಸ್ವತಿಯು ನೆಲೆಸಿರುವ ಬೀಡು ಇದು. ಶತಮಾನಗಳಿಂದ ಸಂಸ್ಕೃತ ವಾಙ್ಮಯಕ್ಕೆ ಅಪೂರ್ವ ಕಾಣಿಕೆಯನ್ನು ಕೊಟ್ಟ ಅಭಿನವ ಗುಪ್ತ ಮತ್ತು ಕಲ್ಹಣರಂಥ ಮಹಾನುಭಾವರ ಜನ್ಮಭೂಮಿ ಇದು. ಇದಲ್ಲದೆ ಕಾಶ್ಮೀರ ಶೈವತತ್ತ್ವವು ಇಲ್ಲಿಯೇ ಹುಟ್ಟಿ ಭಾರತದಲ್ಲೆಲ್ಲ ಜನಪ್ರಿಯವಾಯಿತು. ಮಧ್ಯಯುಗದಲ್ಲಿ ಇಸ್ಲಾಂ ಧರ್ಮದ ಸಂಪರ್ಕದಿಂದ ಕಾಶ್ಮೀರವು ಅನೇಕ ಸೂಫೀ ಸಂತರ ತಾಣವೂ ಆಯಿತು. ಹೀಗೆ ಹಿಂದೂ ಧರ್ಮ ಮತ್ತು ಇಸ್ಲಾಂ ಧರ್ಮದ ಸೂಫಿ ತತ್ತ್ವಗಳ ಅಪೂರ್ವ ಬೆಸುಗೆಯು ಕಾಶ್ಮೀರದ ಪುಣ್ಯಭೂಮಿಯಲ್ಲಿ ಆಯಿತು. ಇದರ ಫಲಶ್ರುತಿಯಾಗಿ ಲಲ್ಲೇಶ್ವರಿಯಂಥ ಮಹಾನ್ ಚೈತನ್ಯವೊಂದರ ಉಗಮವಾಯಿತು. ಕಾಶ್ಮೀರದ ಧಾರ್ಮಿಕ, ಆಧ್ಯಾತ್ಮಿಕ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷಿತಿಜದಲ್ಲಿ ಲಲ್ಲೇಶ್ವರಿಯು ಸೂರ್ಯನಂತೆ ಈಗಲೂ ಬೆಳಗುತ್ತಿದ್ದಾಳೆ. ಕಾಶ್ಮೀರಿ ಭಾಷೆಯ ಸಾಹಿತ್ಯದ ಆದಿಕವಿಯೆಂದು ಅವಳನ್ನು ಹಿಂದೂಗಳು ಮತ್ತು ಮುಸ್ಲಿಮರಿಬ್ಬರೂ ಗೌರವಿಸುತ್ತಾರೆ. ಆಕೆಯ ವಚನಗಳಲ್ಲಿನ (ವಾಖ್) ಚಮತ್ಕಾರದ ಮಾತುಗಳು ಇಂದಿಗೂ ಕಾಶ್ಮೀರಿ ಆಡುಭಾಷೆಯಲ್ಲಿ ನಾಣ್ಣುಡಿಗಳಾಗಿವೆ; ಅಲ್ಲಿನ ಜನರ ನಾಲಗೆಯಲ್ಲಿ ಇಂದಿಗೂ ನಲಿದಾಡುತ್ತಿವೆ. ನಮ್ಮ ಅಕ್ಕಮಹಾದೇವಿಯಂತೆ ಆಕಾಶವನ್ನೇ ತನ್ನ ಬಟ್ಟೆಯನ್ನಾಗಿ ಮಾಡಿಕೊಂಡಿದ್ದ ಅವಳಿಗೆ ಶಿವನೇ ಸರ್ವಸ್ವವೂ ಆಗಿದ್ದನು. ಆಕೆಯ ಪ್ರಕಾರ ಶಿವನು ಒಬ್ಬ ಪುರುಷ ದೇವತೆಯಲ್ಲ, ವಿಶ್ವವ್ಯಾಪಕ ತತ್ತ್ವ. ಎಲ್ಲವನ್ನೂ ಒಳಗೊಂಡಿರುವ ಚೈತನ್ಯ ಸ್ವರೂಪ. ಅಂಥ ಸರ್ವಾತ್ಮಕ ತತ್ತ್ವದ ಅನುಭೂತಿಯನ್ನು ಲಲ್ಲೇಶ್ವರಿಯು ಪಡೆದುಕೊಂಡಿದ್ದಳು. ಹೀಗೆ ಕಾಶ್ಮೀರ ಶೈವ ಸಿದ್ಧಾಂತಕ್ಕೆ ಅನುಭಾವಿಕ ತಳಹದಿಯನ್ನು ನೀಡಿ, ಅದನ್ನು ಸರ್ವವಂದಿತವನ್ನಾಗಿ ಮಾಡಿದಳು. ತನ್ನ ಶಿವತತ್ತ್ವದಂತೆ, ಕಾಶ್ಮೀರಿ ಸಂಸ್ಕೃತಿಯಲ್ಲಿ (ಕಾಶ್ಮೀರಿಯತ್) ಲಲ್ಲೇಶ್ವರಿಯು ಸರ್ವವ್ಯಾಪಿಯಾಗಿದ್ದಾಳೆ. ಸರ್ವಕಾಲಕ್ಕೂ ಪ್ರೇರಣೆ ನೀಡುವ ಜೀವಸೆಲೆಯಾಗಿದ್ದಾಳೆ. ಹಾಗೆಂದೇ ಎಲ್ಲ ಕಾಶ್ಮೀರಿ ಜನರಿಗೆ ಮೆಚ್ಚಿನ 'ಲಾಲ್ ಅಜ್ಜಿ' ಯಾಗಿದ್ದಾಳೆ.

ಜನನ ಮತ್ತು ಬಾಲ್ಯ

ಕಾಶ್ಮೀರದ ರಾಜಧಾನಿಯಾದ ಶ್ರೀನಗರಕ್ಕೆ ನಾಲ್ಕೂವರೆ ಮೈಲು ದೂರದಲ್ಲಿ ಪಂದ್ರೆಥಾನ್ (ಪದಮ್‌ಪುರ) ಎಂಬ ಗ್ರಾಮವೊಂದಿದೆ. ಅಲ್ಲಿನ ಕಾಶ್ಮೀರಿ ಪಂಡಿತ ಕುಟುಂಬವೊಂದರಲ್ಲಿ ಕ್ರಿ.ಶ. ೧೩೨೦ರಲ್ಲಿ ಲಲ್ಲೇಶ್ವರಿಯ ಜನ್ಮವಾಯಿತು. ಇನ್ನೊಂದು ಐತಿಹ್ಯದ ಪ್ರಕಾರ ಆಕೆಯ ಜನ್ಮವಾದದ್ದು ೧೩೫೫ರಲ್ಲಿ. ಬಾಲ್ಯದಲ್ಲಿಯೇ ಆಧ್ಯಾತ್ಮಿಕ ಪ್ರವೃತ್ತಿಯನ್ನು ಮೈಗೂಡಿಸಿ ಕೊಂಡಿದ್ದ ಇವಳಿಗೆ ಹನ್ನೆರಡು ವಯಸ್ಸಿನಲ್ಲಿಯೇ ಮದುವೆಯಾಯಿತು. ಗಂಡನ ಮನೆಗೆ ಬಂದ ಲಲ್ಲೇಶ್ವರಿಗೆ, ಅತ್ತೆಯ ಮನೆಯವರು 'ಪದ್ಮಾವತಿ' ಎಂದು ಹೆಸರಿಟ್ಟು ಕರೆಯಲಾರಂಭಿಸಿದರು. ಚಿಕ್ಕ ವಯಸ್ಸಿನ ಸೊಸೆಗೆ ಸಂಸಾರ ಸೌಖ್ಯ ದೊರಕಲಿಲ್ಲ. ಇನ್ನೊಬ್ಬ ಭಕ್ತೆಯಾದ ಸಕ್ಕೂಬಾಯಿಯಂತೆ, ಅತ್ತೆಯಿಂದ ಬೈಗುಳ, ಹೊಡೆತಗಳು ಅವಳಿಗೆ ದೊರೆತವು. ಅಲ್ಲದೆ ಎಳೆವಯಸ್ಸಿನ ಈ ಮುಗ್ಧ ಬಾಲಕಿಯನ್ನು ಉಪವಾಸಗೆಡವಿದಳು ಅತ್ತೆ. ಒಂದು ಕಲ್ಲು ಗುಂಡಿಗೆ ಅನ್ನವನ್ನು ಸವರಿ, ಅನ್ನದ ಉಂಡೆಯಂತೆ ಮಾಡಿ, ಅದನ್ನೇ ಕ್ರೂರಿ ಅತ್ತೆಯು ತನ್ನ ಮನೆ ಸೊಸೆಗೆ ನೀಡುತ್ತಿದ್ದಳಂತೆ. ಅಷ್ಟನ್ನೇ ಉಂಡು, ಭಗವಂತನನ್ನು ಸ್ಮರಿಸುತ್ತ ಶಾಂತವಾಗಿ ಇರುತ್ತಿದ್ದಳು ಲಲ್ಲೇಶ್ವರಿ. ಇದಲ್ಲದೆ ಅತ್ತೆಯು ತನ್ನ ಮಗನ ಹತ್ತಿರ ಅವಳ ವಿರುದ್ಧ ದೂರುತ್ತಿದ್ದಳು. ತನ್ನ ಗಂಡನ ಹತ್ತಿರವೂ ಲಲ್ಲೇಶ್ವರಿಯ ಬಗ್ಗೆ ಚಾಡಿ ಹೇಳುತ್ತಿದ್ದಳು.

ಒಂದು ದಿನ ಲಲ್ಲೇಶ್ವರಿಯು ನೀರಿನ ತೊರೆಯಿಂದ ಗಡಿಗೆಯಲ್ಲಿ ನೀರು ತರುತ್ತಿದ್ದಳು. ಗಂಡ ಹಠಾತ್ತಾಗಿ ದಾರಿಯಲ್ಲಿ ಬಂದನು. ಒಂದು ಕೋಲಿನಿಂದ ಗಡಿಗೆಯನ್ನು ಒಡೆದು ಚೂರು ಚೂರುಮಾಡಿಬಿಟ್ಟನು. ಆಶ್ಚರ್ಯವೆಂದರೆ ಗಡಿಗೆಯ ಚೂರುಗಳು ನೆಲಕ್ಕೆ ಬಿದ್ದವು. ಆದರೆ ನೀರು ಹಾಗೆಯೇ ಗಡಿಗೆಯ ರೂಪದಲ್ಲಿಯೇ ಘನೀಭೂತವಾಗಿಬಿಟ್ಟಿತು. ಈ ನೀರಿನಲ್ಲಿಯೇ ಲಲ್ಲೇಶ್ವರಿ ಮನೆಯಲ್ಲಿನ ಎಲ್ಲ ಗಡಿಗೆಗಳನ್ನೂ ತುಂಬಿಸಿದಳಂತೆ. ''ಅತ್ತೆಯಮ್ಮಾ, ಇನ್ನು ಯಾವುದಾದರೂ ಪಾತ್ರೆಗೆ ನೀರು ತುಂಬಿಸಬೇಕೇನು?'' ಎಂದು ಕೇಳಿದಳು. ಇಲ್ಲವೆಂದಾಗ, ಅದನ್ನು ಹೊರಕ್ಕೆ ಚೆಲ್ಲಿದಳು. ಇದೇ ಈಗ ಒಂದು ಕೆರೆಯಾಗಿದೆ. ಇದನ್ನು ಲಲ್ಲಾ ತ್ರಾಗ್ ಎಂದೇ ಕರೆಯುತ್ತಾರೆ.

ತನ್ನ ಗಂಡನ ಮನೆಯಲ್ಲಿ ತನಗೆಷ್ಟೇ ಕಷ್ಟವಾಗುತ್ತಿದ್ದರೂ, ಸಹನೆಯ ಬಾಳನ್ನು ಲಲ್ಲೇಶ್ವರಿ ಬಾಳಿದಳು. ತ್ಯಾಗ ಮತ್ತು ಶಿಸ್ತುಬದ್ಧ ನಡವಳಿಕೆಯನ್ನು ಪಾಲಿಸಿದಳು. ಇದು ಅತ್ಯಂತ ಅಪೂರ್ವವೇ ಸರಿ.

ಒಮ್ಮೆ ಹಬ್ಬದ ದಿವಸ. ಲಲ್ಲೇಶ್ವರಿ ನದಿಯಲ್ಲಿ ನೀರನ್ನು ತುಂಬಿಸಿಕೊಳ್ಳುತ್ತಿದ್ದಳು. ''ಮನೆಯಲ್ಲಿ ಏನು ವಿಶೇಷದ ಅಡುಗೆ?'' ಎಂದು ಆಕೆಯ ಸ್ನೇಹಿತೆಯರು ಕೇಳಿದರು. ಅದಕ್ಕೆ ಅವಳು ನೀಡಿದ ಉತ್ತರ ಕಾಶ್ಮೀರಿ ಭಾಷೆಯ ಒಂದು ನಾಣ್ಣುಡಿಯೇ ಆಗಿಬಿಟ್ಟಿದೆ. ''ಮನೆಯಲ್ಲಿ ಅಡುಗೆಗೆ ಕುರಿ ಕಡಿದರೇನು, ಕೋಳಿ ಕಡಿದರೇನು? ಲಲ್ಲಾಳಿಗೆ ಸಿಕ್ಕುವುದು ಬರೀ ಮರಳು.'' ಕೊನೆಗೊಮ್ಮೆ ಮನೆಯವರು ಕೊಡುತ್ತಿದ್ದ ಅಸಾಧ್ಯ ಕಿರುಕುಳವನ್ನು ತಾಳಲಾರದೆ ಮನೆ ಬಿಟ್ಟು ನಡೆದಳು ಲಲ್ಲೇಶ್ವರಿ.

ಮನೆಯಲ್ಲಿನ ತಾಪತ್ರಯ, ಅವಮಾನ ಹಾಗೂ ಹಿಂಸೆಗಳಿಂದ ಲಲ್ಲೇಶ್ವರಿಗೆ ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು. ಲಲ್ಲೇಶ್ವರಿ ತನ್ನ ಮನಸ್ಸನ್ನು ಅಂತರ್ಮುಖಗೊಳಿಸಿ, ಸಾಧನೆಯಲ್ಲಿ ನಿರತಳಾಗಲು ಅದು ಸಹಾಯ ಮಾಡಿತು. ಅವಳು ಏಕಾಂತದಲ್ಲಿ ಯೋಗಸಾಧನೆಯಲ್ಲಿ ತೊಡಗಿದಳು. ಶ್ರೀನಗರದ ಸಿದ್ಧ ಶ್ರೀಕಾಂತ ಎಂಬ ಮಹಾತ್ಮರೇ ಅವಳ ಗುರುಗಳಾಗಿದ್ದರು. ಕಾಶ್ಮೀರದ ಪ್ರಸಿದ್ಧ ತತ್ತ್ವಶಾಸ್ತ್ರಜ್ಞನಾದ ಅಭಿನವಗುಪ್ತನು ಹೀಗೆ ಹೇಳುತ್ತಾನೆ: 'ಇಂದ್ರಿಯಗಳನ್ನು ನಿಗ್ರಹಿಸಿದ ವ್ಯಕ್ತಿಯು ಪವಿತ್ರನಾಗಿರುತ್ತಾನೆ; ಎಲ್ಲರನ್ನೂ ಪವಿತ್ರ ಮಾಡುವ ತೀರ್ಥಕ್ಷೇತ್ರದಂತೆ ಇರುತ್ತಾನೆ.' ಲಲ್ಲೇಶ್ವರಿಯು ಈ ಹೇಳಿಕೆಯ ಸಾಕಾರರೂಪಳಾಗಿದ್ದಳು ಎನ್ನಬಹುದು. ಅವಳು ಕಾಶ್ಮೀರ ಶೈವಯೋಗದ ತತ್ತ್ವಗಳನ್ನು ಮತ್ತು ಸಿದ್ಧಾಂತಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದಳು. ಕಾಲಕ್ರಮೇಣ ಅವಳ ದಿವ್ಯಾನುಭವಗಳು ಹೆಚ್ಚು ಹೆಚ್ಚು ಉತ್ಕಟವಾಗುತ್ತ ಹೋದವು. ಅವಳು ಗಳಿಸಿಕೊಂಡ ಜ್ಞಾನರಾಶಿಯು ಹೆಚ್ಚು ಹೆಚ್ಚು ಗಭೀರವಾಗುತ್ತ ಹೋಯಿತು. ಇವೆಲ್ಲ ಲಲ್ಲೇಶ್ವರಿಯನ್ನು ಬಹು ಉನ್ನತ ದರ್ಜೆಯ ಯೋಗಿನಿಯನ್ನಾಗಿ ಪರಿವರ್ತಿಸಿದವು. ವೇದಾಂತದ ಪರಿಶುದ್ಧ ಜಲದಲ್ಲಿ ಅವಳು ಮಿಂದು ಪರಿಶುಭ್ರಳಾದಳು. ಉಪನಿಷತ್ತಿನ ಅಮೃತ ಕ್ಷೀರಧಾರೆಯನ್ನು ಸೇವಿಸಿ ಅಮರಳಾದಳು. ಲಲ್ಲೇಶ್ವರಿ ದೇವಿಯ ವ್ಯಕ್ತಿತ್ವದಲ್ಲಿ ಕಾಶ್ಮೀರ ಶೈವಾಗಮವು ಪುನರುಜ್ಜೀವನ ಹೊಂದಿತು. ಹೊಸ ಬೆಳಕನ್ನು ಕಂಡುಕೊಂಡಿತು; ಸರ್ವಮಾನ್ಯವಾಯಿತು.

ತನ್ನ ಅನುಭವವನ್ನು ಲಲ್ಲೇಶ್ವರಿಯು ತನ್ನ ಒಂದು ವಚನದಲ್ಲಿ ಹೀಗೆ ತೋಡಿಕೊಂಡಿದ್ದಾಳೆ:

ಶಿವನು ಎಲ್ಲೆಡೆ ಇರುವನು
ಸರ್ವವ್ಯಾಪಿಯು ಅವನು
ಹೀಗಿರಲು ಹಿಂದೂ ಮುಸಲ್ಮಾನರ ನಡುವೆ
ಅದೆಲ್ಲಿದೆ ಭೇದವು?
ಜಾಣನಾದರೆ ನೀನು, ನೀನಾರೆಂದು ತಿಳಿದುಕೋ
ಅದೇ ಭಗವಂತನ ಸಾಕ್ಷಾತ್ಕಾರ
ಎಂದರಿತು ಹಾಗೆ ನಡೆದುಕೋ.

ಲಲ್ಲೇಶ್ವರಿಯು ತನ್ನ ಗುರುವಾದ ಸಿದ್ಧ ಶ್ರೀಕಾಂತ ಗುರುಗಳ ಹತ್ತಿರ ವೇದಾಂತದ ವಿಚಾರವಾಗಿ ಚರ್ಚೆ ನಡೆಸುತ್ತಿದ್ದಳು. ಅಂಥ ಒಂದು ಸಂವಾದ ಹೀಗಿದೆ: ಲಲ್ಲೇಶ್ವರಿಯ ಗಂಡ ಶ್ರೀಕಾಂತ ಗುರುಗಳ ಹತ್ತಿರ ಬಂದನು. ತನ್ನ ಪತ್ನಿಯು ಮನೆಗೆ ಹಿಂತಿರುಗಬೇಕೆಂದು ಆದೇಶ ನೀಡಬೇಕೆಂದು ಕೇಳಿಕೊಂಡನು. ಈ ಮೂವರ ನಡುವೆ ಈ ಮಾತುಕತೆ ನಡೆಯಿತು :

ಪತಿಯ ವಚನ :

ಸೂರ್ಯನ ಬೆಳಕಿಗೆ ಸಮನಾದ ಜ್ಯೋತಿ ಯಾವುದೂ ಇಲ್ಲ
ಗಂಗಾಸ್ನಾನಕ್ಕೆ ಸಮನಾದ ತೀರ್ಥಯಾತ್ರೆ ಯಾವುದೂ ಇಲ್ಲ
ಸಹೋದರನಿಗೆ ಮಿಗಿಲಾದ ಬಂಧುವಿಲ್ಲ;
ಪತ್ನಿ ನೀಡುವ ಸುಖಕ್ಕಿಂತ ಹೆಚ್ಚಿನದು ಬೇರೆ ಇಲ್ಲ.

ಗುರು ಸಿದ್ಧ ಶ್ರೀಕಾಂತರ ವಚನ :

ಹಾಗಲ್ಲ, ಬೆಳಕೆಂದರೆ ಕಣ್ಣಿನ ಹೊಳಪಿಗೆ ಸಮವು
ಇಲ್ಲಿ ಯಾವ ತೀರ್ಥಯಾತ್ರೆಯೂ ಇಲ್ಲ;
ಇದ್ದರೆ ಅದು ಮಹಾತ್ಮನ ಪಾದಗಳೇ ಆಗಿವೆ
ಇಲ್ಲಿ ಯಾವ ಸುಖವೂ ಇಲ್ಲ ;
ಇದ್ದರೆ ಬೆಚ್ಚಗಿನ ಕಂಬಳಿಯ ಸುಖವೇ ಸುಖವದು.

ಲಲ್ಲೇಶ್ವರಿಯ ವಚನ :

ಪರಮಾತ್ಮ ಸತ್ಯಕ್ಕಿಂತ ಹಿರಿದಾದ ಬೆಳಕಿಲ್ಲ
ಭಗವತ್ಪ್ರೇಮಕ್ಕಿಂತ ಮಿಗಿಲಾದ ತೀರ್ಥಯಾತ್ರೆಯಿಲ್ಲ
ಭಗವಂತನಿಗಿಂತ ಪರಮಾಪ್ತ ಬಂಧು ಇನ್ನಾರಿಲ್ಲ.

ಲಲ್ಲೇಶ್ವರಿಗೆ ಗುರುಗಳ ಪೂರ್ಣ ಅನುಗ್ರಹ ಲಭ್ಯವಾಗಿತ್ತು. ಗುರು ಸಿದ್ಧ ಶ್ರೀಕಾಂತರು ಗುರು ಶಬಾದ್ (ಗುರುವಿನ ಆಶೀರ್ವಾದ) ಎಂಬ ದೀಕ್ಷೆಯನ್ನು ಅವಳಿಗೆ ನೀಡಿದರು. ಇದರಿಂದ

ಅವಳಲ್ಲಿ ಬಹಳ ಪರಿಣಾಮಕಾರಿಯಾದ ಆಧ್ಯಾತ್ಮಿಕ ಪರಿವರ್ತನೆ ಉಂಟಾಯಿತು. ಈ ವಿಷಯದಲ್ಲಿ ಲಲ್ಲೇಶ್ವರಿಯ ವಚನ ಹೀಗಿದೆ:

ನನ್ನ ಗುರು ನನಗೆ ನೀಡಿದರು ಗುರುದೀಕ್ಷೆಯಂದು
ವಜ್ರಾಘಾತದಂತೆ ಬಡಿಯಿತು ಅದು ನನ್ನ ಶಿರದ ಮೇಲೆ
ಅಜ್ಞಾನದ ಪರದೆ ಹರಿದು ಸಾಕ್ಷಾತ್ಕಾರದ ಬೆಳಕು ಬಂತು
ಆತ್ಮದ ಅನುಭಾವದಲಿ ಸ್ವತಂತ್ರನಾಗಿ ನರ್ತಿಸಿದೆ,
ಮನದುಂಬಿ ಬಂದು.

ತಾನು ಗುರೂಪದೇಶದಿಂದ ಪಡೆದ ಅನುಭೂತಿಯನ್ನು ಲಲ್ಲೇಶ್ವರಿ ಇನ್ನೂ ಹಲವಾರು ವಚನಗಳಲ್ಲಿ ಹೃದಯಂಗಮವಾಗಿ ಬಣ್ಣಿಸಿದ್ದಾಳೆ. ಇದೇ ಬಗೆಯ ಅನುಭವ ಮೀಮಾಂಸೆಯನ್ನು ಒಂದು ಶತಮಾನ ಕಳೆದ ನಂತರ ಹುಟ್ಟಿಬಂದ ಕಬೀರ, ರಾಮಾನಂದ, ಗುರು ನಾನಕ್ ಅವರ ವಚನಗಳಲ್ಲಿಯೂ ಕಾಣಬಹುದು. ಅವರೆಲ್ಲರೂ ಮಧ್ಯಕಾಲೀನ ಯುಗದ ಭಕ್ತಿ ಸಂಪ್ರದಾಯದ ಮೇರುಶಿಖರಗಳು ಎಂಬುದನ್ನು ನಾವು ನೆನಪಿನಲ್ಲಿಡಬೇಕು.

ಕಾಶ್ಮೀರಿ ಭಾಷೆಯ ಸಮೃದ್ಧತೆಗೆ ಲಲ್ಲೇಶ್ವರಿ ನೀಡಿದ ಕೊಡುಗೆ ಅಪಾರ. ಅವಳು ತನ್ನ ವಚನದಲ್ಲಿ ಉಪಯೋಗಿಸಿದ ನೂರಾರು ನಾಣ್ಣುಡಿಗಳು, ಒಗಟುಗಳು, ಆಗಿನ್ನೂ ಶೈಶವಾಸ್ಥೆಯಲ್ಲಿ ಇದ್ದ ಆ ಭಾಷೆಗೆ ನವಜೀವನವನ್ನೂ ಕ್ರಿಯಾಶೀಲತೆಯನ್ನೂ ದೊರಕಿಸಿಕೊಟ್ಟವು. ಹೀಗೆ ಕಾಶ್ಮೀರಿ ಭಾಷೆಯು ಸಂಪದ್ಭರಿತವಾಯಿತು. ಅವಳು ರೂಪಿಸಿದ ಅರ್ಥಗರ್ಭಿತವಾದ ನಾಣ್ಣುಡಿಗಳು ಅಧ್ಯಾತ್ಮ ಮತ್ತು ತಾತ್ತ್ವಿಕ ಚಿಂತನೆಗಳ ಗಂಭೀರತೆಯನ್ನು ಸಮರ್ಥವಾಗಿ ಪ್ರತಿಪಾದಿಸಲು ಶಕ್ತವಾದವು. ಕಾಶ್ಮೀರಿ ಜನತೆಯು ತಮ್ಮ ಭಾವನೆಗಳನ್ನು ಸಂವಹನ ಮಾಡಲು ಬಹಳ ಸಮರ್ಥವಾದ ಮಾಧ್ಯಮವನ್ನಾಗಿ ಕಾಶ್ಮೀರಿ ಭಾಷೆಯನ್ನು ರೂಪಿಸಿದವು.

ಲಲ್ಲೇಶ್ವರಿಯು ಹಿಂದೂಗಳು ಮತ್ತು ಮುಸ್ಲಿಮರು – ಇಬ್ಬರಿಗೂ ಪೂಜ್ಯಳಾಗಿದ್ದಾಳೆ. ಹಿಂದೂಗಳು ಅವಳನ್ನು ಲಲ್ಲೇಶ್ವರಿ ಎಂದು ಕರೆದರೆ, ಮುಸ್ಲಿಮರು ಅವಳನ್ನು ಲಲ್ಲಾ ಅರಿಫಾ ಎಂದು ಕರೆಯುತ್ತಿದ್ದರು. ಇಬ್ಬರಿಗೂ ಅವಳು ಮೆಚ್ಚಿನ ಲಾಲ್ ಡೆಡ್ (ಲಾಲ್ ಅಜ್ಜಿ) ಆಗಿದ್ದಳು.

ಲಲ್ಲೇಶ್ವರಿ ಒಬ್ಬ ಪರಿವ್ರಾಜಕ ಉಪದೇಶಕಿಯಾಗಿದ್ದಳು. ನಗ್ನಳಾಗಿಯೇ ಊರಿಂದ ಊರಿಂದ ಓಡಾಡುತ್ತಿದ್ದಳು. ಒಂದು ಊರಿನಲ್ಲಿ ಪೋಲಿ ಯುವಕರ ಗುಂಪೊಂದು ಅವಳನ್ನು ಅಪಹಾಸ್ಯಕ್ಕೆ ಈಡುಮಾಡಿತು. ಅವಳು ಅಪಮಾನಕ್ಕೆ ಒಳಗಾದಳು. ಒಬ್ಬ ಬಟ್ಟೆ ಮಾರುವ ವರ್ತಕ ಇದನ್ನು ನೋಡಿದ. ಧಾರ್ಮಿಕ ವ್ಯಕ್ತಿಯಾಗಿದ್ದ ಅವನು ಆ ಯುವಕರನ್ನು ಬಯ್ದು ಓಡಿಸಿದ. ಲಲ್ಲೇಶ್ವರಿ ಅವನ ಬಳಿ ಎರಡು ತುಂಡು ಬಟ್ಟೆ ಕೇಳಿದಳು. ಅವನ್ನು ತನ್ನ ಎರಡು ಕಂಕಳುಗಳಲ್ಲಿ ಇಟ್ಟುಕೊಂಡಳು. ಜನರು ತನ್ನನ್ನು ಹೊಗಳಿದಾಗ, ಒಂದು ಬಟ್ಟೆಗೆ ಒಂದು ಗಂಟು ಹಾಕುವಳು. ಜನರು ನಿಂದಿಸಿದಾಗ, ಇನ್ನೊಂದು ಬಟ್ಟೆಗೆ ಒಂದು ಗಂಟು ಹಾಕುವಳು. ಹೀಗೆ ಸಂಜೆಯ ತನಕ ಊರಲ್ಲೆಲ್ಲ ಓಡಾಡಿದಳು. ಕಡೆಗೆ ಆ ವರ್ತಕನ ಅಂಗಡಿಗೇ ವಾಪಸ್ಸು ಬಂದಳು. ಎರಡೂ ಬಟ್ಟೆಗಳನ್ನು ತೂಕ ಹಾಕುವಂತೆ ಹೇಳಿದಳು. ಅವುಗಳ ತೂಕದಲ್ಲಿ ಒಂದು ಸ್ವಲ್ಪವೂ ವ್ಯತ್ಯಾಸವಿರಲಿಲ್ಲ. ಹೀಗೆ ಸ್ತುತಿನಿಂದೆಗಳನ್ನು ಸಮಾನವಾಗಿ ಸ್ವೀಕರಿಸಬೇಕು ಎಂಬ ಪಾಠವನ್ನು ಆ ಬಟ್ಟೆ ವ್ಯಾಪಾರಿಗೆ ಮನಗಾಣಿಸಿದಳು. 'ತುಲ್ಯನಿಂದಾಸ್ತುತಿರ್ಮೌನೀ' ಎಂಬ ಗೀತಾವಾಕ್ಯದ ಸಾಕ್ಷಾತ್ ನಿದರ್ಶನವಾಗಿದ್ದಳು ಲಲ್ಲೇಶ್ವರಿ.

ಕಾಶ್ಮೀರದ ಅತ್ಯಂತ ಜನಪ್ರಿಯ ಧಾರ್ಮಿಕ ಮುಖಂಡಳಾದಳೂ, ಲಲ್ಲೇಶ್ವರಿಯ ಜೀವನದ ಬಗ್ಗೆ ನಮಗೆ ಗೊತ್ತಿರುವ ವಿಷಯಗಳು ಅತ್ಯಲ್ಪ. ತನ್ನ ಜೀವನದ ಅಂತ್ಯಕಾಲದಲ್ಲಿ ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿನ ಬಿಜ್ಬೆಹ್ರಾ ನಗರಕ್ಕೆ ಹೋದಳು. ಅಲ್ಲಿ ಅವಳು ದೇಹತ್ಯಾಗ ಮಾಡಿದಳು ಎಂಬ ಐತಿಹ್ಯವಿದೆ. ಅಂತ್ಯಸಂಸ್ಕಾರದ ವಿಷಯದಲ್ಲಿ ಹಿಂದೂಗಳು ಮತ್ತು ಮುಸ್ಲಿಮರ ಮಧ್ಯೆ ಘರ್ಷಣೆ ಏರ್ಪಟ್ಟಿತು. ಆಗ ಲಲ್ಲೇಶ್ವರಿಯ ಆತ್ಮವು ರುಂಡವನ್ನು ಒಂದು ಪಾತ್ರೆಯಿಂದ ಮತ್ತು ಮುಂಡವನ್ನು ಒಂದು ಪಾತ್ರೆಯಿಂದ ಮುಚ್ಚುವಂತೆ ಹೇಳಿತಂತೆ. ಹಾಗೆ ಮಾಡಿದಾಗ, ರುಂಡ ಮುಂಡಗಳು ಆ ಎರಡು ಪಾತ್ರೆಗಳಲ್ಲಿ ಅಡಗಿಹೋದವು. ಕಡೆಗೆ ಕೇವಲ ನೀರು ಮಾತ್ರ ಆ ಪಾತ್ರೆಗಳಲ್ಲಿ ಕಾಣಿಸಿಕೊಂಡಿತು. ಆ ಎರಡು ಪಾತ್ರೆಗಳನ್ನು ಹಿಂದೂಗಳು ಮತ್ತು ಮುಸ್ಲಿಮರು ಕೊಂಡೊಯ್ದು ತಮ್ಮ ತಮ್ಮ ಪದ್ಧತಿಯ ಪ್ರಕಾರ ಅಂತಿಮ ಸಂಸ್ಕಾರ ಮಾಡಿಕೊಂಡರು.

ಲಲ್ಲೇಶ್ವರಿಯು ಯಾವುದೇ ಒಂದು ನಿರ್ದಿಷ್ಟ ಧರ್ಮವನ್ನು ಬೋಧಿಸಲಿಲ್ಲ. ಯಾವುದೇ ಬಗೆಯ ಆಚರಣೆಯನ್ನೂ ಅವಳು ಉಪದೇಶಿಸಲಿಲ್ಲ. ಸಾಮರಸ್ಯದ ಜೀವನವನ್ನು ಅವಳು ಜನರಿಗೆ ಹೇಳಿಕೊಟ್ಟಳು. ಅವಳು ಬೋಧಿಸಿದ ಜೀವನಶೈಲಿಯು ಹಿಂದೂ, ಬೌದ್ಧ ಮತ್ತು ಇಸ್ಲಾಂ ಧರ್ಮಗಳ ಉತ್ತಮ ಅಂಶಗಳ ಸುಂದರ ಬೆಸುಗೆಯಾಗಿದೆ. ಜನರು ತಮ್ಮ ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು; ಗೌರವದಿಂದ ಘನತೆವೆತ್ತ ಜೀವನವನ್ನು ಬಾಳಬೇಕು ಎಂಬುದೇ ಲಲ್ಲೇಶ್ವರಿಯ ಸಂದೇಶವಾಗಿದೆ. ಅವಳ ಈ ಸಂದೇಶವು ಹಿಂದೂಗಳ ಮನಸ್ಸನ್ನು ಮಾತ್ರವಲ್ಲ, ಆಗಿನ ಕಾಲದ ಮುಸ್ಲಿಂ ಸಂತರ ಮನಸ್ಸನ್ನೂ ಸೂರೆಗೊಂಡಿತು. ಭಗವಂತನ ಮಕ್ಕಳನ್ನು ಒಬ್ಬನೇ ದೇವರ ಹೆಸರಿನಲ್ಲಿ ಭಾವನಾತ್ಮಕವಾಗಿ ಒಗ್ಗೂಡಿಸುವ ಮಹಾನ್ ಕಾರ್ಯವನ್ನು ಲಲ್ಲೇಶ್ವರಿ ಮಾಡಿದ್ದಾಳೆ ಎಂದು ಅವರ ಅಭಿಪ್ರಾಯವಾಗಿದೆ. ಕಾಶ್ಮೀರದ ಸೂಫಿ ಸಂತರಲ್ಲಿ ಅಗ್ರಗಣ್ಯರಾದ ಶೇಕ್ ನೂರ್ ಉದ್ದಿನ್ ನೂರಾನಿ ಈ ಕೆಳಗಿನ ಮಾತುಗಳ ಮೂಲಕ ಲಲ್ಲೇಶ್ವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಾರೆ: ''ಪದಮ್‌ಪುರದ ಲಲ್ಲಾ ಅಮೃತ ಧಾರೆಯ ಪ್ರವಾಹದ ಜೇನಿನ ಹನಿಗಳನ್ನು ಸವಿದಿದ್ದಾಳೆ. ಅಮರ ದಿವ್ಯತೆಯ ಅವತಾರಸ್ವರೂಪಳಾಗಿದ್ದಾಳೆ ಅವಳು. ಓ ಕರುಣಾಳು ಭಗವಂತನೇ, ನನಗೂ ಈ ವರವನ್ನು ನೀಡು.''

ಗಣೇಶ ಮತ್ತು ಆತ್ಮಲಿಂಗ

ಕಥೆ : ಟಿ.ಎಂ.ಎಸ್. **ಚಿತ್ರ: ಶಂಕರ್**

1 ವೀರಾಧಿವೀರನಾಗಬೇಕೆಂದು ರಾವಣನು ಹಲವು ಬಗೆಯ ತಪಸ್ಸುಗಳನ್ನು ಆಚರಿಸಿದನು. ಅವನ ತಪಸ್ಸಿಗೆ ಮೆಚ್ಚಿದ ಶಿವನು ಅವನ ಮುಂದೆ ಪ್ರತ್ಯಕ್ಷನಾದನು.






3 ರಾವಣನು ಲಂಕೆಯಲ್ಲಿ ಶಿವನ ಆತ್ಮಲಿಂಗವನ್ನು ಸ್ಥಾಪಿಸಿದರೆ, ಅವನನ್ನು ಯಾರಿಂದಲೂ ಸೋಲಿಸಲಾಗದು ಎಂದು ತಿಳಿದ ದೇವತೆಗಳೆಲ್ಲರೂ ವಿಘ್ನನಿವಾರಕ, ದುಷ್ಟವಿನಾಶಕ ವಿನಾಯಕನ ಬಳಿಗೆ ಹೋದರು. ಎಲ್ಲ ವಿಷಯವನ್ನೂ ತಿಳಿಸಿ ಅವನನ್ನು ಪ್ರಾರ್ಥಿಸಿದರು.



4 ರಾವಣನು ಆತ್ಮಲಿಂಗವನ್ನು ಕೈಯಲ್ಲಿ ಹಿಡಿದುಕೊಂಡು ಲಂಕೆಯತ್ತ ಹೊರಟ. ಅವನು ಸಂಧ್ಯಾವಂದನೆ ಮಾಡಬೇಕಾದ ಸಮಯವಾಯಿತು. ಆತ್ಮಲಿಂಗವನ್ನು ನೆಲದ ಮೇಲೆ ಇಡಬಾರದಲ್ಲ! ಸ್ವಲ್ಪ ಹೊತ್ತು ಅದನ್ನು ಕೈಯಲ್ಲಿ ಹಿಡಿದುಕೊಂಡಿರಲು ಯಾರಾದರೂ ಸಿಗುತ್ತಾರೋ ಎಂದು ಸುತ್ತಮುತ್ತ ನೋಡಿದ. ಆಗ ಅಲ್ಲಿ ಗಣೇಶನು ಒಬ್ಬ ಬಾಲಕನ ರೂಪದಲ್ಲಿ ಕಾಣಿಸಿಕೊಂಡ.




ರಾವಣ ಸಂಧ್ಯಾವಂದನೆಗೆಂದು ಹೋಗಿ ಬರುವಷ್ಟರಲ್ಲೇ ಆ ಬಾಲಕ ರಾವಣನನ್ನು ಮೂರು ಬಾರಿ ಕರೆದ. ರಾವಣನಿಗೆ ಅಷ್ಟರೊಳಗೆ ಬರಲಾಗಲಿಲ್ಲ. ಗಣೇಶನು ಆತ್ಮಲಿಂಗವನ್ನು ನೆಲದ ಮೇಲೆ ಇಟ್ಟೇಬಿಟ್ಟ. ರಾವಣ ಬಂದ ಮೇಲೆ ಅದನ್ನು ಮೇಲಕ್ಕೆತ್ತಲು ತನ್ನ ಶಕ್ತಿಯೆಲ್ಲವನ್ನೂ ಹಾಕಿ ಪ್ರಯತ್ನಿಸಿದ. ಆದರೆ ಅದು ಸಾಧ್ಯವಾಗಲಿಲ್ಲ.




ರಾವಣನು ತನ್ನ ಶಕ್ತಿಯೆಲ್ಲವನ್ನೂ ಹಾಕಿ ಎಳೆದದ್ದರಿಂದ ಆ ಲಿಂಗದ ಆಕಾರ ಗೋವಿನ ಕಿವಿಯಂತೆ ಮಾರ್ಪಟ್ಟಿತು. ಆದ್ದರಿಂದ ಶಿವನ ಆತ್ಮಲಿಂಗವು ನೆಲೆಗೊಂಡ ಆ ಪ್ರದೇಶವನ್ನೇ 'ಗೋಕರ್ಣ' ಎಂದು ಕರೆಯಲಾಯಿತು. (ಈ ಪ್ರದೇಶ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿದೆ.)


7 ಗಣೇಶನಿಗೆ ಸಂಬಂಧಪಟ್ಟ ಇಂಥದೇ ಇನ್ನೊಂದು ಕಥೆಯಿದೆ. ರಾಮನು ತನ್ನ ವನವಾಸವನ್ನು ಮುಗಿಸಿ ಹಿಂದಿರುಗಿ ಬಂದ. ಬಳಿಕ ಅವನ ಪಟ್ಟಾಭಿಷೇಕ ನಡೆಯಿತು. ತನ್ನೊಂದಿಗೆ ಬಂದ ಅತಿಥಿಗಳೆಲ್ಲರಿಗೂ ಕಾಣಿಕೆಗಳನ್ನು ನೀಡಿದ ರಾಮ ಅವರನ್ನೆಲ್ಲ ಕಳುಹಿಸಿಕೊಟ್ಟ. ಕೊನೆಗೆ ವಿಭೀಷಣನನ್ನು ಕರೆದ.





ವಿಭೀಷಣನು ಶ್ರೀರಂಗನಾಥನ ಮೂರ್ತಿಯೊಂದಿಗೆ ಶ್ರೀರಂಗಕ್ಕೆ ಬಂದನು. ಅಲ್ಲಿ ಗಣೇಶನ ಪ್ರೇರಣೆಯಂತೆ, ಕಾವೇರೀನದಿಯಲ್ಲಿ ಸ್ನಾನ ಮಾಡಬೇಕೆಂಬ ಬಯಕೆ ಅವನ ಮನಸ್ಸಿನಲ್ಲಿ ಮೂಡಿತು. ಕೈಯಲ್ಲಿದ್ದ ಮೂರ್ತಿಯನ್ನು ಏನು ಮಾಡಲಿ ಎಂದು ಅವನು ಯೋಚಿಸುತ್ತಿರುವಷ್ಟರಲ್ಲಿ ಅಲ್ಲೊಬ್ಬ ಬ್ರಹ್ಮಚಾರಿ ಕಾಣಿಸಿಕೊಂಡ.


9
ಮಗೂ, ನೀನು ಸರಿಯಾದ ಸಮಯಕ್ಕೆ ಬಂದೆ. ಈ ದೇವಾಲಯ ಶಿಖರವನ್ನು ಸ್ವಲ್ಪ ಕಾಲ ಹೊತ್ತುಕೋ. ನಾನು ಸ್ನಾನ ಮಾಡಿ, ಅರ್ಘ್ಯ ನೀಡಿ ಬರುತ್ತೇನೆ.
ರಾಜ, ನಾನಿನ್ನೂ ಚಿಕ್ಕವನು. ಇಷ್ಟೊಂದು ಭಾರದ ವಸ್ತುವನ್ನು ಹೆಚ್ಚು ಹೊತ್ತು ಹೊತ್ತಿರಲು ನನ್ನಿಂದಾಗದು. ನಾನು ಮೂರು ಸಲ ಕರೆಯುತ್ತೇನೆ. ಅಷ್ಟರೊಳಗಾಗಿ ನೀನು ಎಲ್ಲ ಮುಗಿಸಿ ಬರಬೇಕು. ಇಲ್ಲದಿದ್ದರೆ ಅದನ್ನು ನೆಲದ ಮೇಲಿಟ್ಟು ಬಿಡುತ್ತೇನೆ.
ಆಗಲಿ, ಬೇಗ ಬರುತ್ತೇನೆ. ನೆಲದ ಮೇಲೆ ಮಾತ್ರ ಇಡಬೇಡ.
10 ವಿಭೀಷಣನು ಕಾವೇರೀ ನದಿಯಲ್ಲಿ ತುಂಬ ಹೊತ್ತು ಸ್ನಾನ ಮಾಡುತ್ತ ಕಾಲಕಳೆದ. ಆಗ ...
ರಾಜ, ಈ ಶಿಖರ ತುಂಬ ಭಾರವಾಗಿದೆ. ರಾಜ, ರಾಜ ...
ವಿಭೀಷಣನಿಗೆ ಬ್ರಹ್ಮಚಾರಿಯ ಕೂಗು ಕೇಳಿಸಲಿಲ್ಲ. ಶಿಖರವನ್ನು ಆತ ಕಾವೇರಿ ಇಬ್ಭಾಗವಾಗಿ ಹರಿಯುತ್ತಿದ್ದ ಸ್ಥಳದಲ್ಲೇ ಇಟ್ಟುಬಿಟ್ಟ.
11 ಸ್ನಾನ ಮಾಡಿ ಹಿಂದಿರುಗಿದ ವಿಭೀಷಣ ...
ಅಯ್ಯೋ ಅದನ್ನು ನೆಲದ ಮೇಲೆ ಇಡಬೇಡ ಎಂದಿದ್ದೆನಲ್ಲಾ !
ನಾನೇನು ಮಾಡಲಿ, ರಾಜ! ಅದರ ಭಾರವನ್ನು ನನ್ನಿಂದ ತಡೆಯಲಾಗಲಿಲ್ಲ. ನಿನ್ನನ್ನು ಮೂರು ಬಾರಿ ಕರೆದೆ. ಆದರೆ ನೀನು ಬರಲಿಲ್ಲ.
ವಿಭೀಷಣನು ಆ ಶಿಖರವನ್ನು ಕದಲಿಸಲು ಎಷ್ಟು ಪ್ರಯತ್ನಿಸಿದರೂ ಅದು ಅಲುಗಾಡಲಿಲ್ಲ. ಅವನು ಬ್ರಹ್ಮಚಾರಿಯ ಬಳಿಗೆ ಹೋಗಿ ಅವನನ್ನು ಹೊಡೆಯಲು ಮುಂದಾದ. ಆ ಹುಡುಗ ಪರ್ವತದ ಬಳಿಗೆ ವೇಗವಾಗಿ ಓಡಿದ. ಕೊನೆಗೂ ಅವನ ಹಿಂದೆ ಓಡಿ ಹೋಗಿ, ಅವನನ್ನು ಹಿಡಿದ ವಿಭೀಷಣ, ಅವನ ತಲೆಗೊಂದು ಏಟು ಹಾಕಿದ.
12 ತುಂಟ ಹುಡುಗ! ನಿನ್ನನ್ನು ಹಿಡಿದುಬಿಟ್ಟೆ.
ಆ ಕೂಡಲೇ ಆ ಬ್ರಹ್ಮಚಾರಿ ಅವನಿಗೆ ತನ್ನ ನಿಜ ಸ್ವರೂಪವನ್ನು ತೋರಿಸಿ, ಗಣೇಶನಾಗಿ ಅವನ ಎದುರು ನಿಂತುಬಿಟ್ಟ. ವಿಭೀಷಣನು ಕೊಟ್ಟ ಏಟಿನಿಂದಾದ ಗುರುತು ತಿರುಚಿಯಲ್ಲಿರುವ ‘ಉಚ್ಚಿ ಪಿಳ್ಳೆಯಾರ್ ಕೋಟೆ’(ಬಂಡೆಗಳ ಕೋಟೆ)ಯಲ್ಲಿ ಇಂದಿಗೂ ಕಾಣಬಹುದು ಎನ್ನುತ್ತಾರೆ.




ಇಂದಿಗೂ ಪ್ರತಿದಿನ ವಿಭೀಷಣನು ಶ್ರೀರಂಗಂ ದೇವಾಲಯಕ್ಕೆ ಬಂದು ಶ್ರೀರಂಗನಾಥನನ್ನು ಪೂಜಿಸುತ್ತಾನೆ ಎಂಬ ನಂಬಿಕೆ ಪ್ರಚಲಿತವಾಗಿದೆ.

''ಭಗವಂತನು ತನ್ನ ಕೃಪೆಯಿಂದಲೇ ತನ್ನ ನಿಜಸ್ವರೂಪವನ್ನು ತೋರಿಸಿಕೊಡುತ್ತಾನೆ. ಅವನು ಜ್ಞಾನ ಸೂರ್ಯನಾಗಿದ್ದಾನೆ. ಅವನ ಅರಿವಿನ ಒಂದೊಂದು ಕಿರಣವೂ ಜಗತ್ತಿನ ಅರಿವನ್ನು ನಮಗೆ ನೀಡುವುದು. ಅವನ ಮೂಲಕವೇ ನಮಗೆ ಎಲ್ಲ ಬಗೆಯ ಜ್ಞಾನ ಬಂದೊದಗುವುದು. ಸಾರ್ಜೆಂಟನು ರಾತ್ರಿ ಹೊತ್ತು ನಡೆದಾಡುವಾಗ ಅವನ ಮುಖ ಕಾಣಿಸದು. ಲಾಟೀನನ್ನು ಮೇಲಕ್ಕೆತ್ತಿ , ಬೆಳಕನ್ನು ತನ್ನ ಮುಖದ ಮೇಲೆ ಬೀರಿದರೆ ಮಾತ್ರ ನಾವು ಅವನನ್ನು ನೋಡ ಬಹುದು. ಅದೇ ರೀತಿ ಭಗವಂತನು ತನ್ನನ್ನು ತಾನೇ ತೋರಿಸಿಕೊಟ್ಟರೆ ಮಾತ್ರ ನಾವು ಅವನನ್ನು ಕಾಣಬಹುದು.''

– ಶ್ರೀರಾಮಕೃಷ್ಣರು









ವಿಶಾಖಪಟ್ಟಣ ರಾಮಕೃಷ್ಣ ಮಿಷನ್ ಆಶ್ರಮದ ಕಾರ್ಯಕ್ರಮಗಳು

ಶೈಕ್ಷಣಿಕ ಕಾರ್ಯಾಗಾರ: ಸೋದರಿ ನಿವೇದಿತಾ ಅವರ ೧೫೦ನೇ ಜನ್ಮ ಮಹೋತ್ಸವದ ಆಚರಣೆಯ ಸಲುವಾಗಿ ವಿಶಾಖಪಟ್ಟಣಂ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಸೆಪ್ಟೆಂಬರ್ ೨೦ರಿಂದ ೨೩ರ ವರೆಗೆ **ಶೈಕ್ಷಣಿಕ ಕಾರ್ಯಾಗಾರವು** ನಡೆಯಿತು. ದಿನಾಂಕ ೨೦ರಂದು ಈ ಕಾರ್ಯಾಗಾರವನ್ನು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಲ್ಲಿ ಒಬ್ಬರಾದ **ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್** ಅವರು ಉದ್ಘಾಟಿಸಿದರು. ಅಧ್ಯಾಪಕರಿಗಾಗಿ ನಡೆದ ಒಂದು ದಿನದ ವಿಚಾರ ಸಂಕಿರಣದಲ್ಲಿ ಸುಮಾರು ೩೫೦ ಮಂದಿ ಅಧ್ಯಾಪಕರು ಭಾಗವಹಿಸಿದರು. ಅನಂತರ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ನಡೆದ **ಯುವ ಸಮ್ಮೇಳನ ಶಿಬಿರದಲ್ಲಿ** ಸುಮಾರು ೧೫೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ದಿನಗಳಲ್ಲಿ ಪ್ರಸಿದ್ಧ ವಾಗ್ಮಿಗಳು ನೆರೆದ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ವಿವಿಧ ಯುವ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆದವು.

ವಸ್ತುಪ್ರದರ್ಶನದ ಉದ್ಘಾಟನೆ: ೨೦೧೭ರ ಸೆಪ್ಟೆಂಬರ್ ೧೮ರಂದು ಸಮಗ್ರವಾಗಿ ನವೀಕರಣಗೊಳಿಸಿದ ದಿವ್ಯತ್ರಯರ ಸಣ್ಣಗಾತ್ರದ ಬೊಂಬೆ ಪ್ರದರ್ಶನದ ಉದ್ಘಾಟನೆಯನ್ನು ಶ್ರೀಮತ್ ಸ್ವಾಮಿ ಗೌತಮಾನಂದಜಿ ಯವರು ನೆರವೇರಿಸಿದರು. ಈ ಪ್ರದರ್ಶನವನ್ನು ೧೯೯೭ರಲ್ಲಿ ಆರಂಭಿಸಲಾಗಿತ್ತು. ಪಶ್ಚಿಮ ಬಂಗಾಳದ ಕೃಷ್ಣನಗರದ ಕಲಾವಿದರು ಈ ಬೊಂಬೆಗಳನ್ನು ತಯಾರಿಸಿದ್ದರು. ಈ ಬಾರಿ ಆ ಕಲಾವಿದರಿಂದಲೇ ಇದರ ನವೀಕರಣವನ್ನು ಮಾಡಿ, ಹೊಸ ಮೆರಗನ್ನು ನೀಡಲಾಯಿತು.

ಮಂಗಳೂರು ರಾಮಕೃಷ್ಣ ಮಠದಲ್ಲಿ ೩ ದಿನಗಳ ವಿಚಾರ ಸಂಕಿರಣ

ಸ್ವಾಮಿ ವಿವೇಕಾನಂದರ ಚಿಕಾಗೋ ಉಪನ್ಯಾಸಗಳ ೧೨೫ನೇ ವರ್ಷದ ಸಂಸ್ಮರಣಾರ್ಥ ಮಂಗಳೂರು ರಾಮಕೃಷ್ಣ ಮಠವು ಮೂರು ದಿನಗಳ ವಿಚಾರ ಸಂಕಿರಣ **'ಪ್ರಜ್ಞಾ-ಶ್ರದ್ಧಾ-ಮೇಧಾ'**ವನ್ನು ಸೆಪ್ಟೆಂಬರ್ ೭ ರಿಂದ ೯ರ ವರೆಗೆ ಏರ್ಪಡಿಸಿತ್ತು. ಕಾಲೇಜು ಅಧ್ಯಾಪಕರಿಗಾಗಿ, ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಹಾಗೂ ಬಿ.ಎಡ್. ವಿದ್ಯಾರ್ಥಿಗಳಿಗಾಗಿ ನಡೆಸಲಾದ ಈ ಸಂಕಿರಣಗಳಲ್ಲಿ ಸುಮಾರು ೧೩೦೦ ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕರ್ನಾಟಕ ಸರ್ಕಾರದ ಯುವ ಹಾಗೂ ಕ್ರೀಡಾ ಸಚಿವರಾದ ಶ್ರೀ ಪ್ರಮೋದ್ ಮಧ್ವರಾಜ್ ಅವರು ಸೆಪ್ಟೆಂಬರ್ ೮ರಂದು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಈ ಸಂಕಿರಣಗಳಲ್ಲಿ ಸ್ವಾಮಿ ಶಾಂತಾತ್ಮಾನಂದಜಿ, ಶ್ರೀ ವಿ.ಶ್ರೀನಿವಾಸ್ ಪ್ರೊ.ರಘೋತ್ತಮ್ ರಾವ್, ಸ್ವಾಮಿ ಆತ್ಮಜ್ಞಾನಂದಜಿ, ಕಜಂಪಾಡಿ ಸುಬ್ರಹ್ಮಣ್ಯ ಭಟ್, ಸುರೇಶ್ ಕುಲಕರ್ಣಿ ಹಾಗೂ ಶ್ರೀಮತಿ ಚಿಂತನಾ ರಾಜೇಶ್ ಮೊದಲಾದ ಗಣ್ಯರು ವಿಷಯಮಂಡನೆ ಮಾಡಿ ಮಾತನಾಡಿದರು. ಶಿಬಿರಾರ್ಥಿಗಳಿಗೆ ಭೋಜನವ್ಯವಸ್ಥೆ ಹಾಗೂ ಪುಸ್ತಕ, ಪ್ರಮಾಣಪತ್ರಗಳ ವಿತರಣಾ ವ್ಯವಸ್ಥೆ ಮಾಡಲಾಗಿತ್ತು.







Managing Editor : Swami Atmajnananda Editor : Swami Jnanayogananda

Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020



ಆರ್ಕಿಡ್ ಟ್ರಾವೆಲ್ & ಟೂರ್ಸ್

Orchid
Travel & Tours

ದುಬೈ ಗೋಲ್ಡ್ ಶಾಪಿಂಗ್ ಫೇಸ್ಟಿವಲ್ – 2018

5 ದಿನಗಳ ದುಬೈ, ಅಬುಧಾಬಿ, ಶಾರ್ಜ ಪ್ರವಾಸ

ದುಬೈ ಸಿಟಿ ಟೂರ್, ಬುರ್ಜ್ ಖಲೀಫಾ, ಡೌ ಕ್ರೂಸ್, ಡೆಸರ್ಟ್ ಸಫಾರಿ
ಅಬುಧಾಬಿ ಸಿಟಿ ಟೂರ್, ಶಾರ್ಜ ಸಿಟಿ ಟೂರ್ ಹಾಗೂ ಇತರೆ.



ದುಬೈ

8 ದಿನಗಳ ಕಾಂಬೋಡಿಯ – ಥೈಲ್ಯಾಂಡ್ ಪ್ರವಾಸ

ಕಾಂಬೋಡಿಯ – ಸಿಯಾಮ್‌ರಿಪ್, ಅಂಕೊರ್‌ವಾಟ್,
ತೋಂಲ್ಲೇ ಸ್ಯಾಪ್ ಸರೋವರ, ತಾಪ್ರಾಮ್, ಬಯಾನ್, ಬಪೂನ್ ದೇವಾಲಯಗಳು,
ಥೈಲ್ಯಾಂಡ್ – ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ
ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್



ಕಾಂಬೋಡಿಯಾ

10 ದಿನಗಳ ಸಿಂಗಾಪುರ–ಮಲೇಶಿಯ–ಥೈಲ್ಯಾಂಡ್ ಪ್ರವಾಸ

ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್ ಜೊತೆಗೆ ಸಿ ಅಕ್ವೇರಿಯಂ,
ವಿಂಗ್ಸ್ ಆಫ್ ಟೈಮ್, ಜುರೋಂಗ್ ಬರ್ಡ್‌ಪಾರ್ಕ್, ಯುನಿವರ್ಸಲ್ ಸ್ಟುಡಿಯೋ
ಮಲೇಶಿಯ : ಕೌಲಾಲಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ,
ಜಂಟಿಂಗ್ ಹೈಲ್ಯಾಂಡ್, ಕೆ.ಎಲ್. ಟವರ್
ಥೈಲ್ಯಾಂಡ್ – ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ
ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್



ಸಿಂಗಾಪುರ್

5 ದಿನಗಳ ಬಾಲಿ – ಇಂಡೋನೇಷಿಯಾ ಪ್ರವಾಸ

6 ದಿನಗಳ ಶ್ರೀಲಂಕಾ ಪ್ರವಾಸ

ರಾಮಾಯಣ ಕಾಲದ ಸ್ಥಳ ವೀಕ್ಷಣೆ

ಕೊಲೊಂಬೊ, ನೆಗೆಂಬೊ, ಕ್ಯಾಂಡಿ, ಡಾಂಬುಲಾ, ಸೀತಾ ಅಶೋಕವನ,
ಹನುಮಾನ್ ದೇವಸ್ಥಾನ ಹಾಗೂ ಶ್ರೀಲಂಕಾ ಸಾಂಸ್ಕೃತಿಕ ಕಾರ್ಯಕ್ರಮಗಳು



ಶ್ರೀಲಂಕಾ

ಹಿರಿಯರಿಗೆ ವಿಶೇಷ ರಿಯಾಯಿತಿ ದರದಲ್ಲಿ ಅಮೆರಿಕಾ ಪ್ರವಾಸ–2018

13 ದಿನಗಳ ಅಮೇರಿಕಾ ಪ್ರವಾಸ

ಪ್ರವಾಸ ಸ್ಥಳ : ನ್ಯೂಯಾರ್ಕ್, ವಾಷಿಂಗ್ಟನ್, ನಯಾಗರ ಫಾಲ್ಸ್, ಲಾಸ್‌ವೆಗಾಸ್, ಲಾಸ್ ಏಂಜಲೀಸ್, ಸ್ಯಾನ್‌ಫ್ರಾನ್ಸಿಸ್‌ಕೋ



ಅಮೆರಿಕಾ

ಪ್ರಧಾನ ಕಛೇರಿ : ಬಸವನಗುಡಿ
ನಂ. 98, 1ನೇ ಮಹಡಿ, ಡಿವಿಜಿ ರಸ್ತೆ
ಬಸವನಗುಡಿ, ಬೆಂಗಳೂರು – 560004.
ಫೋನ್: 080-26670646, 26621983
ಮೊಬೈಲ್ : 9900080799, 9900080793

ಶಾಖಾ ಕಛೇರಿ : ಮಲ್ಲೇಶ್ವರಂ
ನಂ.198, 1ನೇ ಮಹಡಿ, 11ನೇ ಕ್ರಾಸ್, ಯತಿರಾಜಮಠ
ಬಿಲ್ಡಿಂಗ್, ಮಲ್ಲೇಶ್ವರಂ, ಬೆಂಗಳೂರು – 560003.
ಫೋನ್: 080-23445559
ಮೊಬೈಲ್ : 9900080794

www.orchidtours.net

VIVEKA PRABHA (KANNADA MONTHLY)
November 2017, Vol.18, No.11, No.of pages : 44

Registered With Registrar of News Papers Of India under 72356/2000.postal Regn.No.KA/SK/MYS/480/ 2015-17. LICENCED TO POST W.P.P.AT YADAVAGIRI MYSORE 570 020,VIDE LICENCE NO.SK/WPP/MYS/155/2015-17



Printed at mayur graphics,Bangalore